ಸಂಪುಟ: 05 ಸಂಚಿಕೆ: 218 ಪುಟಗಳು: 08 ಗುರುವಾರ 23 ಅಕ್ಟೋಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಜೀವನದಲ್ಲಿ ಒಮ್ಮೆಯಾದರೂ ನಿಮ್ಮೊಂದಿಗೆ ಮಾತನಾಡಿ. ಇಲ್ಲವಾದಲ್ಲಿ ವಿಶ್ವದ ಅತ್ಯುತ್ತಮ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶದಿಂದ ವಂಚಿತರಾಗುತ್ತೀರಿ...

ಉದಯ UV ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ನೀರಾವರಿ ಯೋಜನೆಗಳ ಜಾರಿಗೆ ಬಿಜೆಪಿಗೆ ಸವಾಲು ಹಾಕಿದ ಡಿಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಬಿಜೆಪಿ ನಾಯಕರಿಗೆ ಕರ್ನಾಟಕ ರಾಜ್ಯದ ಬಗ್ಗೆ ಕಾಳಜಿ ಹಾಗೂ ಬದ್ಧತೆ ಇದ್ದರೆ, ಕೃಷ್ಣಾ ಮೇಲ್ದಂಡೆ, ಮೇಕೆದಾಟು, ಮಹದಾಯಿ ಸೇರಿದಂತೆ ಪ್ರಮುಖ ನೀರಾವರಿ ಯೋಜನೆಗಳ ಜಾರಿಗೆ ಕೇಂದ್ರ ಸರ್ಕಾರದ ಮೇಲೆ ಒಟ್ಟಿಗೆ ಒತ್ತಡ ಹಾಕೋಣ ಬನ್ನಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಸವಾಲೆಸೆದರು. ಪಂಚಮುಖಿಯಲ್ಲಿ ಬ್ಲಾಕ್ ಕಾಂಗ್ರೆಸ್ ಮತ್ತು ಕಾರ್ಯಕರ್ತರ ಸಭೆ ಉದ್ದೇಶಿಸಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಅವರು ಮಾತನಾಡಿದರು. ಬಿಜೆಪಿ ನಾಯಕರೇ, ನೀವು ನಿಗದಿ ಮಾಡುವ ಸಮಯಕ್ಕೆ ನಾನು ಬರುತ್ತೇನೆ. ನಾನು ಈಗಾಗಲೇ ಸುಮಾರು 10 ಬಾರಿ ಕೇಂದ್ರ ಸಚಿವರು ಹಾಗೂ ಪ್ರಧಾನಿಗಳ ಮುಂದೆ ಗೋಗರೆದಿದ್ದೇನೆ. ಆದರೂ ಅವರು ಸಹಾಯ ಮಾಡಿಲ್ಲ. ಕೇಂದ್ರ ಬಜೆಟ್ ನಲ್ಲಿ ಘೋಷಿಸಿದ 5300 ಕೋಟಿ ರೂಪಾಯಿ ಇದುವರೆಗೂ ಕೊಟ್ಟಿಲ್ಲ. ಹೀಗಾಗಿ ಬಿಜೆಪಿ ಹಾಗೂ ಕೇಂದ್ರ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ಕಿಡಿಕಾರಿದರು.

**ದ್ವೇಷ ಮುಖ್ಯ ಅಲ್ಲ, ಸಂಘಟನೆ ಮುಖ್ಯ**

**ಕೆಲಸ ಮಾಡುವವರನ್ನು ಪಕ್ಷ ಗುರುತಿಸುತ್ತದೆ;** ನಮ್ಮ ದೇಶದಲ್ಲಿ ರಾಮನ ತಂದೆ ದಶರಥ ಮಹಾರಾಜನಿಗಿಂತ ರಾಮನ ಭಂಟ ಹನುಮಂತನ ದೇವಾಲಯ ಎಲ್ಲಾ ಕಡೆ ಇವೆ. ಆಂಜನೇಯ ಸಮಾಜ ಸೇವಕ, ತ್ಯಾಗಿ. ಸಮಾಜದಲ್ಲಿ ಯಾರು ಸೇವೆ ಮಾಡುತ್ತಾರೋ ಸಮಾಜ ಅವರನ್ನು ಗುರುತಿಸುತ್ತದೆ. ಇದಕ್ಕೆ ಪಂಚಮುಖಿ ಆಂಜನೇಯನೇ ಸಾಕ್ಷಿ. ಹೀಗಾಗಿ ಜನರ ಮಧ್ಯೆ ನಿಷ್ಪಕ್ಷಪಾತವಾಗಿ, ಸೇವಾ ಮನೋಭಾವದಲ್ಲಿ ಕೆಲಸ ಮಾಡಿದರೆ ಸಮಾಜ ನಮ್ಮನ್ನು ಗುರುತುಸುತ್ತದೆ ಎಂದು ಕಾರ್ಯಕರ್ತರಿಗೆ ಕಿವಿಮಾತು ಹೇಳಿದರು.



**ನಾನು ಗುಂಪು ರಾಜಕಾರಣ ಮಾಡಿದ್ದರೆ ಏನೇನೋ ಮಾಡಬಹುದಿತ್ತು!'**

ವ್ಯಕ್ತಿಗಿಂತ ಪಕ್ಷ ಮುಖ್ಯ. ವ್ಯಕ್ತಿ ಪೂಜೆಗಿಂತ ಪಕ್ಷ ಪೂಜೆ ಮಾಡಬೇಕು. ನಾನು ಎಂದಿಗೂ ಗುಂಪು ರಾಜಕಾರಣ ಮಾಡಿಲ್ಲ. ಮಾಡಿದ್ದರೆ ಏನೇನೋ ಮಾಡಬಹುದಿತ್ತು. ಕಾಂಗ್ರೆಸ್ ಪಕ್ಷ ಇದ್ದರೆ, ನಾವು ನೀವು ಇರುತ್ತೇವೆ. ನಾನು ಉಪಮುಖ್ಯಮಂತ್ರಿಯಾಗಿರುವುದು, ದದ್ದಲ್ ಅವರು ಶಾಸಕರು ಹಾಗೂ ಅಧ್ಯಕ್ಷರಾಗಿದ್ದಾರೆ. ಬೋಸರಾಜು ಅವರು ಶಾಸಕರಲ್ಲದಿದ್ದರೂ ಅವರನ್ನು ಸಚಿವರಾನ್ನಾಗಿ ಮಾಡಲಾಗಿದೆ. 45 ವರ್ಷಗಳಿಂದ ಪಕ್ಷಕ್ಕೆ ದುಡಿದಿದ್ದಾರೆ. ತೆಲಂಗಾಣದಲ್ಲಿ ದುಡಿದಿದ್ದಾರೆ. ಹಗಲು ರಾತ್ರಿ ಪಕ್ಷ ಸಂಘಟನೆ ಮಾಡಿದ್ದಾರೆ ಎಂದರು.

**ಕಾಂಗ್ರೆಸ್ ಅಧಿಕಾರಕ್ಕೆ :** ಕಾರ್ಯಕರ್ತರಿಗೆ ಗ್ಯಾರಂಟಿ ಸಮಿತಿ ಸೇರಿದಂತೆ ಅನೇಕ ನಿಗಮ ಮಂಡಳಿಯಲ್ಲಿ ಅಧಿಕಾರ ನೀಡಲಾಗಿದೆ. ಯಾರು ನಿಸ್ವಾರ್ಥದಿಂದ ದುಡಿಯುತ್ತಾರೋ ಅವರನ್ನು ಪಕ್ಷ ಸಮಾಜ ಗೌರವಿಸುತ್ತದೆ. ನಿಮಗೆ ಯಾವುದೇ ಹುದ್ದೆ ಸಿಕ್ಕರಲಿ ಅದನ್ನು ಸಣ್ಣದು, ಚಿಕ್ಕದು ಎಂದು ಭಾವಿಸಬೇಡಿ. ರಾಜಕಾರಣದಲ್ಲಿ ಯಾರು ಯಾವ ಮಟ್ಟಕ್ಕೆ ಬೇಕಾದರೂ ಬೆಳೆಯಬಹುದು ಎಂದು ಸಲಹೆ ನೀಡಿದರು.

**ಬೂತ್‌ನಲ್ಲಿ ಮುನ್ನಡೆ ತರುವವನೇ ನಾಯಕ:** ನೀವು ನಿಮ್ಮ ಬೂತ್‌ಗಳಲ್ಲಿ ನಾಯಕತ್ವ ವಹಿಸಿಕೊಳ್ಳಬೇಕು. ಬಿಎಲ್ ಎಗಳು ನಮಗೆ ಬೂತ್ ಮಟ್ಟದಲ್ಲಿ ಮುನ್ನಡೆ ತಂದುಕೊಡುತ್ತಾರೆ. ಹೀಗಾಗಿ ಆತನೇ ನಿಜವಾದ ನಾಯಕ. ನಿಮ್ಮ ಹೋರಾಟ ಬಿಜೆಪಿ ಹಾಗೂ ದಳದವರ ಮೇಲೆ ಇರಬೇಕೇ ಹೊರತು ಕಾಂಗ್ರೆಸಿಗರ ಮೇಲಲ್ಲ. ದ್ವೇಷ ಮುಖ್ಯ ಅಲ್ಲ, ಸಂಘಟನೆ ಮುಖ್ಯ. ನಾವು ನಿಮಗೆ ಎಂತಹ ಸಂಘಟನೆ ನೀಡಿದ್ದೀವಿ. ಈ ದೇಶದ ಇತಿಹಾಸದಲ್ಲಿ ಯಾವುದೇ ರಾಜ್ಯ ಸರ್ಕಾರ ಮಾಡದ ಕೆಲಸ ನಾವು ಮಾಡುತ್ತಿದ್ದೇವೆ. ಕರ್ನಾಟಕ ಚುನಾವಣೆ ಬಳಿಕ ನಮ್ಮ ಸರ್ಕಾರ ಐದು ಗ್ಯಾರಂಟಿ ನೀಡಿದ್ದು, ಬಿಜೆಪಿ ನಾಯಕರು ಇದನ್ನು ಟೀಕೆ ಮಾಡಿದರು. ಯಡಿಯೂರಪ್ಪ ಅವರು ಒಂದು ಅಕ್ಕಿ ಕಾಳು ಕಡಿಮೆಯಾದರೂ ನಾವು ಸಹಿಸುವುದಿಲ್ಲ ಎನ್ನುತ್ತಿದ್ದರು. ನಾವು ಮೊದಲ ಸಂಪುಟ ಸಭೆಯಲ್ಲಿ ಎಲ್ಲಾ ಯೋಜನೆ ಜಾರಿಗೆ ಅನುಮೋದನೆ ನೀಡಲಾಯಿತು ಎಂದು ಹೇಳಿದರು.

## ಅನುದಾನಿತ ಸಂಸ್ಥೆ ನೌಕರರೂ ಲೋಕಾ ವ್ಯಾಪ್ತಿಗೆ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

'ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆ ಸಿಬ್ಬಂದಿ ವಿರುದ್ಧವೂ ಲೋಕಾಯುಕ್ತರು ತನಿಖೆ ನಡೆಸಬಹುದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ತಮ್ಮ ವಿರುದ್ಧದ ಲೋಕಾಯುಕ್ತ ವರದಿ ಆಧರಿಸಿ ಕೈಗೊಳ್ಳಲಾಗಿದ್ದ ತನಿಖೆಯನ್ನು ಪ್ರಶ್ನಿಸಿ ನೆಲಮಂಗಲದ ಬೈರಶೆಟ್ಟಿಹಳ್ಳಿಯ ಶ್ರೀ ಬಾಲಾಂಜನೇಯ ಪ್ರೌಢಶಾಲೆ ಗ್ರಂಥಪಾಲಕ ಹಾಗೂ ಲಿಪಿಕ ಬಿ.ಲಕ್ಷ್ಮೀನಾರಾಯಣ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಸರ್ಕಾರದಿಂದ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯನ್ನು ಕೆಲವು ಉದ್ದೇಶಗಳಿಗಾಗಿ ಸರ್ಕಾರಿ ಸಿಬ್ಬಂದಿಯ ಭಾಗವೆಂದೇ ಪರಿಗಣಿಸಿರುವ ಹೈಕೋರ್ಟ್‌ನ ಪೂರ್ವ ನಿದರ್ಶನಗಳಿವೆ. ಅವರ ವೇತನ, ಭತ್ಯೆ ಮತ್ತು ಸೇವಾ ಷರತ್ತುಗಳನ್ನು ಸರ್ಕಾರವೇ ನಿಯಂತ್ರಿಸುತ್ತದೆ. ಹೀಗಾಗಿ, ಅರ್ಜಿದಾರರ ವಿರುದ್ಧವೂ ಲೋಕಾಯುಕ್ತವು ತನಿಖೆಯನ್ನು ನಡೆಸಬಹುದು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

## 4 ಸಾವಿರ ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ನಗರದ 1,650 ಕಿ.ಮೀ ಪ್ರಮುಖ ರಸ್ತೆಗಳಲ್ಲಿ ಸದ್ಯ 83 ರಸ್ತೆಗಳ 148 ಕಿ. ಮೀ ವೈಟ್ ಟಾಪಿಂಗ್ ಕಾಮಗಾರಿ 18 ಕೋಟಿ ವೆಚ್ಚದಲ್ಲಿ ಜಾರಿಯಲ್ಲಿದೆ. ಇನ್ನೂ 500 ಕಿ.ಮೀ ರಸ್ತೆಗಳ ಕಾಮಗಾರಿಗಳನ್ನು 4 ಸಾವಿರ ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ವಿಸ್ತ್ರತ ಯೋಜನಾ ವರದಿ( ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ. ಅದು ಮುಂದಿನ ವಾರ ಅಂತಿಮಗೊಳ್ಳಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು. 'ವೈಟ್ ಟಾಪಿಂಗ್ ರಸ್ತೆ ನಿರ್ಮಾಣದಿಂದ ಮುಂದಿನ ಮೂರು ದಶಕ, ರಸ್ತೆ ಬಾಳಿಕೆ ಬರಲಿದೆ. ಇದಲ್ಲದೇ ಬೆಂಗಳೂರಿನ 350 ಕಿ.ಮೀ ಉದ್ದದ 182 ರಸ್ತೆಗಳಲ್ಲಿ ಬ್ಲ್ಯಾಕ್ ಟಾಪಿಂಗ್ ಕಾಮಗಾರಿಯನ್ನು 695 ಕೋಟಿ ವೆಚ್ಚದಲ್ಲಿ ನಡೆಸಲಾಗುತ್ತಿದೆ. ಮುಖ್ಯಮಂತ್ರಿಯವರು ಕೂಡ ರಸ್ತೆಗಳ ಗುಂಡಿ ಮುಚ್ಚಲು 1,100 ಕೋಟಿ ಅನುದಾನ ಒದಗಿಸಿದ್ದು, 500 ಕಿ.ಮೀ ಡಾಂಬರೀಕರಣ ಮಾಡಲಾಗುತ್ತಿದೆ' ಎಂದು ಹೇಳಿದರು. 'ಭವಿಷ್ಯದ ಬೆಂಗಳೂರಿಗಾಗಿ 113 ಕಿ.ಮೀ ಎಲಿವೇಟೆಡ್ ಮೇಲೇತುವೆ, 40 ಕಿ.ಮೀ ಸುರಂಗ ರಸ್ತೆ ಯೋಜನೆಯೂ ಸೇರಿದೆ.

## ರಮೇಶ್ ಕತ್ತಿ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ವಾಲ್ಮೀಕಿ ಸಮಾಜದ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಮಾಜಿ ಸಂಸದ ರಮೇಶ್ ಕತ್ತಿ ವಿರುದ್ಧ ವಾಲ್ಮೀಕಿ (ನಾಯಕ) ಸಮಾಜ ಮುಖಂಡರು ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿದ್ದು, ರಾಜ್ಯ ಸರಕಾರ ಈ ಕೂಡಲೇ ರಮೇಶ್ ಕತ್ತಿ ಅನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ಬೆಳಗಾವಿ, ತುಮಕೂರು, ರಾಯಚೂರು, ಬಳ್ಳಾರಿ ಸೇರಿದಂತೆ ಹಲವು ಕಡೆಗಳಲ್ಲಿ ವಾಲ್ಮೀಕಿ ಸಮಾಜದ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ರಮೇಶ್ ಕತ್ತಿ ಅನ್ನು ಬಂಧಿಸುವಂತೆ ಆಯಾ ವ್ಯಾಪ್ತಿಯ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಈ ಕುರಿತು ಮಾತನಾಡಿದ ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ, ರಮೇಶ್ ಕತ್ತಿ ಜವಾಬ್ದಾರಿಯುತ ಸ್ಥಾನದಲ್ಲಿದ್ದು, ತಮ್ಮ ಸ್ಥಾನದ ಬಗ್ಗೆ ಅರಿವಿಲ್ಲದೇ ಎಸ್ಟಿ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಿದ್ದು ಸರಿಯಲ್ಲ. ಅವರ ಮಾತಿನಿಂದ ಸಮಾಜದ ಜನತೆಗೆ ನೋವುಂಟಾಗಿದೆ ಎಂದು ಹೇಳಿದರು. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹದಗೆಡುತ್ತಿದೆ. ರಮೇಶ್ ಕತ್ತಿ ಮಾತಿನಿಂದ ಬೇರೆ ಬೇರೆ ಸಮುದಾಯಗಳ ನಡುವೆ ಸಂಘರ್ಷ ಉಂಟಾಗುವ ಸಾಧ್ಯತೆ ಇದೆ. ಆದುದರಿಂದ, ರಮೇಶ್ ಕತ್ತಿ ಅವರನ್ನು ಶೀಘ್ರವೇ ಬಂಧಿಸಬೇಕು.

ಇಲ್ಲವಾದಲ್ಲಿ ಬರುವ ಅ.24 ರಂದು ವಾಲ್ಮೀಕಿ ಸಮಾಜ ಸೇರಿದಂತೆ ಹಿಂದುಳಿದ ಸಮುದಾಯಗಳಿಂದ ಬೆಳಗಾವಿ ಬಂದ್ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.



**ಸತೀಶ್ ಜಾರಕಿಹೊಳಿ 'ಉತ್ತರಾಧಿಕಾರಿ'**

**ಉತ್ತರಾಧಿಕಾರಿ ಕಿಚ್ಚು ಜೋರು**

# ಯತೀಂದ್ರ ಹೇಳಿಕೆ ಕೋಲಾಹಲ
## ಕೈ ಪಾಳಯದಲ್ಲಿ ಹಾಲಾಹಲ

**ತಂದೆಯ ರಾಜಕೀಯ ಜೀವನ ಮುಗಿಯಿತು**



### ಮುಂದಿನ ಸಿಎಂ ವಿಚಾರದ ಚರ್ಚೆ ಬೇಡ



ರಾಜ್ಯದಲ್ಲಿ ಮುಂದಿನ ಸಿಎಂ ಯಾರು ಅನ್ನೋ ಚರ್ಚೆ ವಿಚಾರದಲ್ಲಿ ನನ್ನ ಬಗ್ಗೆ ಯಾರೂ ಚರ್ಚೆ ಮಾಡುವ ಅವಶ್ಯಕತೆಯಿಲ್ಲ. ಪಾರ್ಟಿ ಏನು ಹೇಳುತ್ತದೆಯೋ ಅದರಂತೆ ನಾವು ಒಟ್ಟಿಗೆ ಕೆಲಸ ಮಾಡಿಕೊಂಡು ಹೋಗ್ತಿವಿ ಅಂತ ನಾನು ಸಿದ್ದರಾಮಯ್ಯ ಹೇಳಿದ್ದೇವೆ. ಅದಕ್ಕೆ ನಾನು ಬದ್ಧನಾಗಿದ್ದೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಈ ಬಗ್ಗೆ ಅವರನ್ನೇ ಕೇಳಿ. ಅದನ್ನ ನನ್ನ ಕೇಳಿದ್ರೆ, ನಾನು ಏನು ಹೇಳಲಿ ಎಂದು ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ನನಗೆ ಪಕ್ಷ ಎಲ್ಲಾ ಕೊಟ್ಟಿದೆ. ಪಕ್ಷದ ಅಧ್ಯಕ್ಷನಾಗಿದ್ದೇನೆ. ಡಿಸಿಎಂ ಆಗಿ ರಾಜ್ಯದಲ್ಲಿ ಇತಿಹಾಸ ಬರೆಯುತ್ತಿದ್ದೇನೆ. ದೊಡ್ಡ ದೊಡ್ಡ ಕೆಲಸ ನಿಭಾಯಿಸಿದ್ದೇನೆ. ನೀರಾವರಿ ಕ್ಷೇತ್ರದಲ್ಲಿ ಇತಿಹಾಸ ಬರಿತ್ತಿದ್ದೇನೆ. ಮಹಾದಾಯಿ, ಮೇಕೆದಾಟು ಹೋರಾಟ ಮಾಡಿದ್ದೇನೆ. ಪಕ್ಷ ನನಗೆ ಏನೇನು ಕೊಡಬೇಕು ಎಲ್ಲಾ ಕೊಟ್ಟಿದೆ ಎಂದಿದ್ದಾರೆ.

• ಉದಯವಾಹಿನಿ, ಬೆಳಗಾವಿ

ತಮ್ಮ ತಂದೆ ರಾಜಕೀಯ ಜೀವನ ಅಂತಿಮ ಹಂತದಲ್ಲಿದ್ದಾರೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರರ ಹೇಳಿಕೆಯು ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಗೆ ನಾಯಕತ್ವ ಬದಲಾವಣೆಯ ಬಗ್ಗೆ ಸೇರಿದಂತೆ ಊಹಾಪೋಹಗಳಿಗೆ ಪುಷ್ಟಿ ನೀಡಿದೆ.

1. ಸಿಎಂ ಸಿದ್ದರಾಮಯ್ಯ ಉತ್ತರಾಧಿಕಾರಿ ಯಾರು
2. ಸತೀಶ್ ಜಾರಕಿಹೊಳಿ ಪರವಾಗಿ ಸಿದ್ದರಾಮಯ್ಯ ಒಲವು..?
3. ಉತ್ತರಾಧಿಕಾರಿ ವಿಚಾರವಾಗಿ ಕಾಂಗ್ರೆಸ್‌ನಲ್ಲಿ ಚರ್ಚೆ ಶುರು

ಸತೀಶ್ ಜಾರಕಿಹೊಳಿ ಅವರನ್ನು ಸಂಭಾವ್ಯ ಉತ್ತರಾಧಿಕಾರಿ ಎಂದು ಹೆಸರಿಸಿದ್ದು, ಮುಂಬರುವ ಸಚಿವ ಸಂಪುಟ ಪುನರ್ರಚನೆ ಮತ್ತು ರಾಜ್ಯದ ಭವಿಷ್ಯದ ನಾಯಕತ್ವದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೆಚ್ಚಿಸಿದೆ.

ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿ ತಮ್ಮ ತಂದೆಯ ಪರಂಪರೆಯನ್ನು ಮುಂದುವರಿಸಲು ಸಂಭಾವ್ಯ ಉತ್ತರಾಧಿಕಾರಿಯಾಗಬಹುದು ಎಂದು ಸೂಚಿಸಿದ್ದಾರೆ. ತಮ್ಮ ರಾಜಕೀಯ ಜೀವನದ ಅಂತಿಮ ಹಂತದಲ್ಲಿದ್ದಾರೆ ಎಂದು ಯತೀಂದ್ರ ಹೇಳಿದರು. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳ ನಡುವೆ ಯತೀಂದ್ರ ಅವರ ಈ ಹೇಳಿಕೆಗಳು ಬಂದಿವೆ. ಇದನ್ನು ಕಾಂಗ್ರೆಸ್ ಪಕ್ಷ ಈ ಹಿಂದೆ ನಿರಾಕರಿಸಿತ್ತು. ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರು ಅಚ್ಚರಿಯ ಘೋಷಣೆಯನ್ನು ಮಾಡಿದ್ದು, ಅವರ ತಂದೆ ತಮ್ಮ ರಾಜಕೀಯ ಜೀವನದ ಅಂತಿಮ ಹಂತದಲ್ಲಿದ್ದಾರೆ. ಸತೀಶ್ ಜಾರಕಿಹೊಳಿಯಂತಹ ನಾಯಕರು ಅವರ ಪರಂಪರೆಯನ್ನು ಮುಂದುವರಿಸಲು ಅತ್ಯಂತ ಸೂಕ್ತ ಅಭ್ಯರ್ಥಿ ಎಂದು ಹೇಳಿದ್ದಾರೆ. ನಿರ್ದಿಷ್ಟ ಸಿದ್ಧಾಂತವನ್ನು ಹೊಂದಿರುವ ವ್ಯಕ್ತಿಯನ್ನು ಕಂಡುಹಿಡಿಯುವುದು ಕಷ್ಟ ಎಂದು ಯತೀಂದ್ರ ಹೇಳಿದರು. ಜಾರಕಿಹೊಳಿ ಪ್ರಗತಿಪರ ನಾಯಕನ ಪಾತ್ರವನ್ನು ನಿರ್ವಹಿಸಬಹುದು ಎಂದು ಸೂಚಿಸಿದರು. ಜಾರಕಿಹೊಳಿ ಅವರು ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧಿಸುತ್ತಿಲ್ಲ ಎಂದು ಈ ಹಿಂದೆ ಹೇಳಿದ್ದರು. ಯತೀಂದ್ರ ಅವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, ನೀವು ಅವರನ್ನು ಕೇಳಬೇಕು, ನಾನು ಏನು ಹೇಳಲಿ? ಎಂದು ಹೇಳಿ, ಈ ವಿಷಯದ ಬಗ್ಗೆ ಅಂತಿಮ ನಿರ್ಧಾರವು ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟದ್ದು ಎಂದು ಹೇಳಿದರು.



**ನವೆಂಬರ್ ನಲ್ಲಿ ಆಗುತ್ತಾ ಕ್ರಾಂತಿ**

ನವೆಂಬರ್ ತಿಂಗಳಲ್ಲಿ ಸಿಎಂ ಬದಲಾವಣೆ, ಸಂಪುಟ ಪುನರ್ ರಚನೆ ಕುರಿತು ಮಾತುಗಳು ಕೇಳಿಬರುತ್ತಿದೆ. ಈ ಕುರಿತು ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ನ.ಕ್ರಾಂತಿ ಬರೀ ಊಹಾಪೋಹ . ಯಾವುದೇ ನಾಯಕತ್ವದ ಬದಲಾವಣೆ ಪ್ರಶ್ನೆ ಇಲ್ಲ, ಈ ರೀತಿ ಚರ್ಚೆ ಪಕ್ಷದಲ್ಲಿ ನಡೆದಿಲ್ಲ ಎಂದಿದ್ದಾರೆ. ಇದೇ ವೇಳೆ ಸತೀಶ್ ಜಾರಕಿಹೊಳಿ ಮುಂದಿನ ಸಿಎಂ ಎಂಬ ಹೇಳಿಕೆ ವಿಚಾರಕ್ಕೂ ಪ್ರತಿಕ್ರಿಯೆ ನೀಡಿದ ಯತೀಂದ್ರ, ಸಿಎಂ ಆಗುವ ಅರ್ಹತೆ ಇದ್ದವರು ಅನೇಕ ನಾಯಕರು ಇದ್ದಾರೆ. ಈ ಬಗ್ಗೆ ಎಲ್ಲಾ ಶಾಸಕರು, ಹೈಕಮಾಂಡ್ ತೀರ್ಮಾನ ಮಾಡುತ್ತೆ. ಸದ್ಯಕ್ಕೆ ಸಿಎಂ ಬದಲಾವಣೆ ಚರ್ಚೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಏತನ್ಮಧ್ಯೆ, ಕರ್ನಾಟಕದಲ್ಲಿ ಕಾಂಗ್ರೆಸ್ ಪ್ರಮುಖ ಪುನರ್ರಚನೆಗೆ ಸಜ್ಜಾಗಿದೆ. ಗ್ರ್ಯಾಂಡ್ ಓಲ್ಡ್ ಪಾರ್ಟಿ ಕಾಮರಾಜ್ ಯೋಜನೆಯನ್ನು ಜಾರಿಗೆ ತರುತ್ತದೆ. ಅಂದರೆ ಕಾರ್ಯಕ್ಷಮತೆ ಮತ್ತು ಭ್ರಷ್ಟಾಚಾರ ಆರೋಪಗಳ ಆಧಾರದ ಮೇಲೆ ಹಲವಾರು ಹಿರಿಯ ವ್ಯಕ್ತಿಗಳನ್ನು ರಾಜ್ಯ ಸಚಿವ ಸಂಪುಟದಿಂದ ತೆಗೆದುಹಾಕಲಾಗುತ್ತದೆ. ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಪುನರ್ರಚನೆಯಲ್ಲಿ ಕಾಂಗ್ರೆಸ್ ಒಂದು ಡಜನ್ ಹಿರಿಯ ಕ್ಯಾಬಿನೆಟ್ ಸಚಿವರನ್ನು ತೆಗೆದು ಹಾಕಿ, ಅವರನ್ನು ಪಕ್ಷದ ಸಂಘಟನೆಗೆ ವರ್ಗಾಯಿಸಿ, ಹೊಸ ಮುಖಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ನಿರೀಕ್ಷೆಯಿದೆ. ಕರ್ನಾಟಕ ಸರ್ಕಾರವು ಎರಡೂವರೆ ವರ್ಷಗಳನ್ನು ಪೂರೈಸುತ್ತಿರುವುದರಿಂದ, ಸಂಪುಟ ಪುನರ್ರಚನೆಯ ಸಾಧ್ಯತೆ ಹೆಚ್ಚಾಗಿದೆ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ರಾಜ್ಯದಲ್ಲಿ ಪರ್ಯಾಯ ಮುಖ್ಯಮಂತ್ರಿ ಹುದ್ದೆಗೆ ಒತ್ತಾಯಿಸುತ್ತಿದ್ದಾರೆ. ಆದಾಗ್ಯೂ, ರಾಜ್ಯದಲ್ಲಿ ಕಾಮರಾಜ್ ಯೋಜನೆಯನ್ನು ಜಾರಿಗೆ ತಂದರೆ, ಅವರು ರಾಜ್ಯ ಪಕ್ಷದ ಅಧ್ಯಕ್ಷರು, ಸಂಪುಟ ಸಚಿವರು ಮತ್ತು ಉಪಮುಖ್ಯಮಂತ್ರಿಗಳಾಗಿದ್ದರಿಂದ ಅವರು ರಾಜ್ಯದಲ್ಲಿನ ತಮ್ಮ ಒಂದು ಸ್ಥಾನದಿಂದ ಕೆಳಗಿಳಿಯಬೇಕಾಗುತ್ತದೆ. ಕಾಮರಾಜ್ ಯೋಜನೆಯು 1963ರಲ್ಲಿ ಆಗಿನ ಮದ್ರಾಸ್ ಮುಖ್ಯಮಂತ್ರಿಯಾಗಿದ್ದ ಕೆ. ಕಾಮರಾಜ್ ಅವರು ಪ್ರಾರಂಭಿಸಿದ ಉಪಕ್ರಮವಾಗಿತ್ತು. ಪಕ್ಷದ ಸಂಘಟನೆಯನ್ನು ತಳಮಟ್ಟದಲ್ಲಿ ಬಲಪಡಿಸುವುದು ಇದರ ಗುರಿಯಾಗಿತ್ತು.

**2028ರ ವಿಧಾನಸಭಾ ಚುನಾವಣೆಯಲ್ಲಿ ತಂದೆಯವರು ಸ್ಪರ್ಧಿಸಲ್ಲ:** ಮುಂದಿನ ರಾಜಕೀಯ ಉತ್ತರಾಧಿಕಾರಿ ಸತೀಶ್ ಜಾರಕಿಹೊಳಿ ಎಂಬ ವಿಚಾರವಾಗಿ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಡಾ. ಯತೀಂದ್ರ, 2028ರ ವಿಧಾನಸಭಾ ಚುನಾವಣೆಯಲ್ಲಿ ತಂದೆಯವರು ಸ್ಪರ್ಧಿಸಲ್ಲ ಅಂದಿದ್ದಾರೆ. ಅದು ಆದ ಮೇಲೆ ಜಾತ್ಯತೀತ ಸಿದ್ಧಾಂತ ಇಟ್ಟುಕೊಂಡ ಸಾಕಷ್ಟು ನಾಯಕರಿದ್ದಾರೆ. ಇವರೆಲ್ಲರನ್ನೂ ಸತೀಶ್ ಜಾರಕಿಹೊಳಿ ಮುನ್ನಡೆಸಲಿ ಎಂದರು. 2028ರ ನಂತರ ಆ ರೀತಿ ಲೀಡ್ ಮಾಡೋರು ಬೇಕು. ಸೈದ್ಧಾಂತಿಕ ರಾಜಕಾರಣ ಮಾಡುವವರ ಪೈಕಿ ಸಚಿವ ಸತೀಶ್ ಸಹ ಒಬ್ಬರು.

ಆ ರೀತಿ ಸಿದ್ಧಾಂತ ಇಟ್ಟುಕೊಂಡವರಿಗೆ ಸತೀಶ್ ಮಾರ್ಗದರ್ಶನ ಮಾಡಲಿ. ಸಿದ್ದರಾಮಯ್ಯ ಹೊರತುಪಡಿಸಿದರೆ ಅವರ ಸ್ಥಾನ ತುಂಬುವ ಶಕ್ತಿ ಸತೀಶ್‌ಗೆ ಖಂಡಿತಾ ಇದೆ.

**ಯಾರೆಲ್ಲಾ ಹೆಸರು ಮುನ್ನಲೆಗೆ**

ಯತೀಂದ್ರ ಅವರ ಹೇಳಿಕೆ ಕಾಂಗ್ರೆಸ್ ಪಾಳಯದಲ್ಲಿ ಸಂಚಲನ ಸೃಷ್ಟಿಸಿದೆ. ಸತೀಶ್ ಜಾರಕಿಹೊಳಿ ಜೊತೆಗೆ ಪ್ರಿಯಾಂಕ್ ಖರ್ಗೆ, ಎಂಬಿ ಪಾಟೀಲ್, ಪರಮೇಶ್ವರ್ ಅವರ ಹೆಸರುಗಳು ಹರಿದಾಡುತ್ತಿವೆ. ಪ್ರಿಯಾಂಕ್ ಖರ್ಗೆ ಅವರ ಪೋಸ್ಟರ್ ಮಾಡಿಕೊಂಡು ಸಿದ್ದರಾಮಯ್ಯ ಅವರ ನಂತರದಲ್ಲಿ ಸೈದ್ಧಾಂತಿಕ ಬದ್ಧತೆ ಹೊಂದಿರುವ ನಾಯಕರು ಇವರೇ ಎಂದು ಅವರ ಅಭಿಮಾನಿಗಳು ಚರ್ಚೆ ಶುರುಮಾಡಿಕೊಂಡಿದ್ದಾರೆ. ಈಗಾಗಲೇ ಸತೀಶ್ ಜಾರಕಿಹೊಳಿ ಸಿಎಂ ರೇಸ್ ನಲ್ಲಿ ಇದ್ದಾರೆ. ಡಾ. ಜಿ ಪರಮೇಶ್ವರ್ ಅವರು ಮೊದಲ ದಲಿತ ಸಿಎಂ ಆಗುವ ತವಕದಲ್ಲಿದ್ದಾರೆ. ಇನ್ನುಳಿದಂತೆ ಎಂಬಿ ಪಾಟೀಲ್ ಹಾಗೂ ಇತರ ಹಿರಿಯ ನಾಯಕರು ತಮ್ಮದೇ ಆದ ರೀತಿಯ ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

## 6.5 ಲಕ್ಷ ಅನಧಿಕೃತ ಆಸ್ತಿಗಳಿಗೆ 'ಇ-ಸ್ವತ್ತು' ಮೂಲಕ ಸಿಗಲಿದೆ ಇ-ಖಾತಾ!

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಇ-ಸ್ವತ್ತು' ಯೋಜನೆಯಡಿಯಲ್ಲಿ, ಬೆಂಗಳೂರು ಸುತ್ತಮುತ್ತಲಿನ ಮೂರು ಜಿಲ್ಲೆಗಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸುಮಾರು 6.5 ಲಕ್ಷ ಅನಧಿಕೃತ ಆಸ್ತಿಗಳ ಮಾಲೀಕರಿಗೆ ಇ-ಖಾತಾ ಲಭ್ಯವಾಗಲಿದೆ. ರಾಜ್ಯಾದ್ಯಂತ 95 ಲಕ್ಷಕ್ಕೂ ಹೆಚ್ಚು ಅನಧಿಕೃತ ಆಸ್ತಿಗಳಿಗೆ ಕಾನೂನು ದಾಖಲೆ ಒದಗಿಸುವ ಗುರಿಯನ್ನು ಈ ಯೋಜನೆ ಹೊಂದಿದೆ.




ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ದತ್ತಾಂಶದ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯಲ್ಲಿ ಸುಮಾರು 2.8 ಲಕ್ಷ, ಬೆಂಗಳೂರು ಗ್ರಾಮಾಂತರದಲ್ಲಿ 1.8 ಲಕ್ಷ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 1.8 ಲಕ್ಷ ಆಸ್ತಿಗಳು 'ಇ-ಸ್ವತ್ತು' ಕಾರ್ಯಕ್ರಮದಡಿ ಇ-ಖಾತಾ ಪಡೆಯಲು ಅರ್ಹವಾಗಿವೆ. ಕಳೆದ ವಾರ ಈ ಉಪಕ್ರಮಕ್ಕೆ ಸರ್ಕಾರ ಚಾಲನೆ ನೀಡಿದ್ದು, ಗ್ರಾಮೀಣ ಪ್ರದೇಶದ ಆಸ್ತಿಗಳಿಗೆ ಇ-ಖಾತಾ ನೀಡುವ ಅಭಿಯಾನವನ್ನು ಕೈಗೊಳ್ಳಲಾಗಿದೆ. ಇ-ಸ್ವತ್ತು ಪೋರ್ಟಲ್ ಮೂಲಕ 15 ದಿನಗಳ ಒಳಗಾಗಿ ಆಸ್ತಿದಾರರಿಗೆ ಇ-ಖಾತೆ ನೀಡಲು ಉದ್ದೇಶಿಸಲಾಗಿದೆ.



**ಇ-ಖಾತಾ ಏಕೆ ಮುಖ್ಯ?:** ಕಳೆದ ಒಂದು ವರ್ಷದಿಂದ ಆಸ್ತಿ ನೋಂದಣಿ ಸೇರಿದಂತೆ ಎಲ್ಲಾ ಆಸ್ತಿ ವಹಿವಾಟುಗಳಿಗೆ ರಾಜ್ಯ ಸರ್ಕಾರ ಇ-ಖಾತಾವನ್ನು ಕಡ್ಡಾಯಗೊಳಿಸಿದೆ. ಇದರ ಜೊತೆಗೆ, ಆಸ್ತಿ ಮಾಲೀಕರು ಆಸ್ತಿಯ ಮೇಲೆ ಬ್ಯಾಂಕ್ ಸಾಲಗಳನ್ನು ಪಡೆಯಲು ಸಹ ಇ-ಖಾತಾ ಪಡೆಯುವುದು ಅನಿವಾರ್ಯವಾಗಿದೆ.


# ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 900 ಕೋಟಿ ರೂ. ಬಾಕಿ

● ಸರ್ಕಾರದ ವಿರುದ್ಧ ರಾಜು ಕಾಗೆ ಅಸಮಾಧಾನ ● ಕಳೆದ2 ವರ್ಷಗಳಿಂದ ನಿಗಮಕ್ಕೆ ಯೋಜನೆಯ ಹಣ ಪಾವತಿಯಾಗಿಲ್ಲ

• ಉದಯವಾಹಿನಿ ಬೆಂಗಳೂರು

ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ 'ಶಕ್ತಿ' ಯೋಜನೆ ಒಂದು ಕಡೆ ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾದರೆ, ಇನ್ನೊಂದೆಡೆ ರಾಜ್ಯದ ರಸ್ತೆ ಸಾರಿಗೆ ನಿಗಮಗಳ ಮೇಲೆ ಭಾರಿ ಆರ್ಥಿಕ ಹೊರೆ ಹೇರಿದೆ. ಈ ಸಂಬಂಧ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಹಾಗೂ ಕಾಂಗ್ರೆಸ್ ಶಾಸಕ ರಾಜು ಕಾಗೆ ಅವರು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಕಡೆಯಿಂದ ಸುಮಾರು 900 ಕೋಟಿ ರೂ. ಬಾಕಿ ಹಣ ಬಿಡುಗಡೆಯಾಗದ ಕಾರಣ ನಿಗಮವು ಆರ್ಥಿಕವಾಗಿ ಕಷ್ಟ ಪಡುತ್ತಿದೆ ಎಂದು ಅವರು ಹೇಳಿದ್ದಾರೆ.

**ಶೇ. 70 ರಷ್ಟು ಹಣ ಮಾತ್ರ ಪಾವತಿ:** ನಾವು ಲಾಭ ಗಳಿಸುತ್ತಿಲ್ಲ, ನಷ್ಟವನ್ನು ಸರಿದೂಗಿಸಿ ಲಾಭದ ಹಾದಿಗೆ ಬರುವ ಪ್ರಯತ್ನದಲ್ಲಿದ್ದೇವೆ. 'ಶಕ್ತಿ' ಯೋಜನೆಗಾಗಿ ಸರ್ಕಾರದಿಂದ ನಮಗೆ ಸುಮಾರು 900 ಕೋಟಿ ರೂ. ಬರುವ ಬಾಕಿ ಇದೆ. ಈ ಹಣ ಸಿಕ್ಕರೆ ನಾವು ನಷ್ಟವಿಲ್ಲ, ಲಾಭವಿಲ್ಲ ಎಂಬ ಸಮಸ್ಥಿತಿಗೆ ಬರಬಹುದು ಎಂದು ರಾಜು ಕಾಗೆ ಅವರು ತಿಳಿಸಿದ್ದಾರೆ. ಯೋಜನೆ ಜಾರಿಯಾಗಿ ಸುಮಾರು ಎರಡು ವರ್ಷಗಳಾದರೂ ನಮಗೆ ಈ ಪಾವತಿ ಸಿಕ್ಕಿಲ್ಲ. ಸರ್ಕಾರವು ಶೇ. 70 ರಷ್ಟು ಹಣವನ್ನು ಮಾತ್ರ ನೀಡುತ್ತಿದ್ದು, ಶೇ. 30 ರಷ್ಟು ಪಾವತಿಯನ್ನು ಬಾಕಿ ಉಳಿಸಿಕೊಂಡಿದೆ ಎಂದು ಕಾಗೆ ಅವರು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದರು. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರ ಗಮನಕ್ಕೆ ತರಲಾಗಿದೆ ಮತ್ತು ಶೀಘ್ರದಲ್ಲೇ ಈ ಸಮಸ್ಯೆಯನ್ನು ಬಗೆಹರಿಸುವ ನಿರೀಕ್ಷೆ ಇದೆ ಎಂದಿದ್ದಾರೆ.



**ಭಾರಿ ಆರ್ಥಿಕ ಹೊರೆ**

**ರಾಜ್ಯದ ಸಾರಿಗೆ ನಿಗಮಗಳ ಆರ್ಥಿಕ ಹೊರೆ**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಷ್ಟೇ ಅಲ್ಲದೆ, ಕರ್ನಾಟಕದ ಎಲ್ಲಾ ರಸ್ತೆ ಸಾರಿಗೆ ನಿಗಮಗಳಾದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಏಐಖಖಿಅ ಗಳು ಭಾರಿ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿವೆ. ನವೆಂಬರ್ 2024 ರ ವರೆಗಿನ ಮಾಹಿತಿ ಪ್ರಕಾರ, ಈ ಎಲ್ಲಾ ನಿಗಮಗಳ ಒಟ್ಟು ಸಾಲದ ಮೊತ್ತ ಸುಮಾರು 6,330 ಕೋಟಿ ರೂ. ತಲುಪಿದ್ದು, ಇದರಲ್ಲಿ 3,000 ಕೋಟಿ ರೂ. ತಕ್ಷಣದ ಬಾಕಿ ಪಾವತಿಗಳಿವೆ. ಕೆಎಸ್‌ಆರ್‌ಟಿಸಿ ಇತ್ತೀಚೆಗೆ ಭವಿಷ್ಯ ನಿಧಿ ಮತ್ತು ಇಂಧನ ವೆಚ್ಚಗಳಂತಹ ಶಾಸನಬದ್ಧ ಬಾಕಿಗಳನ್ನು ತೀರಿಸಲು 623 ಕೋಟಿ ರೂ. ಸಾಲಕ್ಕೆ ಮನವಿ ಸಲ್ಲಿಸಿದೆ. ಎಲ್ಲಾ ನಿಗಮಗಳ ಬಾಕಿ ಉಳಿದಿರುವ ಒಟ್ಟು ಮೊತ್ತ ಸುಮಾರು 4,800 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಕೋವಿಡ್-19 ಸಾಂಕ್ರಾಮಿಕದ ಅಡೆತಡೆಗಳು, ಪ್ರಯಾಣ ದರ ಹೆಚ್ಚಳದ ವಿಳಂಬ ಮತ್ತು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಒದಗಿಸುವ 'ಶಕ್ತಿ' ಯೋಜನೆಯು ಈ ನಿಗಮಗಳ ಆರ್ಥಿಕ ಸಂಕಷ್ಟಕ್ಕೆ ಪ್ರಮುಖ ಕಾರಣಗಳಾಗಿವೆ.

**850 ಕೋಟಿ ರೂ. ನೆರವು: ರಾಮಲಿಂಗಾರೆಡ್ಡಿ:** ಇದೇ ವೇಳೆ ರಾಜು ಕಾಗೆ ಅವರ ಕಳವಳಕ್ಕೆ ಪ್ರತಿಕ್ರಿಯಿಸಿದ ಸಚಿವ ರಾಮಲಿಂಗಾ ರೆಡ್ಡಿ ಅವರು, ರಸ್ತೆ ಸಾರಿಗೆ ನಿಗಮಗಳು ಆರ್ಥಿಕ ಸಂಕಷ್ಟದಲ್ಲಿದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಗಮಗಳಿಗೆ 2,000 ಕೋಟಿ ರೂ. ಮಂಜೂರು ಮಾಡಿದ್ದಾರೆ. ಅದರಲ್ಲಿ 500 ಕೋಟಿ ರೂ.ಗಳನ್ನು ಈಗಾಗಲೇ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇದರ ಜೊತೆಗೆ, ಸಂಸ್ಥೆಗೆ ಸುಮಾರು 350 ಕೋಟಿ ರೂ. ವೆಚ್ಚದ 700 ಹೊಸ ಬಸ್‌ಗಳನ್ನು ಒದಗಿಸಲಾಗುತ್ತಿದೆ. ಆದ್ದರಿಂದ, ಒಟ್ಟಾರೆಯಾಗಿ ನಿಗಮಕ್ಕೆ 500 ಕೋಟಿ ರೂ. (ಸರ್ಕಾರವೇ ಮರುಪಾವತಿಸುವ ಸಾಲದ ರೂಪದಲ್ಲಿ) ಮತ್ತು ಹೊಸ ಬಸ್‌ಗಳ ಮೂಲಕ 350 ಕೋಟಿ ರೂ. ಸೇರಿ ಒಟ್ಟು 850 ಕೋಟಿ ರೂ. ನೆರವು ಸಿಗುತ್ತಿದೆ. ಈ ಸನ್ನಿವೇಶವನ್ನು ಅವರು ಅರ್ಥ ಮಾಡಿಕೊಳ್ಳಬೇಕು ಎಂದು ಸಚಿವರು ಹೇಳಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,589/Gram24ct ₹11,540/Gram22ct | ಬೆಳ್ಳಿ: ₹163.90/Gram


# ದೀಪಾವಳಿ ಪಟಾಕಿ ಅನಾಹುತ: ಬೆಂಗಳೂರಲ್ಲೇ 80 ಕ್ಕೂ ಹೆಚ್ಚು ಮಂದಿಗೆ ಗಾಯ

• ಉದಯವಾಹಿನಿ, ಬೆಂಗಳೂರು

ದೀಪಾವಳಿ ಹಬ್ಬದ ಸಂಭ್ರಮದ ನಡುವೆಯೇ ಪಟಾಕಿ ಸಿಡಿತದಿಂದ ರಾಜ್ಯಾದ್ಯಂತ 100ಕ್ಕೂ ಹೆಚ್ಚು ಮಂದಿ, ಬೆಂಗಳೂರಲ್ಲಿಯೇ 85ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದು, ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಗೊಂಡವರಲ್ಲಿ 50ಕ್ಕೂ ಹೆಚ್ಚು ಮಕ್ಕಳಿರುವುದು ಆತಂಕ ಮೂಡಿಸಿದೆ. ಹಸಿರು ಪಟಾಕಿಗಳ ಬಳಕೆಯ ಬಗ್ಗೆ ನಿರ್ಲಕ್ಷ್ಯ ಮತ್ತು ಮಳೆಯ ವಾತಾವರಣದಲ್ಲಿ ಪಟಾಕಿ ಸಿಡಿಸುವ ಅಜಾಗರೂಕತೆಯಿಂದ ಅಪಾಯದ ಪ್ರಮಾಣ ಹೆಚ್ಚಾಗಿದೆ.

**ಗಾಯಾಳುಗಳ ವಿವರ; ಮಿಂಟೋ ಕಣ್ಣಿನ ಆಸ್ಪತ್ರೆ:** ಅಕ್ಟೋಬರ್ 22 ರ ಬೆಳಗ್ಗಿನ ವರೆಗೆ 28 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಇಬ್ಬರು ಮಕ್ಕಳು ಒಳರೋಗಿ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**ನಾರಾಯಣ ನೇತ್ರಾಲಯ, ಬೆಂಗಳೂರು:** ಮಂಗಳವಾರ 46 ಜನರು ಚಿಕಿತ್ಸೆ ಪಡೆದಿದ್ದು, ಇಬ್ಬರು ಒಳರೋಗಿ ವಿಭಾಗದಲ್ಲಿದ್ದಾರೆ. ಆರು ಮಂದಿಗೆ ಶಸ್ತ್ರಚಿಕಿತ್ಸೆ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

**ಅಗರ್ವಾಲ್ಸ್ ಕಣ್ಣಿನ ಆಸ್ಪತ್ರೆ:** ಮೂವರು ಮಕ್ಕಳು ಚಿಕಿತ್ಸೆ ಪಡೆದಿದ್ದಾರೆ.

**ಶಂಕರ್ ಕಣ್ಣಿನ ಆಸ್ಪತ್ರೆ:** ಐವರು ಮಕ್ಕಳು ಮತ್ತು 8 ವಯಸ್ಕರು ಚಿಕಿತ್ಸೆ ಪಡೆದಿದ್ದಾರೆ. ಒಬ್ಬ ರೋಗಿಗೆ ಗಂಭೀರ ಗಾಯಗಳಾಗಿದ್ದು ಶಸ್ತ್ರಚಿಕಿತ್ಸೆ ಮಾಡಲಾಗಿದೆ.

**ಕೆ.ಆರ್. ಆಸ್ಪತ್ರೆ, ಮೈಸೂರು:** ಇಬ್ಬರು ಮಕ್ಕಳು ಸೇರಿದಂತೆ ನಾಲ್ವರು ಗಾಯಾಳುಗಳು ಚಿಕಿತ್ಸೆ ಪಡೆದಿದ್ದಾರೆ.

**ರಾಜಾಜಿನಗರದ ಬಾಲಕನಿಗೆ ಗಂಭೀರ ಗಾಯ:** 10 ವರ್ಷದ ಬಾಲಕನೊಬ್ಬ ಪಟಾಕಿ ಹಚ್ಚುವಾಗ ಅದು ಮುಖದ ಹತ್ತಿರ ಸಿಡಿದು ತೀವ್ರ ಗಾಯಗೊಂಡಿದ್ದಾನೆ. ಕಣ್ಣಿನ ರೆಪ್ಪೆಯ ಕೂದಲುಗಳು ಸುಟ್ಟಿದ್ದು, ಕಾರ್ನಿಯಾ ಮೇಲೆ ಮಸಿಯ ಕಣಗಳು ಅಂಟಿಕೊಂಡಿದ್ದವು. ತುರ್ತು ಚಿಕಿತ್ಸೆ ನೀಡಲಾಗಿದ್ದು, ಕಾರ್ನಿಯಾ ಸಂಬಂಧಿತ ಹೆಚ್ಚಿನ ಚಿಕಿತ್ಸೆ ನಡೆಯುತ್ತಿದೆ.

**ವಿದೇಶಿ ಪ್ರಜೆಗೆ ಗಾಯ:** 67 ವರ್ಷದ ವಿದೇಶಿ ವ್ಯಕ್ತಿಯೊಬ್ಬರು ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಹತ್ತಿರದಲ್ಲಿ ಸಿಡಿದ ಪಟಾಕಿಯಿಂದ ಅವರ ಕಣ್ಣಿಗೆ ಗಾಯವಾಗಿದೆ. ರೆಟಿನಾ ಪರೀಕ್ಷೆಗೆ ಒಳಗಾಗಲು ವೈದ್ಯರು ಶಿಫಾರಸು ಮಾಡಿದ್ದಾರೆ.

**ಗಾಯಗಳಿಗೆ ಕಾರಣವಾದ ಪಟಾಕಿಗಳು:** ಗಾಯಗೊಂಡವರಲ್ಲಿ ಶೇ.50ರಷ್ಟು ಪ್ರಕರಣಗಳು ಚಿಕ್ಕದಾದ 'ಬಿಜಿಲಿ' ಪಟಾಕಿಯಿಂದ ಸಂಭವಿಸಿವೆ. ಉಳಿದಂತೆ ಫ್ಲವರ್ ಪಾಟ್, ಆಟಂ ಬಾಂಬ್, ಲಕ್ಷ್ಮೀ ಪಟಾಕಿ ಮತ್ತು ರಾಕೆಟ್ ಪಟಾಕಿಗಳಿಂದಲೂ ಹೆಚ್ಚಿನ ಜನರು ಗಾಯಗೊಂಡಿದ್ದಾರೆ.

**ಮಳೆ, ಅಜಾಗರೂಕತೆ:** ಮಳೆಯ ವಾತಾವರಣದಲ್ಲಿ ಪಟಾಕಿ ಸಿಡಿಸುವಾಗ ಎಚ್ಚರಿಕೆ ವಹಿಸದಿರುವುದು ಹೆಚ್ಚಿನ ಅನಾಹುತಗಳಿಗೆ ಕಾರಣವಾಗಿದೆ. ಪಟಾಕಿಗಳು ತೇವಾಂಶವನ್ನು ಬೇಗನೆ ಹೀರಿಕೊಳ್ಳುವುದರಿಂದ, ನೆಲದ ಮೇಲೆ ಪಟಾಕಿ ಇಟ್ಟು ಬೆಂಕಿ ಅಂಟಿಸುವಾಗ ತಕ್ಷಣ ಬೆಂಕಿ ತಾಗದ ಕಾರಣ ಮತ್ತೊಮ್ಮೆ ಹತ್ತಿರ ಹೋಗಿ ಅಂಟಿಸುವಾಗ ಸಿಡಿದು ಹೆಚ್ಚಿನ ಜನರ ಮುಖಕ್ಕೆ ಗಾಯವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ಕಣ್ಣಿಗೆ ಗಾಯ ಮಾಡಿಕೊಂಡವರಲ್ಲಿ ಪುರುಷರೇ ಹೆಚ್ಚಿದ್ದಾರೆ.

### ವಾಯುಮಾಲಿನ್ಯ ಹದಗೆಟ್ಟಿದೆ

**ಕಳೆದ ಎರಡು ದಿನಗಳಿಂದ ಪಟಾಕಿ ಸಿಡಿತದಿಂದ ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯ ಪ್ರಮಾಣ ಅಧಿಕವಾಗಿದೆ. ಅಕ್ಟೋಬರ್ 21 ರಂದು ಬೆಂಗಳೂರಿನಲ್ಲಿ ಗಾಳಿಯ ಗುಣಮಟ್ಟ 156ಕ್ಕೆ ಏರಿಕೆಯಾಗಿದ್ದು, ಆರೋಗ್ಯಕ್ಕೆ ಹಾನಿಕರವಾಗಿದೆ. ಬ್ರಿಗೇಡ್ ರಸ್ತೆ, ಅರಕೆರೆ, ಬಿಟಿಎಂ ಲೇಔಟ್, ಚೆನ್ನಸಂದ್ರ, ಸಿ.ವಿ. ರಾಮನ್ ನಗರ, ದೊಡ್ಡಬಿದರಕಲ್ಲು, ಹೊಂಬೇಗೌಡ ನಗರ, ಇಸ್ರೋ ಲೇಔಟ್, ಕಲ್ಯಾಣ ನಗರ, ಕೆ.ಆರ್. ಪುರ, ಪೀಣ್ಯ ಸೇರಿದಂತೆ ಹಲವು ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟ ತೀವ್ರ ಕುಸಿದಿತ್ತು.**

## ಭರತನಾಟ್ಯ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾ, ಚಾರ್ಯರ ನೇತೃತ್ವದಲ್ಲಿ ಅಕ್ಟೋಬರ್ 23, ಗುರುವಾರ ಸಂಜೆ 5-15ಕ್ಕೆ ವಿದುಷಿ ಶ್ರೀಮತಿ ಮಾಣಿಕ್ಯದೇವಿ ಮತ್ತು ಶಿಷ್ಯವೃಂದದವರಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿದೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41



## ವಿದ್ಯಾರ್ಥಿಗೆ ಪೈಪ್‌ನಿಂದ ಹಲ್ಲೆ: ಮಕ್ಕಳ ಆಯೋಗದಿಂದ ಸ್ವಯಂ ಪ್ರೇರಿತ ದೂರು

• ಉದಯವಾಹಿನಿ, ಬೆಂಗಳೂರು

ನಗರದ ಸುಂಕದಕಟ್ಟೆಯ ಹೊಯ್ಸಳ ನಗರದ ಪೈಪ್‌ಲೈನ್ ರಸ್ತೆಯ ಸೇಂಟ್ ಮೇರೀಸ್ ಪಬ್ಲಿಕ್ ಶಾಲೆಯಲ್ಲಿ ವಿದ್ಯಾರ್ಥಿಗೆ ಪಿವಿಸಿ ಪೈಪ್‌ನಿಂದ ರಕ್ತ ಹೆಪ್ಪುಗಟ್ಟುವಂತೆ ಥಳಿಸಿದ್ದ ಪ್ರಕರಣ ಸಂಬಂಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ತಿಳಿಸಿದೆ. ಅಲ್ಲದೆ ಶಾಲೆಗೆ ಭೇಟಿ ನೀಡಿ ಘಟನೆಯ ಬಗ್ಗೆ ಮಾಹಿತಿ ಪಡೆದು ಪರಿಶೀಲನೆ ನಡೆಸಿ, ಇಲಾಖಾ ನಿಯಮಾನುಸಾರ ಕ್ರಮ ಕೈಗೊಂಡು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಕೈಗೊಂಡ ಕ್ರಮದ ವರದಿಯನ್ನು 7 ದಿನಗಳ ಒಳಗಾಗಿ ಸಲ್ಲಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆಗೆ ಆಯೋಗವು ನಿರ್ದೇಶಿಸಿದೆ. ಸಂತ್ರಸ್ತ ಬಾಲಕನ ಮನೆಗೆ ಭೇಟಿ ನೀಡಿ ಆಪ್ತ ಸಮಾಲೋಚನೆ ನಡೆಸಿ, ಘಟನೆ ಸಂಬಂಧಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ನೀಡಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ, ಘಟನೆ ಸಂಬಂಧ ದಾಖಲಾಗಿರುವ ಎಫ್‌ಐಆರ್ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸಬೇಕು ಎಂದು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ಸೂಚಿಸಲಾಗಿದೆ.

## ವೃದ್ಧೆಗೆ ಇರಿದು ನಗದು ದೋಚಿದವರ ಸೆರೆ

• ಉದಯವಾಹಿನಿ, ಬೆಂಗಳೂರು

ರಿಯಲ್ ಎಸ್ಟೇಟ್ ಉದ್ಯಮಿ ಮನೆಗೆ ಫುಡ್ ಡೆಲಿವರಿ ಹುಡುಗರ ಸೋಗಿನಲ್ಲಿ ನುಗ್ಗಿ ನಗದು ಹಾಗೂ ದಾಖಲೆಗಳನ್ನು ಕಳವು ಮಾಡಿ ಪರಾರಿಯಾಗಿದ್ದ ಮೂವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕಲಬುರಗಿಯ ಮಡಿವಾಳಪ್ಪ ಅಲಿಯಾಸ್ ಮ್ಯಾಡಿ (26), ಆತನ ಸೋದರ ಗಣೇಶ್ ಚೌಕಿ (24) ಹಾಗೂ ಸಂಬಂಧಿ ವಿಠಲ್ (24) ಬಂಧಿತ ಆರೋಪಿಗಳು. ಆರೋಪಿಗಳಿಂದ 3.75 ಲಕ್ಷ ನಗದು ಮತ್ತು ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಸೆ.14ರ ರಾತ್ರಿ ರಿಯಲ್ ಎಸ್ಟೇಟ್ ಉದ್ಯಮಿ ರಾಹುಲ್ ಅವರ ಮನೆಗೆ ಆರೋಪಿಗಳು ನುಗ್ಗಿ ಅವರ ತಾಯಿ ಕನಕಪುಷ್ಪಾ ಅವರಿಗೆ ಚಾಕುವಿನಿಂದ ಇರಿದು 8 ಲಕ್ಷ ನಗದು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

## ಸಹಜೀವನ ನಡೆಸುತ್ತಿದ್ದ ಪ್ರೇಮಿಗಳು ಆತ್ಮಹತ್ಯೆ

• ಉದಯವಾಹಿನಿ, ಆನೇಕಲ್

ಸಹಜೀವನ ನಡೆಸುತ್ತಿದ್ದ ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಜಿಗಣಿ ಠಾಣೆ ಕಲ್ಲುಬಾಳು ಗ್ರಾಮದಲ್ಲಿ ನಡೆದಿದೆ. ಮೃತರು ಒಡಿಶಾ ಮೂಲದ ಸೀಮಾ ನಾಯಕ್ (25) ಮತ್ತು ರಾಕೇಶ್ ಪಾತ್ರ (23) ಎಂದು ಗುರುತಿಸಲಾಗಿದೆ. ಕಲ್ಲುಬಾಳು ಗ್ರಾಮದ ಮನೆಯೊಂದರಲ್ಲಿ ಸಹಜೀವನ ನಡೆಸುತ್ತಿದ್ದರು. ಎರಡು ದಿನಗಳಿಂದ ಮನೆಯಲ್ಲಿ ಚಲನವಲನ ಕಂಡು ಬಂದಿಲ್ಲ. ಸ್ಥಳೀಯರು ಅನುಮಾನಗೊಂಡು ಕಿಟಕಿ ಹೊಡೆದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದು ಬಂದಿದೆ. ರಾಕೇಶ್ ಪಾತ್ರ ಕುಡಿತದ ಚಟ ಹೊಂದಿದ್ದ. ಹಣಕ್ಕಾಗಿ ಸೀಮಾಳೊಂದಿಗೆ ಪದೇ ಪದೇ ಜಗಳವಾಡುತ್ತಿದ್ದ. ಜಗಳವಾಡಿ ಖಿನ್ನತೆಗೊಳಗಾಗಿದ್ದ ರಾಕೇಶ್, ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೆಳಗ್ಗೆ ಎದ್ದ ಸೀಮಾ, ಗೆಳೆಯ ಮೃತಪಟ್ಟಿರುವನ್ನು ನೋಡಿ ತಾನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಿಗಣಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸರ್ಕಾರಕ್ಕೆ ಎಂಪಿ ರೇಣುಕಾಚಾರ್ಯ ತರಾಟೆ

## ಗೋವುಗಳನ್ನು ಪೂಜೆ ಮಾಡಲು ಕರೆ ಕೊಡ್ತೀರಿ, ಗೋಕಳ್ಳರ ಪ್ರಕರಣ ವಾಪಸ್ ಪಡೆಯುತ್ತೀರಿ

• ಉದಯವಾಹಿನಿ, ಬೆಂಗಳೂರು

ದೇವಸ್ಥಾನಗಳಲ್ಲಿ ಗೋವುಗಳನ್ನು ಪೂಜೆ ಮಾಡಲು ಕರೆ ಕೊಡ್ತೀರಿ. ಮತ್ತೊಂದು ಕಡೆಯಲ್ಲಿ ಗೋಕಳ್ಳರ ಪ್ರಕರಣ ವಾಪಸ್ ಪಡೆಯುತ್ತೀರಿ ಎಂದು ರಾಜ್ಯ ಸರ್ಕಾರಕ್ಕೆ ಮಾಜಿ ಶಾಸಕ ಎಂಪಿ ರೇಣುಕಾಚಾರ್ಯ ತರಾಟೆಗೆ ತೆಗೆದುಕೊಂಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತಾಗಿ ಪೋಸ್ಟ್ ಹಾಕಿರುವ ಅವರು, ಸಚಿವರಾದ ರಾಮಲಿಂಗ ರೆಡ್ಡಿಯವರೇ ಭಾರತದ ಸಂಸ್ಕೃತಿಯಲ್ಲಿ ಗೋವುಗಳನ್ನು ದೇವರೆಂದು ಪೂಜಿಸುವುದು ನಮ್ಮ ಸಂಪ್ರದಾಯ. ಅಂತಹ ಗೋವುಗಳನ್ನು ಕದ್ದ ಗೋ ಕಳ್ಳನಿಗೆ 25 ಲಕ್ಷ ಪರಿಹಾರ ನೀಡಿರುವುದು ಯಾವ ಪುರುಷಾರ್ಥಕ್ಕೆ? ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂದು ಕಡೆ ದೇವಸ್ಥಾನಗಳಲ್ಲಿ ಗೋವುಗಳನ್ನು ಪೂಜೆ ಮಾಡಿ ಎಂದು ಮುಜರಾಯಿ ಇಲಾಖೆಯಿಂದ ಸುತ್ತೋಲೆ ಹೊರಡಿಸುತ್ತೀರಿ. ಮತ್ತೊಂದು ಕಡೆ ಗೋಕಳ್ಳರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹಿಂಪಡೆಯುತ್ತೀರಿ.


ಗೋವುಗಳನ್ನು ಕಡಿದ ಕಳ್ಳನಿಗೆ 25 ಲಕ್ಷ ಪರಿಹಾರ ಘೋಷಿಸುವುದು ನಿಮ್ಮ ಸರ್ಕಾರದ ಗೋಸುಂಬಿತನಕ್ಕೆ ಹಿಡಿದ ಕೈಗನ್ನಡಿ ಎಂದು ಕಿಡಿಕಾರಿದ್ದಾರೆ. ಚಿತ್ತಾಪುರದಲ್ಲಿ ಗೋಗಳ್ಳರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ನಿಮ್ಮದೇ ಸಂಪುಟದ ಸಹೋದ್ಯೋಗಿ ಪ್ರಿಯಾಂಕಾ ಖರ್ಗೆ ಅವರು, ಅತ್ಯಂತ ಮುತವರ್ಜಿ ವಹಿಸಿ ಹಿಂಪಡೆದಿದ್ದಾರೆ. ಇದನ್ನು ಖಂಡಿಸುವ ತಾಕತ್ತು ನಿಮಗೆ ಇದೆಯೇ? ಎಂದು ಪ್ರಶ್ನಿಸಿದ್ದಾರೆ. ಗೋಮಾಂಸ ರಫ್ತು ನಿಲ್ಲಿಸಲು ಕೇಂದ್ರ ಸರ್ಕಾರಕ್ಕೆ ಯಾವ ನೈತಿಕತೆಯಲ್ಲಿ ನೀವು ಉಪದೇಶ ನೀಡಿದ್ದೀರಾ ಆ ಭಗವಂತನೇ ಬಲ್ಲ. ಗೋ ಕಳ್ಳತನ ಮಾಡಿದವರು ಇಲ್ಲವೇ ಅವುಗಳನ್ನು ಹತ್ಯೆ ಮಾಡಿದವರಿಗೆ ನಿರ್ದಾಕ್ಷಿಣ್ಯವಾಗಿ ವಿಶೇಷ ಕಾನೂನು ಕಾಯ್ದೆಯಡಿ ಕಠಿಣ ಕ್ರಮ ಜರುಗಿಸುವ ದಮ್ಮು ತಾಕತ್ತು ನಿಮ್ಮ ಸರಕಾರಕ್ಕೆ ಇಲ್ಲವೇ? ಎಂದು ಸವಾಲು ಹಾಕಿದ್ದಾರೆ. ಓಟ್ ಬ್ಯಾಂಕಿಗಾಗಿ ಅಲ್ಪಸಂಖ್ಯಾತರ ತುಷ್ಟಿಕಾರಣ ಮಾಡುವುದು, ಮತ್ತೊಂದು ಕಡೆ ಇಂತಹ ದನಗಳ್ಳರಿಗೆ ಪರಿಹಾರ ಘೋಷಣೆ ಮಾಡುವುದು ಇದನ್ನೇ ಎಡಬಿಡಂಗಿತನ ಅನ್ನುವುದಲ್ಲವೇ? ಎಂದು ಪ್ರಶ್ನಿಸಿದ್ದಾರೆ.



**ನಮ್ಮ ಬಿಜೆಪಿ ಪಕ್ಷದ ಬದ್ಧತೆ**

**ಒಂದು ಕಡೆಯಲ್ಲಿ ಗೋವುಗಳನ್ನು ಪೂಜೆ ಮಾಡಲು ಕರೆ ಕೊಡ್ತೀರಿ. ಮತ್ತೊಂದು ಕಡೆಯಲ್ಲಿ ಗೋಕಳ್ಳರ ಪ್ರಕರಣ ವಾಪಸ್ ಪಡೆಯುತ್ತೀರಿ ಎಂದು ರಾಜ್ಯ ಸರ್ಕಾರ ಹಾಗೂ ಸಚಿವರಾದ ರಾಮಲಿಂಗಾರೆಡ್ಡಿ ಮತ್ತು ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಪಕ್ಷದ ಮಾಜಿ ಶಾಸಕ ಎಂಪಿ ರೇಣುಕಾಚಾರ್ಯ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಕುರಿತಾಗಿ ಅವರು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಪ್ರಾಯ ಹೊರಹಾಕಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಗೋಮಾಂಸವನ್ನು ವಿದೇಶಕ್ಕೆ ರಫ್ತು ಮಾಡುವುದನ್ನು ನಿಷೇಧ ಮಾಡಿದೆ ಎಂದ ಅವರು, ಇದು ನಮ್ಮ ಬಿಜೆಪಿ ಪಕ್ಷದ ಬದ್ಧತೆ ಎಂದು ಉಲ್ಲೇಖಿಸಿದ್ದಾರೆ.**

**ಕೇಂದ್ರ ಸರ್ಕಾರಕ್ಕೆ ಗೋಮಾಂಸ ರಫ್ತು ನಿಲ್ಲಿಸುವುದನ್ನು ತಡೆಗಟ್ಟುವ ಉಪದೇಶ ನೀಡುವ ಮೊದಲು ನಿಮ್ಮ ಬ್ರದರ್ಸ್ ಗಳಂತಿರುವ ಗೋಕಳ್ಳರನ್ನು ಹೆಡೆಮುರಿ ಕಟ್ಟಿ ನಂತರ ಕೇಂದ್ರದ ವಿರುದ್ಧ ಮಾತನಾಡಿ. ಗೋವುಗಳನ್ನು ದೇವರು ಎಂದು ಪೂಜಿಸುವ ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಗೋಮಾಂಸವನ್ನು ವಿದೇಶಕ್ಕೆ ರಫ್ತು ಮಾಡುವುದನ್ನು ನಿಷೇಧ ಮಾಡಿದೆ**
**- ಎಂಪಿ ರೇಣುಕಾಚಾರ್ಯ, ಮಾಜಿ ಶಾಸಕ**



## ಸತತ ಮಳೆ, ಗಾಳಿಗೆ ನೆಲಕಚ್ಚಿದ ರಾಗಿ ಬೆಳೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ದೊಡ್ಡಬಳ್ಳಾಪುರ

ತಾಲ್ಲೂಕಿನಾದ್ಯಂತ ಒಂದು ವಾರದಿಂದಲೂ ಸುರಿದ ಮಳೆಗೆ ರಾಗಿ ಬೆಳೆ ನೆಲಕಚ್ಚಿದ್ದು, ರೈತರ ಆತಂಕಕ್ಕೆ ಕಾರಣವಾಗಿದೆ. ರಾಗಿ, ಜೋಳ ಮತ್ತಿತರ ಬೆಳೆಗಳಿಗೆ ಮಳೆ ಕೊರತೆ ಅನುಭವಿಸುತ್ತಿದ್ದ ರೈತರ ಪಾಲಿಗೆ ಇದೀಗ ಸುರಿಯುತ್ತಿರುವ ಮಳೆ ಸಹ ಬೆಳೆ ನಷ್ಟದ ಭೀತಿ ಮೂಡಿಸಿದೆ. ತಾಲ್ಲೂಕಿನಲ್ಲಿ 54,730 ಎಕರೆ ರಾಗಿ ಬಿತ್ತನೆ ಮಾಡಲಾಗಿದೆ. ರಾಜ್ಯ ಸರ್ಕಾರ ರಾಗಿ ಖರೀದಿಗೆ ಬೆಂಬಲ ಹೆಚ್ಚಿಸಿರುವ ಕಾರಣ ಕಳೆದ ವರ್ಷಕ್ಕಿಂತ ಹೆಚ್ಚಿನ ಬಿತ್ತನೆ ಮಾಡಲಾಗಿದೆ. ಈಗ ಸುರಿಯುತ್ತಿರುವ ಮಳೆಯಿಂದಾಗಿ ರಾಗಿ ಹೊಲಗಳು ಮಲಗಿದ್ದು, ಸಾಲ ಮಾಡಿ ರಾಗಿ ಬೆಳೆ ಮಾಡಿದ್ದ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಪ್ರಸ್ತುತ ಕಾಳು ಕಟ್ಟುತ್ತಿರುವ ಹಂತದಲ್ಲಿರುವ ರಾಗಿ ಬೆಳೆ ತೂಕ ಹಾಗೂ ತೇವಾಂಶ ಹೆಚ್ಚಾಗಿರುವ ಕಾರಣ ನೆಲಕ್ಕುರುಳಿದೆ. ಬೆಳೆ ನಷ್ಟವಾಗುವ ಭೀತಿ ಎದುರಾಗಿದೆ. ಹಾಕಿದ ಬಂಡವಾಳ ಕೈಗೆ ಬರುತ್ತದೋ ಇಲ್ಲವೋ ಎನ್ನುವ ಆತಂಕ ಕಾಡಲಾರಂಭಿಸಿದೆ. ರಾಗಿ ಹೊಲ ನೆಲಕ್ಕೆ ಮಲಗಿದರೆ ಮಣ್ಣಾಗಿ ಮೇವಿನ ಕೊರತೆಯೂ ಎದುರಾಗಲಿದೆ. ತಾಲ್ಲೂಕಿನಲ್ಲಿ ಮಳೆಯಿಂದ ರಾಗಿ ನೆಲಕಚ್ಚಿರುವ ಕಾರಣ ರೈತರು ನಷ್ಟಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ನಷ್ಟಕ್ಕೆ ಒಳಗಾಗುವ ರೈತರಿಗೆ ಪರಿಹಾರ ದೊರಕಿಸಲು ಕ್ರಮಕೈಗೊಳ್ಳಬೇಕು ಎಂದು ರೈತರು ಮನವಿ ಮಾಡಿದ್ದಾರೆ. ಈಗಾಗಲೇ ಅನೇಕ ರೈತರು ಫಸಲ್ ವಿಮೆ ಯೋಜನೆಯಡಿ ಹಣ ಕಟ್ಟಿದ್ದು, ಕೇವಲ ವಿಮೆ ಹಣ ಪಡೆಯಲು ಸೀಮಿತವಾಗದೆ ವಿಮಾ ಸಂಸ್ಥೆಯಿಂದ ಕೃಷಿ ಇಲಾಖೆ ಅಧಿಕಾರಿಗಳು ಪರಿಹಾರ ನೀಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

## ಬೆಂ.ಗ್ರಾ ಜಿಲ್ಲೆಯಲ್ಲಿ ಶೇ. 87.30ರಷ್ಟು ಸಮೀಕ್ಷೆ

• ಉದಯವಾಹಿನಿ, ದೊಡ್ಡಬಳ್ಳಾಪುರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಗಳಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಶೇ.87.30ರಷ್ಟು ಮುಕ್ತಾಯವಾಗಿದೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಮೂರು ದಿನಗಳ ಬಿಡುವು ನೀಡಲಾಗಿದೆ. ಅಕ್ಟೋಬರ್ 31ರವರೆಗೂ ಸಮೀಕ್ಷೆ ನಡೆಯಲಿದೆ.



ಆದರೆ, ಸಮೀಕ್ಷೆ ಕೆಲಸದಿಂದ ಶಿಕ್ಷಕರನ್ನು ಬಿಡುಗಡೆಗೊಳಿಸಲಾಗಿದ್ದು ಅಕ್ಟೋಬರ್ 21ರಿಂದ ಶಾಲೆಗಳಲ್ಲಿ ತರಗತಿಗಳು ಪ್ರಾರಂಭವಾಗಲಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎ.ಬಿ.ಬಸವರಾಜು ತಿಳಿಸಿದ್ದಾರೆ. ಈ ಬಗ್ಗೆ ಮಾಹಿತಿ ನೀಡಿ, ಸಮೀಕ್ಷೆ ಕೆಲಸದಲ್ಲಿ ಶಿಕ್ಷಕರು ಸೇರಿದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕೆಲಸ ನಿರ್ವಹಿಸಿದ್ದಾರೆ.

ಇನ್ನೂ ಬಾಕಿ ಉಳಿದಿರುವ ಸಮೀಕ್ಷೆ ಕೆಲಸವನ್ನು ಶಿಕ್ಷಣ ಇಲಾಖೆಯ ಬಿಆರ್‌ಸಿ, ಸಿಆರ್‌ಸಿ, ಇಸಿಒ, ನಗರಸಭೆ ಸಿಬ್ಬಂದಿಯನ್ನು ಬಳಸಿಕೊಂಡು ಪೂರ್ಣಗೊಳಿಸಲಾಗುವುದು. ವಾಣಿಜ್ಯ ಮಳಿಗೆ, ಹಾಸ್ಟೆಲ್, ಜನವಸತಿ ಇಲ್ಲದ ಇತರೆ ಮನೆಗಳನ್ನು ಸಮೀಕ್ಷೆ ಪಟ್ಟಿಯಿಂದ ತೆಗೆಯಲಾಗಿದೆ ಎಂದರು. ತಾಲ್ಲೂಕುವಾರು ಸಮೀಕ್ಷೆಯಲ್ಲಿ ಹೊಸಕೋಟೆ ತಾಲ್ಲೂಕು ಶೇ.95.68ರಷ್ಟು ಸಮೀಕ್ಷೆ ಪೂರ್ಣಗೊಂಡಿದ್ದರೆ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಶೇ.79.37ರಷ್ಟು ಸಮೀಕ್ಷೆ ಪೂರ್ಣಗೊಳ್ಳುವ ಮೂಲಕ ನಾಲ್ಕನೇ ಸ್ಥಾನದಲ್ಲಿದೆ ಎಂದರು.

**ತಾಲ್ಲೂಕು ವಾರು ಸಮೀಕ್ಷೆ ಅಂಕಿ ಅಂಶ**

- **ದೇವನಹಳ್ಳಿ; ಶೇ.83.08**
- **ದೊಡ್ಡಬಳ್ಳಾಪುರ; ಶೇ.79.37**
- **ಹೊಸಕೋಟೆ; ಶೇ.95.68**
- **ನೆಲಮಂಗಲ; ಶೇ.92.03**

# ಡಿಕೆಶಿ ಸಂಕಲ್ಪಕ್ಕೆ ಟಿಬಿ ಜಯಚಂದ್ರ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು



ದೇವರನ್ನು ನೋಡಿದ್ದೇವಾ? ನನಗೆ ಪ್ರತ್ಯಕ್ಷವಾಗಿ ಕಾಣುವುದು ಹೈಕಮಾಂಡ್! ಎಂದು ಹಿರಿಯ ಕಾಂಗ್ರೆಸ್ ಶಾಸಕ ಟಿಬಿ ಜಯಚಂದ್ರ ಹೇಳಿದರು. ಡಿಸಿಎಂ ಡಿಕೆ ಶಿವಕುಮಾರ್ ಅವರು ಮಂತ್ರಾಲಯದಲ್ಲಿ ಸಂಕಲ್ಪ ಪೂಜೆ ಮಾಡಿದ್ದಕ್ಕೆ ಪ್ರತಿಕ್ರಿಯೆ ನೀಡಿದರು. ಮಂತ್ರಾಲಯದಲ್ಲಿ ಡಿಕೆಶಿ ಸಂಕಲ್ಪ ವಿಚಾರವಾಗಿ ನಾನು ಯಾವುದೆ ಪ್ರತಿಕ್ರಿಯೆ ಕೊಡುವುದಿಲ್ಲ. ಅದು ಅವರ ವೈಯುಕ್ತಿಕ ಅಭಿಪ್ರಾಯ. ನಾನು ಮುಜರಾಯಿ ಸಚಿವನಾಗಿದ್ದೆ 34000 ದೇವಸ್ಥಾನ ವ್ಯಾಪ್ತಿಯಲ್ಲಿ ಬರುತ್ತದೆ. ದೇವರು ಎನ್ನುವುದು ಮನುಷ್ಯನ ಸೃಷ್ಟಿ, ಅದೊಂದು ನಂಬಿಕೆ. ಅದು ಅವರವರ ವಿವೇಚನೆಗೆ ತಕ್ಕಂತೆ ಅವರು ಭಾವಿಸುತ್ತಾರೆ.


ನಾನು ಯಾವ ದೇವಸ್ಥಾನಕ್ಕೆ ಹೋಗಲ್ಲ. ನನಗೆ ದೇವಸ್ಥಾನ ಅಂದರೆ ತುಮಕೂರು ಜಿಲ್ಲೆ ಶಿರಾ ಹಾಗೂ ಜನ ಜನರಿಗಿಂತ ದೊಡ್ಡ ದೇವರು ಯಾರೂ ಇಲ್ಲ ಎಂದರು. ಮಂತ್ರಿ ಸ್ಥಾನದ ವಿಚಾರವಾಗಿ ಇದೇ ವೇಳೆ ಮಾತನಾಡಿ, ದೈವಾನುಗ್ರಹ ಸರಿ ದೈವವನ್ನು ಎಲ್ಲಾದರೂ ನೋಡಿದ್ದೇವಾ? ಪ್ರತ್ಯಕ್ಷವಾಗಿ ಕಾಣುವುದು ಹೈ ಕಮಾಂಡ್. ನಮಗೆ ಕಣ್ಣಿಗೆ ಕಾಣುವಂತದ್ದು ವರಿಷ್ಠರು ಪಕ್ಷದಲ್ಲಿ ವರಿಷ್ಠರೇ ಮುಖ್ಯ ಆಗ್ತಾರೆ ಎಂದರು. ನಾನು ಎಂದಿಗೂ ಮಂತ್ರಿ ಸ್ಥಾನ ಆಸೆ ಪಟ್ಟವನು ಇಲ್ಲ.

ಒಂದೇ ಮನೆಯಲ್ಲಿ ಇದ್ದೇನೆ ಬೇರೆ ಕಡೆ ಯೋಚನೆ ಮಾಡಿಲ್ಲ. 10 ಚುನಾವಣೆ ನೋಡಿದ್ದೇನೆ 7 ಸಲ ಗೆದ್ದಿದ್ದೇನೆ. 35 ವರ್ಷ ರಾಜಕೀಯ ಮಾಡಿದ್ದೇವೆ. ಹಿಂದೆಯೂ ಮಂತ್ರಿಯಾಗಿದ್ದೆ, ಮುಂದೆ ನೋಡೋಣ ಎಂದರು. ಸಿಎಂ ಸ್ಥಾನ ಖಾಲಿ ಇಲ್ಲ, ಒಂದು ಬಾರಿ ಆಯ್ಕೆ ಆದರೆ ಐದು ವರ್ಷ ಅನ್ನೋದು ನಮ್ಮ ಭಾವನೆ. ಅಧಿಕಾರ ಹಂಚಿಕೆ ವಿಚಾರ ಬಂದರೆ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಹಂಚಿಕೆ ವಿಚಾರ ಬಂದರೆ ಹೈ ಕಮಾಂಡ್ ಡಿಸೈಡ್ ಮಾಡುತ್ತದೆ. ಆದರೆ ಸಿಎಂ ಕುರ್ಚಿ ಖಾಲಿ ಇಲ್ಲ ಎಂದರು. ಕೇಂದ್ರದ ಅನುದಾನ ವಿಚಾರಕ್ಕೆ, ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಮಾಡುವ ಸಂದರ್ಭದಲ್ಲಿ ಕೇಂದ್ರಕ್ಕೆ ಆಸಕ್ತಿ ಇಲ್ಲ. ಕರ್ನಾಟಕದ ಬಗ್ಗೆ ಅವರಿಗೆ ಆಸಕ್ತಿ ಇಲ್ಲ. ನಮ್ಮ ಸಂಸದರು ಇದರ ಬಗ್ಗೆ ಮಾತನಾಡಬೇಕು. ನಮ್ಮ ಯೋಜನೆಗಳ ಬಗ್ಗೆ ಕೇಂದ್ರದಲ್ಲಿ ಚರ್ಚೆ ಆಗಲ್ಲ. ನಮಗೆ ನೀರಿನ ಯೋಜನೆ ತುಂಬಾ ಮುಖ್ಯವಾಗಿದೆ. ಕೃಷ್ಣಾ ಮೇಲ್ದಂಡೆ, ಮೇಕೆದಾಟು ಸೇರಿದಂತೆ ಅನೇಕ ಯೋಜನೆ ಇವೆ. ನೀರಾವರಿ ಯೋಜನೆ ಸ್ಥಗಿತ ಆಗಿದೆ ಅಂದರೆ ಅದಕ್ಕೆ ಕೇಂದ್ರವೇ ಹೊಣೆ ಎಂದು ವಾಗ್ದಾಳಿ ನಡೆಸಿದರು. ಆರ್ ಎಸ್ ಎಸ್ ವಿಚಾರವಾಗಿ ನಾನು ವ್ಯಾಖ್ಯಾನ ಮಾಡಲ್ಲ. ಆಡಳಿತ ಮತ್ತು ವಿಪಕ್ಷದವರಿಗೆ ಹೇಳೋದು ಅಭಿವೃದ್ಧಿ ಬಗ್ಗೆ ಮಾತಾಡಲಿ. ಈ ರೀತಿ ಚಿಕ್ಕ ವಿಚಾರ ದೊಡ್ಡ ವಿಚಾರ ಮಾಡೋದು ಸರಿಯಲ್ಲ.

ನವೆಂಬರ್ ಗೆ ಸಂಪುಟ ಪುನರ್ ರಚನೆ ವಿಚಾರಕ್ಕೆ, ನವೆಂಬರ್ ಗೆ 20 ಕ್ಕೆ ಎರಡು ವರ್ಷ ಆಗಲಿದೆ ಅಧಿಕಾರ ಗದ್ದುಗೆ ಹಿಡಿದು. ಎರಡೂವರೆ ವರ್ಷ ಆದ ಬಳಿಕ ಹೊಸ ಸ್ವರೂಪ ಕೊಡಬೇಕು ಅನ್ನೋ ಚರ್ಚೆ ಇದೆ. ಎರಡೂವರೆ ವರ್ಷ ಆದ ಬಳಿಕ ಯಾವ ನಿರ್ಣಯ ಅನ್ನೋದು ಸಿಎಂ, ಡಿಸಿಎಂ ಹಾಗೂ ಹೈಕಮಾಂಡ್ ಮಾಡ್ತಾರೆ ಎಂದರು.

# ಆರ್‌ಎಸ್‌ಎಸ್ ಮುಖಂಡರಿಗೆ ಪ್ರಿಯಾಂಕ್ ಖರ್ಗೆ ಸವಾಲು

• ಉದಯವಾಹಿನಿ, ಬೆಂಗಳೂರು



ದಲಿತ ಸಂಘಟನೆಗಳಿಗೆ ನಾನು ಪ್ರಾಯೋಜಕ ಎಂದು ಅಂದುಕೊಳ್ಳಿ. ಆರ್‌ಎಸ್ ಎಸ್ ಸಂಘಟನೆಯ ಹಿಂದೆ ಯಾರಿದ್ದಾರೆ? ಅವರಿಗೆ ಎಲ್ಲಿಂದ ದುಡ್ಡು ಬರುತ್ತದೆ ಎಂಬುವುದನ್ನು ಹೇಳಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದ್ದಾರೆ. ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು, ಮತ್ತೆ ಆರ್ ಎಸ್ ಎಸ್ ವಿರುದ್ಧ ವಾಗ್ದಾಳಿ ನಡೆಸಿದರು.

ದಲಿತ ಸಂಘಟನೆಗೆ ಪ್ರಿಯಾಂಕ್ ಪ್ರಾಯೋಕರು ಎಂಬ ವಿಚಾರಕ್ಕೆ ಪ್ರತಿಕ್ರಿಯೆ ನೀಡಿ, ಹೌದ್ರೀ ನಾನು ಪ್ರಾಯೋಜಕ ಅಂತ ತಿಳಿದುಕೊಳ್ಳಿ. ಆರ್‌ಎಸ್‌ಎಸ್‌ಗೆ ಯಾರಿದ್ದಾರೆ ಹೇಳಲಿ. ಆರ್‌ಎಸ್‌ಎಸ್‌ಗೆ ಎಲ್ಲಿಂದ ದುಡ್ಡು ಬರುತ್ತೆ ಅನ್ ರಿಜಿಸ್ಟರ್ ಸಂಸ್ಥೆಗೆ ಎಲ್ಲಿಂದ ಬರುತ್ತೆ. ಬಟ್ಟೆ ತೆಗೆಯೋಕೆ, ಬಿಲ್ಡಿಂಗ್ ಕಟ್ಟೋಕೆ ಎಲ್ಲಿಂದ ಬರುತ್ತೆ. ನೋಂದಣಿ ಆಗದ ಸಂಸ್ಥೆಗೆ ಏನೂ ತೋರಿಸುವ ಅಗತ್ಯ ಇರುವುದಿಲ್ಲ ಎಂದರು. ಕಲ್ಲು ತೂರಾಟಗಾರರ ಕೇಸ್ ವಾಪಸ್ ತೆಗೆದುಕೊಳ್ಳಲಾಗಿದೆ ಎಂಬ ಆರೋಪಕ್ಕೆ, ಯಾವ ಕಾನೂನು ಬಾಹಿರ ಸಲಹೆ ಕೊಟ್ಟಿಲ್ಲ. ಬೊಮ್ಮಾಯಿ ಹೋಂ ಮಿನಿಸ್ಟರ್ ಇದ್ರು. ಆಗ ಮಂಗಳೂರಿಗೆ ಹೋಗಿದ್ರು.

ಕೆಲವು ಸಂಘಟನೆಯವರು ಅವರನ್ನ ಭೇಟಿ ಮಾಡಿದ್ರು. ಆಗ ನೀವು ಏನು ಬೇಕುಮಾಡಿ ನಾವಿದ್ದೇವೆ ಅಂತ ಅವರಿಗೆ ಹೇಳಿದ್ದರು. ಸುಮ್ಮನೆ ಹಿಟ್ ಆಂಡ್ ರನ್ ಮಾಡೋದು ಬೇಡ ಎಂದು ತಿರುಗೇಟು ನೀಡಿದರು.

ನಮ್ಮ ವೈಯುಕ್ತಿಕ ವಿಚಾರ ಮಾತನಾಡ್ತಾರೆ. ನಮ್ಮ ಕುಟುಂಬಕ್ಕೆ ಬೆದರಿಕೆ ಹಾಕ್ತಾರೆ. ಸಿಎಂ ಸಿದ್ದರಾಮಯ್ಯ, ಬಿಕೆ ಹರಿಪ್ರಸಾದ್ ಬಗ್ಗೆ ಮಾತನಾಡ್ತಾರೆ. ಸಂತೋಷ್ ಲಾಡ್, ದಿನೇಶ್ ಗುಂಡೂರಾವ್ ವಿರುದ್ಧನೂ ಹೇಳ್ತಾರೆ. ಮೊದಲು ಆರ್ ಎಸ್ ಎಸ್ ದಾಖಲೆ, ನನ್ನ ಮುಖದ ಮೇಲೆ ಎಸೆದು ಬಿಡಿ. ನಮ್ಮದು ಅಧಿಕೃತ ಸಂಘಟನೆ ಅಂತ ಹೊರಡಿಸಿ. ಅದನ್ನು ತೋರಿಸಿದ್ರೆ ಆಯ್ತಲ್ಲ. ಯಾರು ನಿಮ್ಮನ್ನು ಕೇಳ್ತಾರೆ ಎಂದು ಸವಾಲು ಹಾಕಿದರು.

ಬಿಎಸ್ ಯಡಿಯೂರಪ್ಪ ಹಾಗೂ ಅನಂತ್ ಕುಮಾರ್ ಸಂಭಾಷಣೆಯ ಕುರಿತಾದ ವಿಡಿಯೋವನ್ನು ಬಿಡುಗಡೆ ಮಾಡಿರುವ ಕುರಿತಾಗಿ ಅನಂತ್ ಕುಮಾರ್ ಪುತ್ರಿ ಟ್ವೀಟ್ ವಿಚಾರವಾಗಿ ಮಾತನಾಡಿ, ಅವರು ರಾಜಕೀಯದಲ್ಲಿ ಇದ್ದಾರೋ ಇಲ್ವೋ ಗೊತ್ತಿಲ್ಲ. ಅವರು ವಕೀಲರು ಇದ್ದಾರೆ ಅಂತಿದೆ.

ದುರ್ದೈವ ವಿಡಿಯೋದಲ್ಲಿ ಅನಂತ್ ಕುಮಾರ್ ಇದ್ದಾರೆ. ಅದು ಯಾರ ಧ್ವನಿ ಅಂತ ರಿಪೋರ್ಟ್ ಇದೆ. ಎಫ್ ಎಸ್ ಎಲ್ ರಿಪೋರ್ಟ್ ಇದೆ. ಒಮ್ಮೆ ಅನಂತ್ ಕುಮಾರ್ ಕಲಬುರಗಿಗೆ ಬಂದಿದ್ರು. ನನ್ನ ಬಗ್ಗೆ ಏನು ಹೇಳಿದ್ರು ತಿಳಿಯಲಿ. ಅವರ ಕುಟುಂಬದ ಬಗ್ಗೆ ಬಿಜೆಪಿ ನಾಯಕರು ಹೇಗೆ ನಡೆದುಕೊಂಡ್ರು. ಜನರೇ ಇದರ ಬಗ್ಗೆ ಚರ್ಚೆ ಮಾಡ್ತಿದ್ದಾರೆ ಅಲ್ವಾ ಎಂದು ಪ್ರಶ್ನಿಸಿದರು.

# ಗುಂಡಿಗಳ ಸಾಮ್ರಾಜ್ಯಕ್ಕೆ ಸಿಗವುದೇ ಮುಕ್ತಿ?

• ಉದಯವಾಹಿನಿ, ಹೊಸಕೋಟೆ



ನಗರ ಮತ್ತು ನಗರಕ್ಕೆ ಹೊಂದಿಕೊಂಡ ಹೊರವಲಯದ ರಸ್ತೆಗಳಲ್ಲಿ ವಾಹನ ಸಂಚಾರ ಮತ್ತು ಪಾದಚಾರಿಗಳ ಓಟಾಟ ಸ್ವಲ್ಪವೂ ಸುರಕ್ಷಿತವಲ್ಲ. ಯಾವುದೇ ಅಪಘಾತ ಸಂಭವಿಸಿದರೆ ಆಸ್ಪತ್ರೆ ಸೇರುವುದು ಖಚಿತ ಎನ್ನುವಂತಿದೆ ಇಲ್ಲಿನ ಪರಿಸ್ಥಿತಿ. ಎಲ್ಲಿ ನೋಡಿದರೂ ಗುಂಡಿಗಳದ್ದೆ ಸಾಮ್ರಾಜ್ಯ. ಚರಂಡಿ ನೀರು ತುಂಬಿ ಇದು ರಸ್ತೆಯೋ ಅಥವಾ ಚರಂಡಿಯೋ ಎನ್ನುವಂತಹ ದುಸ್ಥಿತಿ ಇಲ್ಲಿದೆ. ಇಂತಹ ರಸ್ತೆಗಳಲ್ಲಿ ಪ್ರತಿದಿನ ದ್ವಿಚಕ್ರ ವಾಹನಗಳಲ್ಲಿ ಕಚೇರಿಗೆ ಹೋಗುವವರ ಸ್ಥಿತಿ ನರಕತಯಾತನೆ. ಶಾಲಾ-ಕಾಲೇಜುಗಳಿಗೆ ತೆರಳುವ ಮಕ್ಕಳು ಮತ್ತು ಹಿರಿಯರು ಪ್ರತಿದಿನವೂ ಪರದಾಡಬೇಕಾಗಿದೆ.

**ಎಲ್ಲೆಲ್ಲಿ ಕಚ್ಚಾ ರಸ್ತೆಗಳಿವೆ:** ನಗರಸಭೆ ಮತ್ತು ಪಂಚಾಯಿತಿ ವ್ಯಾಪ್ತಿಗೆ ಬರುವ ಸಂಗೊಳ್ಳಿ ರಾಯಣ್ಣ ಸರ್ಕಲ್ ಬಳಿಯ ಕೆಲವು ಓಣಿಗಳು. 29 ಮತ್ತು 31ನೇ ವಾರ್ಡ್ ಕೆಲ ಓಣಿ. ಮುನಿಯಪ್ಪ ಬಡಾವಣೆ, ಮಲ್ಲಣ್ಣ ಬಡಾವಣೆ, ಭಜಂತ್ರಿ ಬಡಾವಣೆ, ಪಾರ್ವತಿ ನಗರ, ಅನ್ನಪೂರ್ಣೇಶ್ವರಿ ನಗರ, ಕಮ್ಮವಾರಿ ನಗರದ ಚೌಡೇಶ್ವರಿ ದೇವಾಲಯದ ರಸ್ತೆ, ಕೆಲವು ಓಣಿ.23ನೇ ವಾರ್ಡ್ ಕೆಲ ಓಣಿ. ಗಣಗಲು ರಸ್ತೆ, ರಾಘವೇಂದ್ರ ಟಾಕೀಸ್ ಸರ್ಕಲ್ ಬಳಿ ಕೆಲ ಓಣಿಯಲ್ಲಿ ಕಚ್ಚಾ ರಸ್ತೆಗಳು ಇವೆ. ನಗರಕ್ಕೆ ಹೊಂದಿಕೊಂಡ ಪಂಚಾಯಿತಿ ವ್ಯಾಪ್ತಿಯ ಕೆಲವು ಬಡಾವಣೆಗಳ ಓಣಿಗಳ ಸ್ಥಿತಿಯೂ ಇದೇ ರೀತಿ ಇದೆ. ಕಮ್ಮವಾರಿ ನಗರದ 29ನೇ ವಾರ್ಡ್‌ನ ಚೌಡೇಶ್ವರಿ ದೇವಸ್ಥಾನಕ್ಕೆ ಹೋಗುವ ರಸ್ತೆ ಡಾಂಬರಿಕರಣ ಕಂಡು ಎಷ್ಟೋ ವರ್ಷಗಳಾಗಿವೆ ಎನ್ನುತ್ತಾರೆ ಸ್ಥಳೀಯರು. ಇದೇ ರಸ್ತೆಯಲ್ಲೇ ಕಾಲ್ಡ್‌ವೆಲ್ ಅಕಾಡೆಮಿ, ಮೇಧಶ್ರೀ ಎಂಬ ಎರಡು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸುಮಾರು 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಪ್ರತಿದಿನ ಬೆಳಿಗ್ಗೆ ಈ ಹದಗೆಟ್ಟ ರಸ್ತೆಯಲ್ಲಿಯೇ ದ್ವಿಚಕ್ರ ವಾಹನಗಳಲ್ಲಿ ತಮ್ಮ ಮಕ್ಕಳನ್ನು ಬಿಡಲು ಬರುವ ಪಾಲಕರ ಪರಿಸ್ಥಿತಿಯಂತೂ ಹೇಳತೀರದು ಎನ್ನುತ್ತಾರೆ ಸ್ಥಳೀಯರು.

## ನಾನೆಲ್ಲಿ ಬೆಂಗಳೂರು ರಸ್ತೆ ದುರಸ್ತಿ ಮಾಡುತ್ತೇನೆ ಅಂದಿದ್ದೆ? ಮೂಲ ತೋರಿಸಿ ಎಂದ ಕಿರಣ್ ಮಜುಂದಾರ್ ಷಾ

# ನಾನು ಕನ್ನಡತಿ ಎಂದು ಕಾಮೆಂಟ್ ಮಾಡುವವರಿಗೆ ತಿರುಗೇಟು

• ಉದಯವಾಹಿನಿ, ಬೆಂಗಳೂರು

ಬಯೋಕಾನ್ ಮುಖ್ಯಸ್ಥೆ ಕಿರಣ್ ಮುಜುಂದಾರ್ ಶಾ, ಕರ್ನಾಟಕ ಸರ್ಕಾರದ ನಡುವೆ ಬೆಂಗಳೂರಿನ ರಸ್ತೆ ಕುರಿತು ಜಟಾಪಟಿ ನಡೆಯುತ್ತಿತ್ತು. ಈ ಬೆನ್ನಲ್ಲೇ ಕಿರಣ್ ಮುಜುಂದಾರ್ ಶಾ ಬೆಂಗಳೂರಿನ 10 ರಸ್ತೆಗಳನ್ನು ಅಭಿವೃದ್ಧಿ ಪಡಿಸಲಿದ್ದಾರೆ ಎಂದು ವರದಿಯಾಗಿತ್ತು. ಇನ್ನೂ ಈ ಕುರಿತು ಪ್ರತಿಕ್ರಿಯಿಸಿರುವ ಕಿರಣ್ ನಾನು ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಾಗಿ ಹಲವು ಮಾಧ್ಯಮಗಳು ಸುದ್ದಿ ವರದಿ ಮಾಡುತ್ತಿವೆ. ಆದರೆ ಅದಕ್ಕೆ ಸೂಕ್ತ ಮೂಲ ಹಂಚಿಕೊಳ್ಳಿ ಎಂದು ಹೇಳುವ ಮೂಲಕ ರಸ್ತೆ ದುರಸ್ತಿ ಮಾಡುತ್ತಾರೋ ಇಲ್ಲವೋ ಎಂಬ ಮತ್ತೊಂದು ಚರ್ಚೆ ಹುಟ್ಟುಹಾಕಿದ್ದಾರೆ. ಬಯೋಕಾನ್ ಮುಖ್ಯಸ್ಥೆ ಬೆಂಗಳೂರಿನ 10 ರಸ್ತೆಗಳನ್ನು ಅಭಿವೃದ್ಧಿ ಪಡಿಸುತ್ತಾರೆಂದು ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದು, ಅಷ್ಟೇ ಅಲ್ಲದೇ ಈ ವರದಿಗಳನ್ನು ಆಧರಿಸಿ ಪಿ.ಚಿದಂಬರಂ ಬೆಂಗಳೂರು ರಸ್ತೆ ದುರಸ್ತಿಗೆ ಕಿರಣ್ ಮುಜುಂದರ್ ಶಾ ಬೆಂಗಳೂರಿನ ರಸ್ತೆ ಅಭಿವೃದ್ಧಿ ಮಾಡುವುದಕ್ಕೆ ಮುಂದಾಗುತ್ತಿರುವುದು ಬಹಳ ಸಂತೋಷದ ವಿಷಯ. ಸರ್ಕಾರ ರಸ್ತೆ ದುರಸ್ತಿಗೆ ಟೆಂಡರ್ ಕರೆದು ಕಿರಣ್ ಮುಜುಂದಾರ್ ಶಾರಂತಹ ಉದ್ಯಮಿಗಳಿಗೆ ಮೇಲ್ವಿಚಾರಣೆ ಹೊಣೆ ವಹಿಸಿ ಎಂದು ಟ್ವೀಟ್ ಮಾಡುತ್ತಿದ್ದಂತೆ ಎಚ್ಚೆತ್ತ ಕಿರಣ್ ಈ ವರದಿಗಳ ಕುರಿತು ಪ್ರತಿಕ್ರಿಯೆ ನೀಡಿದ್ದಾರೆ.

**ರಸ್ತೆ ಅಭಿವೃದ್ಧಿ ಕುರಿತು ಬಿತ್ತರವಾದ ವರದಿಗಳಲ್ಲೇನಿತ್ತು?:** ಬೆಂಗಳೂರಿನ ರಸ್ತೆ ಗುಂಡಿಗಳ ಬಗ್ಗೆ ಉದ್ಯಮಿಗಳು ಹಾಗೂ ಸರ್ಕಾರದ ನಡುವಿನ ಸೋಶಿಯಲ್ ಮೀಡಿಯಾ ವಾರ್ ನಂತರ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಸರ್ಕಾರದ ಕೈಯ್ಯಲ್ಲಿ ರಸ್ತೆ ಅಭಿವೃದ್ಧಿ ಸಾಧ್ಯವಾಗದೇ ಇದ್ದರೆ, ತಾವೇ ತಮ್ಮ ಸ್ವಂತ ಖರ್ಚಿನಲ್ಲಿ ಕನಿಷ್ಟ 10 ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತೇನೆ ಎಂದು ಹೇಳಿರುವುದಾಗಿ ವರದಿಯಾಗಿತ್ತು. ಇನ್ನೂ ಇದಕ್ಕೆ ಪ್ರತಿಕ್ರಿಯಿಸಿ ಡಿಸಿಎಂ ಖಾಸಗಿ ಕಂಪನಿಗಳು ರಸ್ತೆ ರಿಪೇರಿ ಮಾಡಿಸಲು ಮುಂದೆ ಬಂದರೆ ಅವರಿಗೆ ಖಂಡಿತವಾಗಿಯೂ ಸ್ವಾಗತಿಸುತ್ತೇವೆ. ಅವರಿಗೆ ಸರ್ಕಾರದಿಂದ ಏನು ಅನುಕೂಲ ನೀಡಬೇಕೋ ಅದನ್ನು ನೀಡುತ್ತೇವೆ ಎಂದಿದ್ದರು. ಇನ್ನೂ ಈ ಬಗ್ಗೆ ವರದಿಯಾದ ಕೆಲ ದಿನಗಳ ಬಳಿಕ ದೀಪಾವಳಿಯಂದು ಕಿರಣ್ ಸಿಎಂ, ಡಿಸಿಎಂ ಭೇಟಿ ಮಾಡಿದ್ದು, ಈ ವರದಿಗಳಿಗೆ ಪುಷ್ಟಿ ನೀಡುವಂತೆ ಮಾಡಿತ್ತು.





### ಚಿದಂಬರಂ ಟ್ವೀಟ್‌ನಲ್ಲಿ ಅಂಥದ್ದೇನಿತ್ತು?

**ಕಾಂಗ್ರೆಸ್‌ನ ಹಿರಿಯ ನಾಯಕ ಪಿ. ಚಿದಂಬರಂ ಬೆಂಗಳೂರಿನಲ್ಲಿ ಕಿರಣ್ ರಸ್ತೆ ದುರಸ್ತಿ ಮಾಡಿಸಲಿದ್ದಾರೆಂದು ಟ್ವೀಟ್ ಮಾಡಿ ಕಿರಣ್ ಮಜುಂದಾರ್ ಶಾ ಅವರು ಬೆಂಗಳೂರಿನ ಕೆಲವು ರಸ್ತೆಗಳ ಅಭಿವೃದ್ಧಿಗೆ ಹಣ ನೀಡುವ ಪ್ರಸ್ತಾಪವನ್ನು ನಾನು ಆಸಕ್ತಿಯಿಂದ ಗಮನಿಸಿದೆ. ಇದೊಂದು ಉತ್ತಮ ಕೊಡುಗೆ! ಅಭಿನಂದನೆಗಳು. ಆದರೆ ನಮ್ಮ ಸಾರ್ವಜನಿಕ ಕಾಮಗಾರಿಗಳ ಸಮಸ್ಯೆ ಹಣದ ಕೊರತೆಯಲ್ಲ, ಬದಲಿಗೆ, ಆ ಕಾಮಗಾರಿಯನ್ನು ಕಾರ್ಯಗತಗೊಳಿಸುವುದರಲ್ಲಿ ಸಮಸ್ಯೆ ಇದೆ ಎಂದ್ದರು.**

### ನಿಮ್ಮ ವರದಿಗಳಿಗೆ ಸೂಕ್ತ ಮೂಲ ನೀಡಿ

**ಈ ವರದಿಗಳು ಎಲ್ಲಡೆ ವೈರಲ್ ಆಗುತ್ತಿದ್ದಂತೆ ಟ್ವೀಟ್ ಮಾಡಿದ ಕಿರಣ್ ಬೆಂಗಳೂರಿನ ರಸ್ತೆ ಅಭಿವೃದ್ಧಿಗೆ ಮುಂದಾದ ಕಿರಣ್ ಮುಜುಂದಾರ್ ಶಾ, ಇದಕ್ಕೆ ಪ್ರತಿಕ್ರಿಯಿಸಿದ ಪಿ.ಚಿದಂಬರಂ ಎಂಬ ಶೀರ್ಷಿಕೆಯಡಿ ವರದಿಯಾಗಿರುವ ಸುದ್ದಿಯ ಕುರಿತು, ಮಾಧ್ಯಮಗಳು ಸುದ್ದಿಯನ್ನು ಹೇಗೆ ಕಲ್ಪನೆ ಮಾಡಿ ಪ್ರಸಾರ ಮಾಡುತ್ತವೆ ಎಂಬುದನ್ನು ನಾನು ಆಶ್ಚರ್ಯದಿಂದ ನೋಡುತ್ತಿದ್ದೇನೆ. ದಯವಿಟ್ಟು ಅವರು ಬೆಂಗಳೂರು ರಸ್ತೆಗಳ ದುರಸ್ತಿಗೆ ನಾನು ಸಹಾಯ ಮಾಡುವುದಾಗಿ ಹೇಳಿದ ಮಾಹಿತಿಯ ಮೂಲವನ್ನು ಹಂಚಿಕೊಳ್ಳಲು ಕೇಳಿ, ಎಂದು ಬರೆದುಕೊಳ್ಳುವ ಮೂಲಕ ರಸ್ತೆ ಅಭಿವೃದ್ಧಿ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಇದು ರಸ್ತೆ ಅಭಿವೃದ್ಧಿ ಪಡಿಸುತ್ತಾರೋ ಇಲ್ಲವೋ ಎಂಬ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ.**

**ನನಗೆ ಕನ್ನಡ ಮಾತನಾಡಲು ಮಾತ್ರವಲ್ಲ, ಬರೆಯಲೂ ಬರುತ್ತದೆ ಎಂದ ಕಿರಣ್:** ಇನ್ನೂ ಈ ಚರ್ಚೆಗಳ ಬೆನ್ನಲ್ಲೇ ಕೆಲವರು ಕಿರಣ್ ಅವರ ಟ್ವೀಟ್‌ಗಳಲ್ಲಿ ಅವರು ಕನ್ನಡದವರಲ್ಲ ಎಂದು ಕಾಮೆಂಟ್‌ಗಳನ್ನು ಮಾಡುವ ಮೂಲಕ ಹೊಸ ಚರ್ಚೆಗಳನ್ನು ಹುಟ್ಟುಹಾಕುತ್ತಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಕಿರಣ್ ನಾನು ಈ ನಗರದಲ್ಲೇ ಹುಟ್ಟಿದ್ದೇನೆ, 7 ದಶಕಗಳಿಂದ ಈ ನಗರದಲ್ಲೇ ಪ್ರೀತಿಯಿಂದ ನೆಲೆಸಿದ್ದೇನೆ. ನಾನು ಕನ್ನಡ ಸಂಸ್ಕೃತಿಯನ್ನು ಪ್ರೀತಿಸಿದ್ದೇನೆ ಹಾಗೂ ಈ ಅದ್ಭುತ ಭಾಷೆಯನ್ನು ನನಗೆ ಓದಲು, ಬರೆಯಲು ಮತ್ತು ಮಾತನಾಡಲು ಬರುತ್ತದೆ. ನಾನು ಹೆಮ್ಮೆಯ ಕನ್ನಡತಿ. ಕರ್ನಾಟಕದ ಬಗೆಗಿನ ನನ್ನ ನಿಷ್ಠೆಯನ್ನು ಪ್ರಶ್ನಿಸುವ ಯಾರಿಗೂ ನಾನು ಉತ್ತರಿಸಬೇಕಾಗಿಲ್ಲ ಎಂದು ನಾನು ಭಾವಿಸುತ್ತೇನೆ ಎಂದು ಕಾಮೆಂಟ್ ಮಾಡಿದವರಿಗೆ ತಿರುಗೇಟು ನೀಡಿದ್ದಾರೆ. ಒಟ್ಟಿನಲ್ಲಿ ಮಾಧ್ಯಮಗಳಲ್ಲಿನ ವರದಿಗಳ ಕುರಿತು ಕಿರಣ್ ಮುಜುಂದರ್ ಅವರ ಈ ಟ್ವೀಟ್ ಅವರು ರಸ್ತೆ ಅಭಿವೃದ್ಧಿ ಪಡಿಸುತ್ತಾರೋ ಇಲ್ಲವೋ ಎಂಬ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದು, ಇದು ಯಾವ ಹಂತವನ್ನು ತಲುಪಲಲಿದೆ ಎಂದು ಕಾದು ನೋಡಬೇಕಿದೆ.

# ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರಿಂದಲೂ ಛೀಮಾರಿ


■ ಒಂಬತ್ತನೇ ದಿನದತ್ತ ರೈತ ಸಂಘ ಅಹೋರಾತ್ರಿ ಧರಣಿ, ಬಹಿರಂಗ ಸಾಭೀತಿಗೆ ಪಂಥಾಹ್ವಾನ ನೀಡಿರುವ ರೈತ ಸಂಘ

• ಉದಯವಾಹಿನಿ, ಗುಂಡ್ಲುಪೇಟೆ

ಕೆರೆಗಳಿಗೆ ನೀರು, ಸಾಗುವಳಿ ಪತ್ರ ಹಾಗೂ ಇನ್ನಿತರ ರೈತಪರ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ರೈತ ಸಂಘ ನಡೆಸುತ್ತಿರುವ ಅಹೋರಾತ್ರಿ ಧರಣಿ ಒಂಬತ್ತು ದಿನಗಳನ್ನ ಕಳೆದಿವೇ ಆದರೆ ಜಿಲ್ಲಾಡಳಿತ ಯಾವುದೇ ರೀತಿಯಾಗಿ ಸ್ಪಂದಿಸದ ಹಿನ್ನೆಲೆ ದರಣಿಯನ್ನ ಮುಂದುವರಿಸಿದ್ದೇವೆ ಎಂದು ಚಾಮರಾಜನಗರ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ತಿಳಿಸಿದ್ದಾರೆ. ಇತ್ತ ರೈತರ ಹೋರಾಟಕ್ಕೆ ಸಾರ್ವಜನಿಕರಿಂದಲೂ ಸಹ ನೈತಿಕ ಬೆಂಬಲ ವ್ಯಕ್ತವಾಗಿದ್ದು ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತವಾಗತೊಡಗಿದೆ.

ಅ.13 ರಿಂದಲೇ ಅಹೋರಾತ್ರಿ ಧರಣಿಯಲ್ಲಿ ನಿರತ ಆಗಿರುವ ರೈತರ ಅಹವಾಲುಗಳನ್ನ ಸ್ವೀಕರಿಸುವ ವಿಚಾರದಲ್ಲಿ ನಿರಾಸಕ್ತಿ ಹೊಂದಿದ್ದ ಜನಪ್ರತಿನಿಧಿಗಳು ಅಧಿಕಾರಿಗಳು ಹೋರಾಟದ ಕಾವು ಹೆಚ್ಚಾಗುತ್ತಿದ್ದಂತೆ ನಿದ್ರೆಯಿಂದ ಎದ್ದಂತೆ ಧರಣಿ ಸ್ಥಳಕ್ಕೆ ಬಂದರೂ ಸಹ ಅವರ ಭರವಸೆಯ ಮೇಲೆ ನಿರೀಕ್ಷೆ ಇರಿಸದ ಅಧ್ಯಕ್ಷ ಶಿವಪುರ ಮಹದೇವಪ್ಪ ಚಳುವಳಿಯನ್ನ ಹಿಂಪಡೆಯದೆ ದಪ್ಪ ಚರ್ಮದ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ್ದಾರೆ.

ಮೊದಲನೆಯದಾಗಿ ಕಾವೇರಿ ನೀರಾವರಿ ನಿಗಮದ ವೈಫಲ್ಯಗಳನ್ನ ಸಾರ್ವಜನಿಕರ ಮುಂದಿರಿಸಿ ಬೆತ್ತಲೆಗೊಳಿಸಿದ ಮಹದೇವಪ್ಪ ರೈತಪರವಾಗಿ ಇಲಾಖೆ ಸಾಕಾರಗೊಳಿಸಿರುವ ಯೋಜನೆಗಳ ಪಟ್ಟಿಯ ಮಾಹಿತಿ ಕೇಳುವ



ಉದಯವಾಹಿನಿ ಚಿತ್ರ

ಮುಂದಿನ ದಿನಗಳಲ್ಲಿ ಕ್ರಾಂತಿಯಾಗಿ ಬದಲಾಗಬಲ್ಲದು

ಮೂಲಕ ಅಧಿಕಾರಿಗಳು ತ್ರಿಶಂಕು ಸ್ಥಿತಿಗೆ ಸಿಲುಕುವಂತೆ ಮಾಡಿದ್ದರ ಪರಿಣಾಮ ಕೆಟ್ಟು ನೀರಿನಡಿಯಲ್ಲಿ ಅಡಗಿದ್ದ ಯೋಗ್ಯವಲ್ಲದ ಯಂತ್ರಗಳ ದುರಸ್ತಿ ಕಾರ್ಯದ ಪಟಗಳು ಒಂದೊಂದಾಗಿ ಹೊರಬರುತ್ತಿವೆ, ಇತ್ತ ಕಾವೇರಿ ನೀರಾವರಿ ನಿಗಮದ ಸೀನಿಯರ್ ಇಂಜಿನಿಯರ್ ಭೇಟಿ ಕೊಟ್ಟು ಧರಣಿ ಕೈಬಿಡುವಂತೆ ವಿನಮ್ರತ ಮನವಿ ಮಾಡಿದ್ದರಾದರು ಸಹ ಭರವಸೆ ಭಂಟರ ಮಾತಿನ ಒಳಮರ್ಮವನ್ನರಿತಿರುವ ರೈತರು ಸರಿಸಾಗಾಟಾಗಿ ತಳ್ಳಿಹಾಕಿದ್ದಾರೆ. ಇನ್ನು ಕಂದಾಯ ಇಲಾಖೆಯ ಐದು ವರ್ಷಗಳ ಸಾಧನೆಯನ್ನ ಬಹಿರಂಗಗೊಳಿಸಿರುವ ಶಿವಪುರ ಮಹದೇವಪ್ಪ ತುಂಡು ಭೂಮಿಯ ದುರಸ್ತಿಗೆ ಕಚೇರಿಗೆ ವರ್ಷಾನುಗಟ್ಟಲೆ ಪ್ರತಿನಿತ್ಯ ಅಲೆಯುತ್ತಿರುವ ಬಡ ರೈತರ ಸಮಸ್ಯೆಗಳನ್ನ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅವರಿಗೆ ಪರಿಪೂರ್ಣ ಮಾಹಿತಿ ನೀಡಿದ್ದಾರೆ.

ಸಾಗುವಳಿ, ಜಮೀನು ದುರಸ್ತಿ, ಅರಣ್ಯ ಇಲಾಖೆಯಿಂದ ಎನ್‌ಓಸಿ ಕೊಡಿಸುವ ಭರವಸೆಯನ್ನ ಶಾಸಕರಿತ್ತರು ಸಹ ಅದ್ಯಾಕೋ ಏನೋ ರೈತರು ಸೊಪ್ಪು ಹಾಕದಿರುವುದು ವರ್ಷಗಟ್ಟಲೆ ಕಾಯ್ದು ಜರ್ಜರಿತಗೊಂಡಿದ್ದಾರೋ ಎಂದೆನಿಸುತ್ತದೆ. ಅದೆಲ್ಲಾ ಒಂದೆಡೆಯಾದರೆ ಇತ್ತ ಚಾಮರಾಜನಗರ ಜಿಲ್ಲಾಧಿಕಾರಿಗಳು ಸೌಜನ್ಯ ಭೇಟಿಯನ್ನಾದರು ಮಾಡುವ ಇರಾದೆ ತೋರಿಸುತ್ತಿಲ್ಲದಿರುವುದು ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ರೈತರೆಂದರೆ ಕೇವಲ ಕ್ಷೋಭಾ ಮನೋಭಾವ ಆವರಿಸಿಬಿಟ್ಟಿದೆ ಎಂಬುದು ಧರಣಿ ನಿರತ ರೈತರಿಗೆ ಮನದಟ್ಟಾಗಿದೆ ಆದುದರಿಂದಲೇ ಇಂತಹ ಧರಣಿಗೆ ಮುಂದಾಗಿರುವುದು ಸರಿಯಾಗಿಯೇ ಇದೆ ಎಂದು ಸಾರ್ವಜನಿಕರು ಗುಸುಗುಸು ಮಾತನಾಡಿಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ಜನಸಾಮಾನ್ಯರಿಂದಲೂ ಶಿವಪುರ ಮಹದೇವಪ್ಪ ನೇತೃತ್ವದ ಧರಣಿಗೆ ನೈತಿಕ ಬೆಂಬಲ ದೊರೆತಿರುವುದು ಮುಂದಿನ ದಿನಗಳಲ್ಲಿ ಕ್ರಾಂತಿಯಾಗಿ ಬದಲಾಗಬಲ್ಲದು, ಇನ್ನಾದರೂ ಸಂಬಂಧಪಟ್ಟವರು ಧರಣಿ ನಿರತರ ಅಹವಾಲು ಸ್ವೀಕರಿಸಿ ಬೇಡಿಕೆ ಈಡೇರಿಸುವ ಕಡೆಗೆ ಗಮನಹರಿಸಬೇಕಿದೆ.

### ರೈತರು ಅಹೋರಾತ್ರಿ ಧರಣಿಗೆ ಮುಂದಾಗುವಂತಹ ಪರಿಸ್ಥಿತಿ

ವಿದ್ಯುತ್ ಇಲಾಖೆ, ಕಂದಾಯ ಇಲಾಖೆ, ನೀರಾವರಿ ಇಲಾಖೆಗಳ ಇಂತಿಷ್ಟು ವರ್ಷದ ಕಾರ್ಯಕ್ಷಮತೆ ಹಾಗೂ ರೈತರಿಗೆ ದಕ್ಕಿರುವ ಸೌಲಭ್ಯಗಳ ಪಟ್ಟಿಯನ್ನ ಸಿದ್ಧಪಡಿಸಿಕೊಂಡು ಇಂದು ಬಹಿರಂಗ ಸಾಭೀತಿಗೆ ಪಂಥಾಹ್ವಾನ ನೀಡಿರುವ ರೈತ ಸಂಘದ ಸವಾಲಿಗೆ ಯಾವೊಬ್ಬ ಅಧಿಕಾರಿಗಳಿಂದಲೂ ಸಹ ತಾತ್ವಿಕ ಉತ್ತರ ಬಂದಿಲ್ಲ. ನಿರ್ವಹಣೆಯಲ್ಲಿ ವಿಫಲವಾದ ಕಾವೇರಿ ನೀರಾವರಿ ನಿಗಮ ಗುಂಡ್ಲುಪೇಟೆ ತಾಲ್ಲೂಕು ಮಳೆಯಾಶ್ರಿತ ಪ್ರದೇಶವಾಗಿದ್ದು ಕುಲಕಸುಬಿಗೆ ಮಳೆಯನ್ನೇ ಅವಲಂಭಿತವಾಗಿದೆ, ಕಳೆದ ವರ್ಷ ನಿರೀಕ್ಷೆಗೂ ಮೀರಿದ ವರ್ಷಧಾರೆಯಿಂದ ತಾಲ್ಲೂಕಿನ ಬಹುತೇಕ ಕೆರೆಕಟ್ಟೆಗಳು ತುಂಬಿ ಹೋಗಿದ್ದವು ಇದರಿಂದ ರೈತಾಪಿ ವರ್ಗದ ಬೇಸಾಯ ಜೀವನವು ಹಸನಾಗಿತ್ತು ಆದರೆ ಕಾಲಕ್ರಮೇಣ ಕೆರೆಗಳಲ್ಲಿ ನೀರು ಬತ್ತಿಹೋಗುತ್ತಲಿದ್ದರೂ ಸಹ ಪಂಪ್ ಹೌಸ್‌ಗಳ ಕಡೆ ತಿರುಗಿಯೂ ನೋಡದೆ ಪ್ರಮಾದ ಎಸಗಿದ್ದ ಅಧಿಕಾರಿಗಳು ಇಂದು ರೈತರು ಅಹೋರಾತ್ರಿ ಧರಣಿಗೆ ಮುಂದಾಗುವಂತಹ ಪರಿಸ್ಥಿತಿಗೆ ತಂದೂಡಿದ್ದಾರೆ ಎಂದರೆ ತಪ್ಪಾಗಲಾರದು.

## ಬಿಡದಿ ಪುರಸಭೆಗೆ ಭಾನುಪ್ರಿಯಾ ಅಧ್ಯಕ್ಷೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಿಡದಿ

ಇಲ್ಲಿನ ಪುರಸಭೆಯ ನೂತನ ಅಧ್ಯಕ್ಷರಾಗಿ ವಾರ್ಡ್-22ರ ಜೆಡಿಎಸ್ ಸದಸ್ಯೆ ಭಾನುಪ್ರಿಯಾ ಸಂಪತ್ ಅವರು ಇತ್ತೀಚೆಗೆ ಆಯ್ಕೆಯಾದರು. ಹಿಂದಿನ ಅಧ್ಯಕ್ಷ ಎಂ.ಎನ್. ಹರಿಪ್ರಸಾದ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇತ್ತೀಚೆಗೆ ಚುನಾವಣೆ ನಡೆಯಿತು. ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಭಾನುಪ್ರಿಯಾ, ಕಾಂಗ್ರೆಸ್‌ನಿಂದ ವಾರ್ಡ್-16ರ ಸದಸ್ಯ ಶ್ರೀನಿವಾಸ್ ನಾಮಪತ್ರ ಸಲ್ಲಿಸಿದ್ದರು.

ಚುನಾವಣೆಯಲ್ಲಿ ಪುರಸಭೆಯ 23 ಸದಸ್ಯರು ಮತ ಚಲಾಯಿಸಿದರು. ಅಂತಿಮ ಫಲಿತಾಂಶ ಬಂದಾಗ ಭಾನುಪ್ರಿಯ ಅವರು 14, ಶ್ರೀನಿವಾಸ್ 9 ಮತ ಪಡೆದರು. ಹೆಚ್ಚು ಮತ ಪಡೆದ ಭಾನುಪ್ರಿಯಾ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ತಹಶೀಲ್ದಾರ್ ತೇಜಸ್ವಿನಿ ಅವರು ಘೋಷಿಸಿದರು.

ಮತದಾನದ ಹಕ್ಕು ಹೊಂದಿದ್ದ ಸಂಸದ ಡಾ. ಸಿ.ಎನ್. ಮಂಜುನಾಥ್ ಮತ್ತು ಶಾಸಕ ಎಚ್.ಸಿ. ಬಾಲಕೃಷ್ಣ ಮತದಾನಕ್ಕೆ ಗೈರಾಗಿದ್ದರು. ಬಳಿಕ ಮಾತನಾಡಿದ ಭಾನುಪ್ರಿಯಾ, ಕೈಗಾರಿಕಾ ಪ್ರದೇಶವಾಗಿ ಗುರುತಿಸಿಕೊಂಡಿರುವ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಸದಸ್ಯರು ಹಾಗೂ ಪಕ್ಷದ ನಾಯಕರ ಮಾರ್ಗದರ್ಶನದಲ್ಲಿ ಶ್ರಮಿಸಲಾಗುವುದು. ಮಾದರಿ ಪುರಸಭೆಯಾಗಿ ಮಾಡುವ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗುವುದು ಎಂದರು.

ನೂತನ ಅಧ್ಯಕ್ಷರಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಎ. ಮಂಜುನಾಥ್, ಬಿಡದಿ ಹೋಬಳಿ ಅಧ್ಯಕ್ಷ ಜಗದೀಶ್ ಗೌಡ, ಪುರಸಭೆ ಉಪಾಧ್ಯಕ್ಷೆ ಮಂಜುಳಾ ಗೋವಿಂದಪ್ಪ, ವಿರೋಧ ಪಕ್ಷದ ನಾಯಕ ಸಿ. ಉಮೇಶ್, ಪುರಸಭೆ ಮುಖ್ಯಾಧಿಕಾರಿ ಎಂ.ಕೆ. ಮೀನಾಕ್ಷಿ, ಸದಸ್ಯರು ಹಾಗೂ ಪಕ್ಷದ ಸ್ಥಳೀಯ ಮುಖಂಡರು ಹೂವಿನಹಾರ ಹಾಕಿ ಅಭಿನಂದಿಸಿದರು.

## ಯಗವಕೋಟೆ ಶಾಲೆಗೆ ಕೆಪಿಎಸ್ ಭಾಗ್ಯ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಮುರುಗಮಲ್ಲ ಹೋಬಳಿಯ ಯಗವಕೋಟೆ ಸರ್ಕಾರಿ ಪ್ರೌಢಶಾಲೆಯು ಕರ್ನಾಟಕ ಪಬ್ಲಿಕ್ ಶಾಲೆಯಾಗಿ ಉನ್ನತೀಕರಣಗೊಂಡಿದೆ. 1969ರಲ್ಲಿ ಪ್ರಾರಂಭಗೊಂಡ ಈ ಶಾಲೆಯಲ್ಲಿ ಪ್ರಸ್ತುತ 8ರಿಂದ 10ನೇ ತರಗತಿಗಳಲ್ಲಿ ಒಟ್ಟಾರೆ 220 ವಿದ್ಯಾರ್ಥಿಗಳು ಓದುತ್ತಿದ್ದಾರೆ. 7 ಮಂದಿ ಸಿಬ್ಬಂದಿ ಕಾಯಂ ಹಾಗೂ ಗುತ್ತಿಗೆ ಆಧಾರದಲ್ಲಿ ಐವರು ಸೇರಿದಂತೆ 12 ಶಿಕ್ಷಕರು ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಎಲ್ ಕೆ.ಜಿಯಿಂದ ದ್ವಿತೀಯ ಪಿಯುವರೆಗೆ ಒಂದೇ ಸೂರಿನಡಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಗುಣಮಟ್ಟದ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ 2018-19ರ ಸಾಲಿನಲ್ಲಿ ಕರ್ನಾಟಕ ಸರ್ಕಾರ ಆರಂಭಿಸಿದ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಕೆಪಿಎಸ್ ಯೋಜನೆಯೂ ಒಂದಾಗಿದೆ.

ಕರ್ನಾಟಕ ಸರ್ಕಾರವು 2025-26ನೇ ಸಾಲಿನಲ್ಲಿ ರಾಜ್ಯದಾದ್ಯಂತ ಹೊಸದಾಗಿ 700 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುತ್ತಿದ್ದು, ಚಿಂತಾಮಣಿ ತಾಲ್ಲೂಕಿನ ಮೂರು ಶಾಲೆಗಳಿಗೆ ಕೆಪಿಎಸ್ ಭಾಗ್ಯ ದೊರೆತಿದೆ.

ಮುರುಗಮಲ್ಲಾ ಹೋಬಳಿಯ ಯಗವಕೋಟೆ ಸರ್ಕಾರಿ ಪ್ರೌಢಶಾಲೆ, ಬಟ್ಲಹಳ್ಳಿಯ ಸರ್ಕಾರಿ ಪಿಯು ಕಾಲೇಜು, ಚಿಂತಾಮಣಿ ನಗರದ ಬಾಲಕಿಯರ ಪಿಯು ಕಾಲೇಜುಗಳು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಉನ್ನತೀಕರಣಗೊಂಡಿವೆ. ಸರ್ಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕಲ್ಪಿಸುವ ನಿಟ್ಟಿನಲ್ಲಿ ಈ ಮೂರು ಶಾಲೆಗಳನ್ನು ಕೆಪಿಎಸ್ ಶಾಲೆಯಾಗಿ ಮಾರ್ಪಾಡು


ಉದಯವಾಹಿನಿ ಚಿತ್ರ

> ಹಲವು ವರ್ಷಗಳ ಕನಸು ಈಗ ನನಸಾಗಿದೆ. ಸಕಲ ಸೌಲಭ್ಯಗಳೊಂದಿಗೆ ಹೆಚ್ಚಿನ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಶಾಲಾ ಮಕ್ಕಳು, ಪೋಷಕರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕು.
> -ಶ್ರೀನಿವಾಸಪ್ಪ, ಮುಖ್ಯ ಶಿಕ್ಷಕ

ಮಾಡಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆ ಮಕ್ಕಳು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತಿದೆ. ಗುಣಮಟ್ಟದ ಕಲಿಕೆ ಮತ್ತು ಹಾಜರಾತಿ ಹೆಚ್ಚಿಸಲು, ಮಕ್ಕಳನ್ನು ಸರ್ಕಾರಿ ಶಾಲೆಗಳತ್ತ ಸೆಳೆಯಲು ಸರ್ಕಾರ ಕೈಗೊಂಡಿರುವ ಸುಧಾರಣಾತ್ಮಕ ಕಾರ್ಯತಂತ್ರದ ಫಲವೇ ಕೆಪಿಎಸ್ ಶಾಲೆಗಳು.ಕೆಪಿಎಸ್ ಶಾಲೆಗಳು ಶಾಲಾಪೂರ್ವ ತರಗತಿ

> ಸರ್ಕಾರಿ ಪ್ರೌಢಶಾಲೆಯನ್ನು ಕೆಪಿಎಸ್ ಶಾಲೆಯನ್ನಾಗಿ ಉನ್ನತೀಕರಿಸಿರುವುದರಿಂದ ಎಲ್‌ಕೆಜಿಯಿಂದ ಆರಂಭವಾಗಿ ದ್ವಿತೀಯ ಪಿಯುವರೆಗೆ ಒಂದೇ ಕಡೆ ಶಿಕ್ಷಣ ಸಿಗಲಿದೆ. ಇದರಿಂದ ಪ್ರಸ್ತುತ ಓದುತ್ತಿರುವ ಶಾಲೆಯಿಂದ ಟಿ.ಸಿ. ಪಡೆದು ವಿದ್ಯಾರ್ಥಿಗಳು ಬೇರೆ ಶಾಲೆಗೆ ದಾಖಲಾತಿಯಾಗುವುದನ್ನು ತಪ್ಪಿಸಲಿದೆ.
> -ಹೇಮಾವತಿ, ಎಸ್‌ಡಿಎಂಸಿ ಅಧ್ಯಕ್ಷೆ

ಎಲ್‌ಕೆಜಿಯಿಂದ 12ನೇ ತರಗತಿವರೆಗೆ (ಪಿಯುಸಿ) ಶಿಕ್ಷಣ ಒದಗಿಸುತ್ತವೆ. ಕಲಿಕೆಯ ಗುಣಮಟ್ಟ ಉತ್ತಮಪಡಿಸಲು ಉತ್ತೇಜಿಸುತ್ತದೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಪಿಯುಸಿ ಹಂತಗಳಲ್ಲಿ ದಾಖಲಾತಿ ಅಗತ್ಯವಿಲ್ಲ. ವಿವಿಧ ದಾಖಲಾತಿ ಹಂತಗಳಲ್ಲಿ ವಿದ್ಯಾರ್ಥಿಗಳು ಶಾಲೆಯಿಂದ ದೂರ ಉಳಿಯುವ ಸಂಖ್ಯೆಯೂ ಕಡಿಮೆಯಾಗುತ್ತದೆ ಎನ್ನುವುದು ತಜ್ಞರ ಅಭಿಪ್ರಾಯ.

**ಆಧುನಿಕ ಕೌಶಲ್ಯಗಳ ತರಬೇತಿ:** ಈ ಶಾಲೆಗಳು ವಿದ್ಯಾರ್ಥಿಗಳ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಮೂಲಸೌಕರ್ಯ ಮತ್ತು ಶೈಕ್ಷಣಿಕ ಮಾನದಂಡಗಳನ್ನು ಒಳಗೊಂಡಿರುತ್ತವೆ. ಸಣ್ಣ ಶಾಲೆಗಳನ್ನು ಕೆಪಿಎಸ್ ಶಾಲೆಗಳಲ್ಲಿ ಸಮ್ಮಿಳಿತಗೊಳಿಸಿ ಶಾಲಾ ಏಕೀಕರಣ ಪ್ರಕ್ರಿಯೆಗೆ ಆದ್ಯತೆ ನೀಡಲಾಗುತ್ತದೆ. ಉತ್ತಮ ಸಂಪನ್ಮೂಲ ಬಳಕೆ, ದಕ್ಷ ಆಡಳಿತಕ್ಕಾಗಿ ಶಾಲಾ ಸಂಕೀರ್ಣಗಳ ಸ್ಥಾಪನೆ ಮೂಲಕ ಶಾಲಾ ಏಕೀಕರಣ ಮಾಡಲಾಗುವುದು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದರು.

## ತೆಂಗಿಗೆ ರೋಗಬಾಧೆ | ಸಮೀಕ್ಷೆ ಅಪೂರ್ಣ: ಪರಿಹಾರ ಸಿಗದೇ ರೈತರು ಕಂಗಾಲು

• ಉದಯವಾಹಿನಿ, ಮಂಡ್ಯ

ಕಪ್ಪುತಲೆ ಹುಳು, ಬಿಳಿನೊಣ ಬಾಧೆಗೆ ತುತ್ತಾಗಿರುವ ತೆಂಗಿನ ಬೆಳೆಯ ಸಮೀಕ್ಷೆ ರಾಜ್ಯದಲ್ಲಿ ಅಪೂರ್ಣಗೊಂಡಿದ್ದು, ತೋಟಗಾರಿಕಾ ಇಲಾಖೆಯಿಂದ ಪರಿಹಾರ ಸಿಗದ ಕಾರಣ ರೈತರು ಕಂಗಾಲಾಗಿದ್ದಾರೆ. ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು, ರೋಗ ಬಾಧಿತ ಪ್ರದೇಶಗಳಲ್ಲಿ 'ಪೆಸ್ಟ್ ಸರ್ವೆಯರ್ (ಪಿ.ಎಸ್) ಮೂಲಕ ವೈಜ್ಞಾನಿಕ ಸಮೀಕ್ಷೆ ನಡೆಸಿ ಒಂದು ತಿಂಗಳೊಳಗೆ (ಸೆ.5ರೊಳಗೆ) ನಿಖರ ಮಾಹಿತಿಯನ್ನು ಸಲ್ಲಿಸುವಂತೆ ಇಲಾಖೆ ಸೂಚಿಸಿತ್ತು.

ತೆಂಗು ಬೆಳೆಯುವ ಪ್ರಮುಖ 15 ಜಿಲ್ಲೆಗಳಲ್ಲಿ ಒಟ್ಟು 18.65 ಲಕ್ಷ ತಾಲ್ಲೂಕುಗಳಿದ್ದು. ಇವುಗಳಲ್ಲಿ ಇದುವರೆಗೆ 5.93 ಲಕ್ಷ ತಾಲ್ಲೂಕುಗಳ (ಶೇ 32) ಸಮೀಕ್ಷೆ ಮಾತ್ರ ಪೂರ್ಣಗೊಂಡಿದೆ. ಇದರಿಂದ ಇಲಾಖೆಗೆ ರೋಗ ಬಾಧಿತ ಪ್ರದೇಶದ ನಿಖರ ಮತ್ತು


ಉದಯವಾಹಿನಿ ಚಿತ್ರ

ಸಮಗ್ರ ಅಂಕಿಅಂಶವೇ ದೊರೆತಿಲ್ಲ ಎನ್ನಲಾಗಿದೆ.

**ಕಾರಣಗಳೇನು?:** ಒಂದು ತಿಂಗಳ ಅವಧಿಯಲ್ಲಿ 18 ಲಕ್ಷ ತಾಲ್ಲೂಕುಗಳನ್ನು ಸಮೀಕ್ಷೆ ಮಾಡುವುದು ಅಸಾಧ್ಯ. ಜತೆಗೆ ತೋಟಗಾರಿಕೆ ಇಲಾಖೆಯಲ್ಲಿ ಅಗತ್ಯ ಸಿಬ್ಬಂದಿ ಇಲ್ಲ, ಸಮೀಕ್ಷೆಗೆ ಅಗತ್ಯವಿದ್ದಷ್ಟು ಪಿ.ಎಸ್.ಗಳನ್ನು ನಿಯೋಜಿಸಿರಲಿಲ್ಲ. ಕೆಲವು ಕಡೆ ನೆಟ್‌ವರ್ಕ್ ಸಮಸ್ಯೆಯಿಂದ ಕ್ರಾಪ್ ಇನ್‌ಸ್ಪೆಕ್ಷನ್ ಬಿಎಚ್‌ಸಿ ಆ್ಯಪ್ ಕಾರ್ಯನಿರ್ವಹಿಸುತ್ತಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ಸಮೀಕ್ಷೆ ಕಾರ್ಯ ಅಪೂರ್ಣಗೊಂಡಿದೆ ಎಂದು ಪೆಸ್ಟ್ ಸರ್ವೆಯರ್‌ಗಳು ತಿಳಿಸಿದ್ದಾರೆ.

> ರೋಗಬಾಧೆಯಿಂದ ತೆಂಗು ಇಳುವರಿ ಕಡಿಮೆಯಾಗಿದೆ. ರೋಗ ನಿಯಂತ್ರಿಸಲು ತೋಟಗಾರಿಕೆ ಇಲಾಖೆಯಿಂದ ನಿಯಂತ್ರಣ ಕ್ರಮವೂ ಇಲ್ಲ ಪರಿಹಾರವೂ ಸಿಕ್ಕಿಲ್ಲ
> - ಎಂ.ಎನ್.ಮಹೇಶ್‌ಕುಮಾರ್ ಸಾವಯವ ಕೃಷಿಕ ಮಳವಳ್ಳಿ

**7 ಲಕ್ಷ ಹೆಕ್ಟೇರ್ ವಿಸ್ತೀರ್ಣ:** ರಾಜ್ಯದಲ್ಲಿ ತೆಂಗು ಪ್ರಮುಖ ತೋಟಗಾರಿಕೆ ಬೆಳೆಯಾಗಿದ್ದು, ಸುಮಾರು 7.04 ಲಕ್ಷ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. 34.79 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಿದೆ. ತುಮಕೂರು, ಹಾಸನ, ಮಂಡ್ಯ, ಉತ್ತರಕನ್ನಡ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಕೋಲಾರ, ಬೆಂಗಳೂರು ನಗರ, ಗ್ರಾಮಾಂತರ, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ ಹಾಗೂ ರಾಮನಗರ ಈ 15 ಜಿಲ್ಲೆಗಳಲ್ಲಿ ತೆಂಗನ್ನು ಅತ್ಯಧಿಕವಾಗಿ ಬೆಳೆಯಲಾಗುತ್ತಿದೆ.

ಅಪೂರ್ಣ ಸಮೀಕ್ಷೆಯಿಂದ ರೈತರಿಗೆ ನ್ಯಾಯ ಸಿಗುವುದಿಲ್ಲ. ಬರ, ಅತಿವೃಷ್ಟಿ, ರೋಗಬಾಧೆ ಸಮಸ್ಯೆಗಳಿಂದ ರೈತರು ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ರೋಗ ನಿಯಂತ್ರಿಸಲು ತುರ್ತು ಕ್ರಮ ಕೈಗೊಳ್ಳಬೇಕು ಮತ್ತು ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡಲು ಸರ್ಕಾರ ಮುಂದಾಗಬೇಕು ಎಂದು ಮಂಡ್ಯ ರೈತ ಮುಖಂಡ ಕೆ.ಬೋರಯ್ಯ ಒತ್ತಾಯಿಸಿದ್ದಾರೆ.

## ಮಾದಪ್ಪನ ಸನ್ನಿಧಿಯಲ್ಲಿ ಹಾಲರವೆ ಉತ್ಸವ

• ಉದಯವಾಹಿನಿ, ಮಹದೇಶ್ವರ ಬೆಟ್ಟ

ನಾಡಿನ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಹನೂರು ತಾಲ್ಲೂಕಿನ ಮಲೆ ಮಹದೇಶ್ವರನ ಬೆಟ್ಟದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವದ ಸಂಭ್ರಮ ಕಳೆಗಟ್ಟಿದೆ. ಐದು ದಿನಗಳ ವಿಜೃಂಭಣೆಯ ದೀಪಾವಳಿ ಜಾತ್ರೆಯಲ್ಲಿ ನಾಡಿನ ಮೂಲೆಗಳಿಂದ, ಹೊರ ರಾಜ್ಯಗಳಿಂದಲೂ ಲಕ್ಷಾಂತರ ಭಕ್ತರು ಭಾಗವಹಿಸಿ ಮಾದಪ್ಪನ ದರ್ಶನ ಪಡೆಯುತ್ತಿದ್ದಾರೆ.

ಉತ್ಸವದ ನಾಲ್ಕನೇ ದಿನವಾದ ಮಂಗಳವಾರ ತಲತಲಾಂತರಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯದಂತೆ ಹಾಲರುವ ಉತ್ಸವ ಅದ್ದೂರಿಯಾಗಿ ನೆರವೇರಿತು. ಮಾದಪ್ಪನ ಪೂಜಿಸುವ ಬೇಡಗಂಪಣ ಸಮುದಾಯದ 10ರಿಂದ 12ವರ್ಷದೊಳಗಿನ 101 ಬಾಲೆಯರಿಂದ ಹಾಲರುವೆ ಉತ್ಸವ ನೆರವೇರಿದ್ದು ವಿಶೇಷವಾಗಿತ್ತು. ಬೇಡಗಂಪಣ ಸಮುದಾಯದ ಸರದಿ ಅರ್ಚಕರು ಹಾಗೂ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಹಾಲರವೆ ಉತ್ಸವ ಭಕ್ತರ ಕಣ್ಮನ ಸೆಳೆಯಿತು. ಹಸಿರು ಸೀರೆಯುಟ್ಟ ಬಾಲೆಯರು ಹಾಲರವಿಯನ್ನು ತಲೆಯ ಮೇಲೆ ಹೊತ್ತು ಸಾಗಿದ ದೃಶ್ಯವನ್ನು


ಉದಯವಾಹಿನಿ ಚಿತ್ರ

ಕಂಡು ಭಕ್ತರು ಭಕ್ತಿಪರವಶರಾದರು.

ಸಂಪ್ರದಾಯದಂತೆ ಮಡಿಯುಟ್ಟು ಉಪವಾಸವಿದ್ದ ಬಾಲೆಯರು ಮಲೆ ಬೆಟ್ಟದಿಂದ 7 ಕಿ.ಮೀ ದೂರದ ಅರಣ್ಯ ಹಾದಿಯಲ್ಲಿರುವ ಹಾಲರ ಹಳ್ಳ ತಲುಪಿ ಪೂಜೆ ಪುರಸ್ಕಾರ ಮಾಡಿ ಕಳಸಗಳನ್ನು ಹೊತ್ತು ಕ್ಷೇತ್ರದತ್ತ ನಡೆದರು. ವಾದ್ಯ ಮೇಳದೊಂದಿಗೆ ಬೆಟ್ಟಕ್ಕೆ ಮೆರವಣಿಗೆ ಸಾಗುವಾಗ ಪಟ್ಟದ ಆನೆ, ಡೊಳ್ಳು ಕುಣಿತ, ಛತ್ರಿ ಚಾಮರಗಳು ಇದ್ದವು. ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಿ ಕಳಸಗಳಲ್ಲಿ ತಂದಿದ್ದ ಪವಿತ್ರ ನೀರನ್ನು ಮಾದಪ್ಪನಿಗೆ ಅಭಿಷೇಕ ಮಾಡುವ ಮೂಲಕ ಹಾಲರವೆ ಉತ್ಸವ ಸಂಪನ್ನವಾಯಿತು.

> **ಕತ್ತಿ ಪವಾಡ** ಬೇಡಗಂಪಣ ಸಮುದಾಯದ ಬಾಲೆಯರು ಹಾಲುಹಳ್ಳದಿಂದ ಪುಟ್ಟ ಬಿಂದಿಗೆಗಳಲ್ಲಿ ಹಾಲರವೆ ಹೊತ್ತು ತಂಬಡಿಗೇರಿ ಗ್ರಾಮದ ಮುಖ್ಯದ್ವಾರದ ಬಳಿ ಇರಿಸಿದರು. ಈ ಸಂದರ್ಭ ದೊಡ್ಡ ಪಾಲಿಗೆ ಸೇರಿದ ಬೇಡಗಂಪಣ ಸಮುದಾಯದವರು ಕತ್ತಿ ಪವಾಡ ಪ್ರದರ್ಶಿಸಿದರು. ಬೇಡಗಂಪಣರಲ್ಲಿ ಈ ಬಾರಿ ಭಾರಿ ದೊಡ್ಡ ಪಾಲಿನ ಸಮುದಾಯದಿಂದ ಕತ್ತಿ ಪವಾಡ ನಡೆಯಿತು.

ಕ್ಷೇತ್ರದಲ್ಲಿ ಅದ್ದೂರಿ ಮಹಾ ರಥೋತ್ಸವ ನಡೆಯಲಿದೆ. 56 ಅಡಿ ಎತ್ತರದ ರಥವನ್ನು ಭಕ್ತರು ಎಳೆದು ಭಕ್ತಿ ಸಮರ್ಪಿಸಲಿದ್ದಾರೆ. ರಾತ್ರಿ ತೆಪ್ಪೋತ್ಸವ ನಡೆಯಲಿದ್ದು ದೀಪಾವಳಿ ಜಾತ್ರೆಗೆ ತೆರೆ ಬೀಳಲಿದೆ.

## ಗುಣಮಟ್ಟದ ಇಳುವರಿ ಇದ್ದರೆ ಆದಾಯ ಕಟ್ಟಿಟ್ಟ ಬುತ್ತಿ

• ಉದಯವಾಹಿನಿ, ಮಾಗಡಿ

ರೈತರು ಶ್ರಮದಿಂದ ಬೆಳೆ ಬೆಳೆದು ಸಮಾಜಕ್ಕೆ ಅನ್ನದಾತರಾಗಿದ್ದಾರೆ. ಆದರೆ, ಇಂದಿನ ಕೃಷಿಯಲ್ಲಿ ಕೇವಲ ಉತ್ಪಾದನೆ ಮಾತ್ರವಲ್ಲ, ಗುಣಮಟ್ಟದ ಉತ್ಪಾದನೆಯೂ ಅತಿ ಮುಖ್ಯವಾಗಿದೆ ಎಂದು ಅರಿತು ಕೃಷಿಯಲ್ಲಿ ತೊಡಗಿಸಿಕೊಂಡವರು ತಾಲ್ಲೂಕಿನ ಹಲಸಬೆಲೆ ಗ್ರಾಮದ ಚಂದ್ರಯ್ಯ. ಪದವಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಕೃಷಿಯನ್ನು ಖುಷಿಯಿಂದ ಮಾಡಬೇಕೆಂದು ಪಣತೊಟ್ಟವರು. ಸದಾಕಾಲ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಸಮಗ್ರ ಬೇಸಾಯ ಪದ್ಧತಿ ಅಳವಡಿಸಿಕೊಂಡ ಕೃಷಿಕ.

**ಸಮಗ್ರ ಕೃಷಿ ಅಳವಡಿಕೆ:** ತಮಗಿರುವ 5 ಎಕರೆ ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಒತ್ತು ನೀಡಿದ್ದಾರೆ. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಪೇರಲೆ, ಸೇಬು, ಹಲಸು, ಹೂವಿನ ಬೆಳೆಗಳಾದ ಸೇವಂತಿಗೆ, ಚೈನಾ ಆಸ್ಟರ್ ಇತ್ಯಾದಿ ಆಧುನಿಕ ಪದ್ಧತಿ ಅನುಸರಿಸಿ ಬೆಳೆಯುತ್ತಿದ್ದಾರೆ. ಅದಲ್ಲದೆ ರಾಗಿ, ತೊಗರಿ, ಅವರೆ ಬೆಳೆಗಳ ನೂತನ ತಳಿ ಬೆಳೆಯುತ್ತಿದ್ದಾರೆ. ಹಾಗೆಯೇ ಅರಣ್ಯ ಕೃಷಿ ಮಾಡುತ್ತಿದ್ದು ತೇಗ, ಹೆಬ್ಬೇವು ಕೂಡ ಬೆಳೆದಿದ್ದಾರೆ. ಕೃಷಿ ಪೂರಕ ಉಪಕಸುಬುಗಳಾದ ಹೈನುಗಾರಿಕೆ, ಜೇನು ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆ ಸಹ ಮಾಡುತ್ತಿದ್ದಾರೆ. ತಂತ್ರಜ್ಞಾನವನ್ನು ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಸಂಗೋಪನೆ


ಉದಯವಾಹಿನಿ ಚಿತ್ರ

ಇಲಾಖೆ ಮಾರ್ಗದರ್ಶನದಿಂದ ಅತಿ ಆಸಕ್ತಿಯಿಂದ ಅಳವಡಿಕೆ ಮಾಡಿಕೊಂಡು ಗುಣಮಟ್ಟದ ಇಳುವರಿ ಮತ್ತು ಆದಾಯ ಪಡೆಯುತ್ತಿದ್ದಾರೆ.

**ಮಣ್ಣಿನ ಆರೋಗ್ಯಕ್ಕೆ ಒತ್ತು:** ಯಾವುದೇ ಬೆಳೆ ಯಶಸ್ವಿ ಆಗುವುದರ ಮೊದಲು ಆರೋಗ್ಯವಂತ ಮಣ್ಣು ಅತಿ ಅವಶ್ಯ. ಮಣ್ಣಿನ ಆರೋಗ್ಯಕ್ಕಾಗಿ ಇವರು ಮೊದಲು ಮಣ್ಣು ಪರೀಕ್ಷೆ ಮಾಡಿಸಿ ಮಣ್ಣು ಆರೋಗ್ಯ ಚೀಟಿ ಪಡೆದು ಅದರ ಆಧಾರದ ಮೇಲೆ ಈ ಮೊದಲು ಉಪಯೋಗಿಸುತ್ತಿದ್ದ ಕೇವಲ ರಾಸಾಯನಿಕ ಗೊಬ್ಬರದ ಬಳಕೆ ಬದಲು ವಿಜ್ಞಾನಿಗಳ ಶಿಫಾರಸ್ಸಿನಂತೆ ಸಾವಯವ ಇಂಗಾಲ ಹೆಚ್ಚಿಸಲು ಮತ್ತು ಫಲವತ್ತತೆಗಾಗಿ ವಿವಿಧ ಹಸಿರೆಲೆ ಗೊಬ್ಬರಗಳಾದ ಗ್ಲಿರಿಸಿಡಿಯಾ, ಅಪ್ಪೆಣಬು ಬೆಳೆದು ಭೂಮಿಗೆ ಸೇರಿಸುತ್ತಾರೆ. ಗುಣಮಟ್ಟದ ಸಾವಯವ ಗೊಬ್ಬರ ಹಾಗೂ ಎರೆಹುಳು ಗೊಬ್ಬರ ಮತ್ತು ಸೂಕ್ಷ್ಮ ಪೋಷಕಾಂಶ ಮಣ್ಣಿಗೆ ಬೆರೆಸಿ ಮಣ್ಣಿನ ಆರೋಗ್ಯ ಕಾಪಾಡುತ್ತಿದ್ದಾರೆ.

## ಮಾಕಳಿ ಗ್ರಾ. ಪಂ. ವ್ಯಾಪ್ತಿಯಲ್ಲಿ ನಡೆದ ಕಾಮಗಾರಿ 1 ದಾಖಲೆ ಬಿಡುಗಡೆ

● ಅವ್ಯವಹಾರಗಳಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಎಸ್. ಸಿದ್ದಲಿಂಗೇಗೌಡ ಅವರೇ ನೇರ ಕಾರಣ: ಮಾಕಳಿ ಗ್ರಾಮದ ಮುಖಂಡ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಮಾಕಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದ ನರೇಗಾ ಕಾಮಗಾರಿಗಳ ಸಾಮಗ್ರಿ ವೆಚ್ಚ ಮತ್ತು 15ನೇ ಹಣಕಾಸು ಆಯೋಗದಲ್ಲಿ ನಡೆದ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿದೆ' ಎಂದು ಮಾಕಳಿ ಗ್ರಾಮದ ಮುಖಂಡ ಎಂ.ಎಲ್. ಲೋಕೇಶ ಆರೋಪಿಸಿದರು. ಈ ಅವ್ಯವಹಾರಗಳಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಎಸ್. ಸಿದ್ದಲಿಂಗೇಗೌಡ ಅವರೇ ನೇರ ಕಾರಣರಾಗಿದ್ದು, ಅವರ ಸದಸ್ಯತ್ವ ರದ್ದುಗೊಳಿಸಬೇಕು' ಎಂದು ಅವರು ಒತ್ತಾಯಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ದಾಖಲೆ ಪತ್ರಗಳನ್ನು ಪ್ರದರ್ಶಿಸಿ ಮಾತನಾಡಿದರು. ಅಧ್ಯಕ್ಷ ಸಿದ್ದಲಿಂಗೇಗೌಡ ಒಡೆತನದ ಇಟ್ಟಿಗೆ ಕಾರ್ಖಾನೆಯಿಂದ ನರೇಗಾ ಕಾಮಗಾರಿಗೆ ಸಾಮಗ್ರಿಗಳನ್ನು ಪೂರೈಸಲಾಗಿದೆ ಎಂದು ಬಿಲ್ ಮಾಡಿಕೊಳ್ಳಲಾಗಿದೆ. ಜೊತೆಗೆ ತಮ್ಮ ಮಗ ಮಂಜುನಾಥ್ ಅವರಿಗೆ ಸೇರಿದ ವೆಂಡರ್ ಖಾತೆಗೆ ನಿಯಮಬಾಹಿರವಾಗಿ 47.18 ಲಕ್ಷ ನರೇಗಾ ಹಣವನ್ನು ಜಮೆ ಮಾಡಿಸಿದ್ದಾರೆ. ಈ ಇಟ್ಟಿಗೆ ಕಾರ್ಖಾನೆಗೆ ಜಿಲ್ಲಾಡಳಿತದಿಂದ ಅನುಮತಿಯೂ ಪಡೆದಿಲ್ಲ. ತೆರಿಗೆಯನ್ನೂ ಕಟ್ಟಿಲ್ಲ ಎಂದು ಅವರು ದೂರಿದರು. ಯಾವುದೇ ಗ್ರಾಮ ಪಂಚಾಯಿತಿ ಸದಸ್ಯರು ತಾವು ಸದಸ್ಯರಾದ ಗ್ರಾಮ ಪಂಚಾಯಿತಿಯಲ್ಲಿ ಸ್ವತಃ ಅಥವಾ ತನ್ನ ಕುಟುಂಬದ


ಉದಯವಾಹಿನಿ ಚಿತ್ರ

ಹತ್ತಿರದ ಬಂಧುಗಳ ಮೂಲಕ ನರೇಗಾ ಯೋಜನೆಯಡಿ ಸಾಮಗ್ರಿ ಪೂರೈಕೆದಾರರಾಗಿ, ಸಾಮಗ್ರಿ ಬಿಲ್ ಪಡೆದುಕೊಂಡಿದ್ದಲ್ಲಿ ಅಂತಹ ಸದಸ್ಯರನ್ನು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43ಎ(ವಿ) ಅಡಿ ಸದಸ್ಯತ್ವದಿಂದ ವಜಾ ಮಾಡಲು ಅವಕಾಶವಿದೆ.

> **ತನಿಖೆಗೆ ಸಿದ್ಧವಿದ್ದೇನೆ**
> ನನ್ನ ವಿರುದ್ಧ ಮಾಡಲಾಗುತ್ತಿರುವ ಆರೋಪಗಳಲ್ಲಿ ಹುರುಳಿಲ್ಲ. ನನ್ನ ಮೇಲಿನ ವೈಯಕ್ತಿಕ ದ್ವೇಷದಿಂದಾಗ ದುರುದ್ದೇಶಪೂರ್ವಕವಾಗಿ ಇಲ್ಲಸಲ್ಲದ ಆರೋಪಗಳನ್ನು ಮಾಡಲಾಗುತ್ತಿದೆ. ನಾನು ಅಧ್ಯಕ್ಷನಾದ ಬಳಿಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ' ಎಂದು ಮಾಕಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಎಸ್. ಸಿದ್ದಲಿಂಗೇಗೌಡ ತಿಳಿಸಿದರು. 'ನನ್ನ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಲು ಅಧಿಕಾರಿಗಳು ಮುಂದಾದರೆ ತನಿಖೆಗೆ ಸಹಕಾರ ನೀಡುತ್ತೇನೆ. ತನಿಖೆಗೆ ನಾನು ಸಿದ್ದನಿದ್ದೇನೆ' ಎಂದು ಹೇಳಿದರು.

ಆದರೆ, ಅಧಿಕಾರಿಗಳು ಈ ನಿಯಮ ಪಾಲಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಈ ಸಂಬಂಧ ನಾನು ಜಿಲ್ಲಾ ಪಂಚಾಯಿತಿ, ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ದೂರು ನೀಡಿದ್ದೇನೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಅಧ್ಯಕ್ಷರ ಅಕ್ರಮದ ಬಗ್ಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ದೂರು ನೀಡಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಹೀಗಾಗಿ, ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಅಕ್ಟೋಬರ್ ಒಂದರಂದು ಗ್ರಾಮ ಪಂಚಾಯಿತಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದ್ದೆ. ಅಂದು ಸ್ಥಳಕ್ಕೆ ಬಂದಿದ್ದ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶಿವಕುಮಾರ್ 15 ದಿನಗಳಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಹೀಗಾಗಿ, ಧರಣಿ ವಾಪಸ್ ಪಡೆದಿದ್ದೆ. ಆದರೆ, ಈವರೆಗೆ ಕ್ರಮ ಜರುಗಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನರೇಗಾ ಕಾಮಗಾರಿಯಲ್ಲಿ ಅವ್ಯವಹಾರ

ಅಕ್ರಮ ಎಸಗಿದ ಗ್ರಾ.ಪಂ. ಅಧ್ಯಕ್ಷ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಜೊತೆಗೆ ಅವರ ವಿರುದ್ಧ ಕ್ರಮ ಜರುಗಿಸದ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನ.5ರಂದು ಬೆಂಗಳೂರಿನ ಗಾಂಧಿನಗರದ ಫ್ರೀಡಂ ಪಾರ್ಕ್‌ನಲ್ಲಿ ನನ್ನ ಬೆಂಬಲಿಗರ ಜೊತೆ ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಿದ್ದೇನೆ ಎಂದು ತಿಳಿಸಿದರು. ಗ್ರಾಮದ ಮುಖಂಡ ಸಿದ್ದಲಿಂಗಯ್ಯ, ಕೆಂಪೇಗೌಡ ಇದ್ದರು.

## ಮಿನಿ ನ್ಯೂಸ್

### 29ಕ್ಕೆ ಪಿಂಚಣಿ, ಜಿಪಿಎಫ್ ಅದಾಲತ್

• ಉದಯವಾಹಿನಿ, ರಾಮನಗರ

ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಅ. 29ರಂದು ಬೆಳಿಗ್ಗೆ 10.30ಕ್ಕೆ ಪಿಂಚಣಿ ಅದಾಲತ್ ಹಾಗೂ ಜಿಪಿಎಫ್ ಅದಾಲತ್ ಕಾರ್ಯಕ್ರಮನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮಹಾಲೇಖಪಾಲರ ಕಚೇರಿ ಅಧಿಕಾರಿ, ಸಿಬ್ಬಂದಿ, ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳಾದ ಎಸ್‌ಬಿಐ, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾದ ಸಿಪಿಪಿಸಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬೆಂಗಳೂರಿನ ರಾಜ್ಯ ಪಿಂಚಣಿ ಪಾವತಿ ಖಜಾನೆಯ ಹೆಚ್ಚುವರಿ ನಿರ್ದೇಶಕರು ಭಾಗವಹಿಸಿ ಪಿಂಚಣಿ ಪಾವತಿಯ ಕುಂದುಕೊರತೆಗಳ ಬಗ್ಗೆ ಚರ್ಚಿಸಲಿದ್ದಾರೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಖಜಾನೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶರಣರ ಹಿತವಚನ ಪಾಲಿಸಲು ಸಲಹೆ

• ಉದಯವಾಹಿನಿ, ಕನಕಪುರ

ಚಿಂತನೆ ಮನುಷ್ಯನ ಜೀವನ ನಕಾರಾತ್ಮಕತೆಯೆಡೆಗೆ ಕೊಂಡೊಯ್ಯುತ್ತದೆ. ಶರಣರ ಹಿತವಚನ ಜೀವನದಲ್ಲಿ ಅಳವಡಿಸಿಕೊಂಡರೆ ಜೀವನ ಯಶಸ್ಸಿನಡೆಗೆ ಕೊಂಡೊಯ್ಯುತ್ತದೆ ಎಂದು ದಾಳಿಂಬ ಬಸವ ಗುರು ಮಂಟಪ ಅಧ್ಯಕ್ಷ ಹಾಗೂ ಕುಂಬಳಗೂಡು ಬಸವ ಗಂಗೋತ್ರಿ, ಡಾ.ಚನ್ನಬಸವಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು. ತಾಲ್ಲೂಕಿನ ಸಾತನೂರು ಹೋಬಳಿ ದಾಳಿಂಬ ಗ್ರಾಮದ ಗುರು ಬಸವ ಮಂಟಪದಲ್ಲಿ ಹಮ್ಮಿಕೊಂಡಿದ್ದ ಶರಣರ ಸಂಗಮ ಸಾಮೂಹಿಕ ಪ್ರಾರ್ಥನೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದರು. ನಮ್ಮ ಅಹಂಕಾರ ನಿವಾರಣೆಯಾಗಲು ಶರಣರು ನೀಡಿದ ಮಹಾ ಆದರ್ಶ ನಮ್ಮ ಬಾಳಿನಲ್ಲಿ ಅಳವಡಿಸಿಕೊಳ್ಳಬೇಕು. ಯುವಕರು, ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ದೂರವಿದ್ದು ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು.

ಮಾನವನ ಜೀವನ ಯಶಸ್ವಿಯಾಗಲು ಶರಣರ ಚಿಂತನೆ ಅಗತ್ಯ. ಜಗಜ್ಯೋತಿ ಬಸವಣ್ಣ ಅವರು ನೀಡಿದ ವಚನ ಸಾರ ಎಲ್ಲರೂ ಅಳವಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು. ಸಾಮೂಹಿಕ ಪ್ರಾರ್ಥನೆ ಮಾಡುವುದರಿಂದ ಭಕ್ತರ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ, ಸೌಹಾರ್ದತೆ ಬೆಳೆಯಲು ಕಾರಣವಾಗುತ್ತದೆ. ದಾಳಿಂಬ ಬಸವ ಮಂಟಪದಲ್ಲಿ ಪ್ರತಿ ತಿಂಗಳು ಬಸವ ಸ್ಮರಣೆ ಕಾರ್ಯಕ್ರಮ ಇರುತ್ತದೆ. ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು ಎಂದರು.

### ವ್ಯಕ್ತಿಯ ಬರ್ಬರ ಕೊಲೆ ಹೆದ್ದಾರಿಯಲ್ಲಿ ಶವ ಪತ್ತೆ

• ಉದಯವಾಹಿನಿ, ಕೋಲಾರ

ತಾಲ್ಲೂಕಿನ ಕೆಂದಟ್ಟಿ ಬಳಿ ಮಂಗಳವಾರ ವ್ಯಕ್ತಿಯೊಬ್ಬರನ್ನು ಬರ್ಬರವಾಗಿ ಕೊಲೆ ಮಾಡಿದ್ದು, ಶವವು ರಾಷ್ಟ್ರೀಯ ಹೆದ್ದಾರಿ-75ರ ಬಳಿ ಪತ್ತೆಯಾಗಿದೆ. ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಯಳೇಸಂದ್ರ ಗ್ರಾಮದ ಅಫ್ರೀದ್ (28) ಕೊಲೆಯಾದ ವ್ಯಕ್ತಿ. ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಲೆ ಮಾಡಿ ಬಳಿಕ ಶವವನ್ನು ತಂದು ಆಟೋದಲ್ಲಿ ಬಿಸಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಕೋಲಾರ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಘಟನೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್, ಕೆಂದಟ್ಟಿ ಬಳಿ ಆಟೋದಲ್ಲಿ ಅಫ್ರೀದ್ ಎಂಬುವರ ಶವ ಪತ್ತೆಯಾಗಿದ್ದು, ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದರು. ಈ ನಿಟ್ಟಿನಲ್ಲಿ ಪ್ರಕರಣ ದಾಖಲಿಸಿಕೊಂಡು ಎರಡು ತಂಡಗಳನ್ನು ರಚಿಸಿ ತನಿಖೆ ಆರಂಭಿಸಲಾಗಿದೆ. ಅಫ್ರೀದ್ ಮೂಲತಃ ಬಂಗಾರಪೇಟೆ ತಾಲ್ಲೂಕಿನ ಯಳೇಸಂದ್ರದವರಾಗಿದ್ದು, ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ಅವರದೇ ಆಟೋದಲ್ಲಿ ಶವ ಪತ್ತೆಯಾಗಿದ್ದು, ಹಲವು ಅನುಮಾನಗಳಿವೆ. ಸದ್ಯ ತನಿಖೆ ಚುರುಕುಗೊಳಿಸಲಾಗಿದೆ. ಪೂರ್ಣಗೊಂಡ ಬಳಿಕ ಹೆಚ್ಚಿನ ಮಾಹಿತಿ ನೀಡಲಾಗುವುದು ಎಂದರು.

### ಅಕ್ರಮ ಸಾಗಾಟ ಜಾನುವಾರು ರಕ್ಷಣೆ

• ಉದಯವಾಹಿನಿ, ನಂಜನಗೂಡು

ತಾಲ್ಲೂಕಿನ ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದು, 20 ಕರುಗಳನ್ನು ರಕ್ಷಿಸಿದ್ದಾರೆ. ತಾಲ್ಲೂಕಿನ ಜಯಪುರ ಪೊಲೀಸರಿಗೆ ಅಕ್ರಮವಾಗಿ ಜಾನುವಾರು ಸಾಗಾಟದ ಮಾಹಿತಿ ದೊರೆತಿದ್ದು, ಪಿಎಸ್‌ಐ ಹೇಮಾವತಿ ಅವರು ವಾಹನವನ್ನು ಹಿಂಬಾಲಿಸಿದ್ದಾರೆ. ಅತಿವೇಗದಿಂದ ಚಾಲನೆ ಮಾಡುತ್ತಿದ್ದ ಖದೀಮರು ಹುಲ್ಲಹಳ್ಳಿ ರಸ್ತೆ ಕಡೆಗೆ ತಿರುಗಿದ್ದಾರೆ. ಕೂಡಲೇ ಹೇಮಾವತಿ ಅವರು ಹುಲ್ಲಹಳ್ಳಿ ಪಿಎಸ್‌ಐ ಚೇತನ್ ಕುಮಾರ್ ಅವರಿಗೆ ಮಾಹಿತಿ ನೀಡಿದ್ದು, ಅವರು ತಮ್ಮ ಸಿಬ್ಬಂದಿಯೊಂದಿಗೆ ಹಿಡಿಯಲು ಮುಂದಾದಾಗ ಅಹಲ್ಯಾ ಗ್ರಾಮದ ಬಳಿ ವಾಹನ ಪಲ್ಟಿಯಾಗಿದೆ. ಆರೋಪಿಗಳು ಪರಾರಿಯಾಗಿದ್ದಾರೆ. ಸ್ಥಳೀಯರ ಸಹಾಯದಿಂದ 20 ಕರುಗಳನ್ನ ರಕ್ಷಿಸಿ, ಮೈಸೂರಿನ ಪಿಂಜರಾಪೋಲ್‌ಗೆ ರವಾನಿಸಿ ಸಾಗಿಸುತ್ತಿದ್ದ ವಾಹನವನ್ನು ವಶಪಡಿಸಿಕೊಂಡಿದ್ದಾರೆ. ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತರಾಳದಿಂದ..
EDITORIAL

# ಖಾತಾ ಪರಿವರ್ತನೆ: ಉದ್ದೇಶ ಒಳ್ಳೆಯದು, ಸುಲಿಗೆ ತಪ್ಪಲಿ




ಬೆಂಗಳೂರು ಮಹಾನಗರದ 'ಬಿ' ಖಾತಾ ಆಸ್ತಿಗಳನ್ನು ನಿಗದಿತ ಶುಲ್ಕ ಪಡೆಯುವ ಮೂಲಕ 'ಎ' ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರವು ಸ್ವಾಗತಾರ್ಹವಾದುದು. ವಾಸ್ತವವಾಗಿ ಬಲು ಹಿಂದೆಯೇ ಆಗಬೇಕಾಗಿದ್ದ ಕೆಲಸ ಇದಾಗಿತ್ತು. ಲಕ್ಷಾಂತರ ಆಸ್ತಿಗಳು ಇದರಿಂದ ಕಾನೂನುಬದ್ಧಗೊಳ್ಳಲಿದ್ದು, ಈ ಆಸ್ತಿಗಳ ಮಾಲೀಕರು ನಿಟ್ಟುಸಿರು ಬಿಡಲಿದ್ದಾರೆ. ಒಂದೆಡೆ, ದಾಖಲೆಗಳ ನಿರ್ವಹಣೆ ಸುಗಮವಾಗಲಿದ್ದರೆ, ಇನ್ನೊಂದೆಡೆ, ಪಾಲಿಕೆಗಳ ವರಮಾನವೂ ಹೆಚ್ಚಲಿದೆ. ಅತಂತ್ರ ಸ್ಥಿತಿಯಲ್ಲಿದ್ದ ನಗರದ ಸುಮಾರು 7.5 ಲಕ್ಷ ಆಸ್ತಿಗಳಿಗೆ 'ಎ' ಖಾತೆ ಸಿಗಲಿರುವ ಕಾರಣ ಅಕ್ರಮ–ಸಕ್ರಮ ಎಂದು ಭಾಗ ಮಾಡಿ ನೋಡುವ ಪರಿಪಾಟಕ್ಕೂ ಕೊನೆ ಬೀಳುವ ನಿರೀಕ್ಷೆ ಇದೆ. ಹೀಗಿದ್ದೂ ಖಾತೆಗಳ ಪರಿವರ್ತನೆ ಮಾಡುವುದಕ್ಕಾಗಿ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕವು ಮಧ್ಯಮವರ್ಗದವರ ಪಾಲಿಗೆ ನುಂಗಲಾರದ ತುತ್ತಾಗಿದೆ. ಒಂದು ಉದಾಹರಣೆ ತೆಗೆದುಕೊಳ್ಳುವುದಾದರೆ, ಪ್ರತಿ ಚದರ ಅಡಿಗೆ 7,000 ರೂ. ದರ ಇರುವ ಪ್ರದೇಶದ 30x40 ಚದರ ಅಡಿ ವಿಸ್ತೀರ್ಣದ ನಿವೇಶನಕ್ಕೆ 'ಎ' ಖಾತೆ ಪಡೆಯಲು 4.2 ಲಕ್ಷರೂ.ಅಷ್ಟು ವೆಚ್ಚವಾಗಲಿದೆ. ತಮ್ಮ ಜೀವಮಾನದ ಉಳಿತಾಯದಿಂದ ನಿವೇಶನ ಖರೀದಿಸಿದ ಕುಟುಂಬಗಳ ಪಾಲಿಗೆ ಇದೊಂದು ದೊಡ್ಡ ಹೊರೆ. ಇಂತಹ ಆಸ್ತಿಗಳ ಮಾಲೀಕರು ನೋಂದಣಿ ಸಮಯದಲ್ಲಿ ಆಗಿನ ಮಾರ್ಗಸೂಚಿ ದರದ ಪ್ರಕಾರ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಪಾವತಿಸಿದ್ದಾರೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳಬೇಕು. 'ಬಿ' ಖಾತಾ ಆಸ್ತಿಗಳ ಬಿಕ್ಕಟ್ಟು ಕೇವಲ ನಾಗರಿಕರಿಂದ ಸೃಷ್ಟಿಯಾದ ಸಮಸ್ಯೆಯಲ್ಲ. ಇಂತಹ ಆಸ್ತಿಗಳ ನೋಂದಣಿಗೆ ಅವಕಾಶ ಕೊಟ್ಟು, ತೆರಿಗೆ ಸಂಗ್ರಹ ಮಾಡಿದ ಸರ್ಕಾರ ಸಹ ಈ ಸಮಸ್ಯೆಯ ಹೊಣೆಯನ್ನು ಹೊರಬೇಕು. ಇದುವರೆಗೆ ಆಡಳಿತದ ಹೊಣೆ ಹೊತ್ತವರೆಲ್ಲ ಈ ಪ್ರಮಾದದಲ್ಲಿ ಭಾಗೀದಾರರು. ಲಾಗಾಯ್ತಿನಿಂದಲೂ ಇಂತಹ ಆಸ್ತಿಗಳ ನೋಂದಣಿಗೆ ಸರ್ಕಾರವೇ ಮುಂದೆ ನಿಂತು ಅವಕಾಶ ಮಾಡಿಕೊಟ್ಟು, ಈಗ ದಂಡನೆಯ ಹಾದಿ ಹಿಡಿದಿರುವುದು ಸರಿಯಲ್ಲ.

> **'ಬಿ' ಖಾತಾ ಆಸ್ತಿಗಳನ್ನು 'ಎ' ಖಾತಾ ಆಸ್ತಿಗಳಾಗಿ ಪರಿವರ್ತಿಸುವ ಸರ್ಕಾರದ ನಿರ್ಧಾರ ಒಳ್ಳೆಯದು. ಆದರೆ, ಈ ಪ್ರಕ್ರಿಯೆ ಜನಸಾಮಾನ್ಯರ ಪಾಲಿಗೆ ಹೊರೆ ಆಗಬಾರದು.**

ಕಾನೂನು ಬದ್ಧ ಆಗಿರದ ಆಸ್ತಿಗಳ ನೋಂದಣಿಗೆ ಸರ್ಕಾರವು ಮೊದಲಿನಿಂದಲೂ ಅನುಮತಿಯನ್ನೇ ನೀಡಬಾರದಿತ್ತು. ಪ್ರಸ್ತುತ ಅವ್ಯವಸ್ಥೆಯು ದಶಕಗಳ ಆಡಳಿತಾತ್ಮಕ ನಿರಾಸಕ್ತಿ, ಅನುಕೂಲಸಿಂಧು ರಾಜಕಾರಣದ ಪರಿಣಾಮವಾಗಿದೆ. ಯೋಜಿತ ಅಭಿವೃದ್ಧಿ ಮತ್ತು ನಾಗರಿಕ ಶಿಸ್ತಿಗಿಂತಲೂ ಮತಗಳು ಮತ್ತು ಆದಾಯವೇ ಆದ್ಯತೆ ಪಡೆದುದರ ಫಲಶ್ರುತಿ ಇದು. ಅಲ್ಲದೆ, ಯೋಜನೆಯ ವ್ಯಾಪ್ತಿ ಕೂಡ ಸೀಮಿತವಾಗಿದೆ. ಬಿ ಖಾತಾಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್‌ನಲ್ಲಿರುವ ಸಾವಿರಾರು ಗೃಹಗಳನ್ನು ಈ ಯೋಜನೆಯ ಪರಿಧಿಯಿಂದ ಹೊರಗೆ ಇಡಲಾಗಿದೆ. ಖಾಲಿ ನಿವೇಶನಗಳು ಮತ್ತು ಏಕ–ಘಟಕ ಕಟ್ಟಡ ಹೊಂದಿರುವ ನಿವೇಶನಗಳಿಗೆ ಮಾತ್ರ ಪ್ರಯೋಜನ ಸಿಗಲಿದೆ. ಅದೇ ರೀತಿ, ನಗರದ ಹೊರವಲಯದ ಪ್ರದೇಶಗಳಲ್ಲಿರುವ ಹಲವು ಬಡಾವಣೆಗಳು ಪಂಚಾಯಿತಿಗಳ ವ್ಯಾಪ್ತಿಗೆ ಬರುವುದರಿಂದ ಅಲ್ಲಿನ ಆಸ್ತಿಗಳಿಗೂ 'ಎ' ಖಾತಾ ಪಡೆಯುವ ಅದೃಷ್ಟವಿಲ್ಲ. ಅಲ್ಲಿನ ಖರೀದಿದಾರರು ಸಹ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪಾವತಿಸಿದ್ದಾರೆ. 'ಬಿ' ಖಾತಾ ಸಮಸ್ಯೆ ಎದುರಿಸುತ್ತಿರುವ ಎಲ್ಲಾ ಆಸ್ತಿಗಳನ್ನೂ ಯೋಜನೆಯ ವ್ಯಾಪ್ತಿಗೆ ತರಬೇಕು.

ಖಾತೆ ಪರಿವರ್ತನೆಗೆ ಅರ್ಜಿ ಹಾಕಲು ನವೆಂಬರ್ 1ರಿಂದ ನೂರು ದಿನಗಳ ಕಾಲಾವಕಾಶ ನೀಡಲಾಗಿದೆ. ಬೇಕಾದ ದಾಖಲೆಗಳನ್ನು ಹೊಂದಿಸಿಕೊಳ್ಳಲು ಮತ್ತು ಅಗತ್ಯ ಪ್ರಮಾಣದ ಶುಲ್ಕ ಭರಿಸಲು ನಾಗರಿಕರಿಗೆ ಹೆಚ್ಚಿನ ಸಮಯ ಬೇಕಾಗಿರುವುದರಿಂದ ಕೊಟ್ಟ ಕಡಿಮೆ ಕಾಲದ ಮಿತಿ ಕೂಡ ಒಂದು ದೊಡ್ಡ ಸವಾಲು. ಈ ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತಂದಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಭಾರಿ ಪ್ರಮಾಣದ ಶುಲ್ಕವು ಜನರ ಭಾಗವಹಿಸುವಿಕೆಗೆ ಉತ್ತೇಜನ ನೀಡುವುದಿಲ್ಲ. ಅದರಿಂದ ಯೋಜನೆಯ ಉದ್ದೇಶವೇ ವ್ಯರ್ಥವಾದಂತಾಗುತ್ತದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲಿ ಮಾಡಬಹುದಾದರೂ, ಅದನ್ನು ಕಚೇರಿಗಳಲ್ಲೇ ಪೂರ್ಣಗೊಳಿಸುವಂತಹ ಒತ್ತಡಕ್ಕೆ ಜನ ಸಿಲುಕುತ್ತಾರೆ. ತಮ್ಮ ಕೆಲಸವನ್ನು ಪೂರ್ಣಗೊಳಿಸಲು ಅವರು ಲಂಚ ನೀಡುವ ಪ್ರಮೇಯವೂ ಬರುತ್ತದೆ. ಖಾತಾ ಪರಿವರ್ತನೆಯು ಒಂದು ಒಳ್ಳೆಯ ಹೆಜ್ಜೆಯಾಗಿದ್ದರೂ ಯೋಜನೆಯ ಅನುಷ್ಠಾನದಲ್ಲಿರುವ ಲೋಪಗಳ ಕಡೆಗೆ ಸರ್ಕಾರ ಗಮನಹರಿಸಬೇಕು. ಶುಲ್ಕದ ಹೊರೆ ಕಡಿತ, ಕಾಲಮಿತಿ ಹೆಚ್ಚಳ ಮತ್ತು ಜನರ ಸುಲಿಗೆ ತಪ್ಪಿಸುವಂತಹ ಉಪಕ್ರಮಗಳಿಗೆ ಮುಂದಾಗಬೇಕು.

# ಸಹೋದರ ಬಿದಿಗೆ

• ಶ್ರೀ. ವಿನೋದ ಕಾಮತ್




ಕಾರ್ತಿಕ ಶುಕ್ಲ ದ್ವಿತೀಯಾದ ಈ ದಿನ ಯಮನು ತನ್ನ ತಂಗಿ ಯಮುನೆಯ ಮನೆಗೆ ಭೋಜನಕ್ಕೆ ಹೋಗಿದ್ದನು; ಆದುದರಿಂದ ಈ ದಿನಕ್ಕೆ ಯಮದ್ವಿತೀಯಾ ಎನ್ನುವ ಹೆಸರು ಬಂದಿದೆ. ಅಪಮೃತ್ಯು ಬರಬಾರದೆಂದು ಧನತ್ರಯೋದಶಿ, ನರಕ ಚತುರ್ದಶಿ ಮತ್ತು ಯಮ ದ್ವಿತೀಯಾ ಈ ದಿನಗಳಂದು ಮೃತ್ಯುವಿನ ದೇವತೆಯಾದ 'ಯಮಧರ್ಮನ' ಪೂಜೆಯನ್ನು ಮಾಡುತ್ತಾರೆ. ಈ ದಿನ ಯಮರಾಜನು ತನ್ನ ಸಹೋದರಿ ಯಮುನೆಯ ಮನೆಗೆ ಭೋಜನಕ್ಕೆ ಹೋಗುತ್ತಾನೆ ಮತ್ತು ಈ ದಿನ ನರಕದಲ್ಲಿ ಬಿದ್ದು ತೊಂದರೆಗೊಳಗಾದ ಜೀವಗಳನ್ನು ಒಂದು ದಿನದ ಮಟ್ಟಿಗೆ ಮುಕ್ತಗೊಳಿಸುತ್ತಾನೆ.

**ಯಮತರ್ಪಣ, ಯಮದೀಪದಾನ ಮತ್ತು ಯಮನಿಗೆ ಪ್ರಾರ್ಥನೆಯನ್ನು ಮಾಡುವುದು:** ಅಪಮೃತ್ಯು ನಿವಾರಣಾರ್ಥ ಶ್ರೀಯಮಧರ್ಮಪ್ರೀತ್ಯರ್ಥಂ ಯಮತರ್ಪಣಂ ಕರಿಷ್ಯೇ। ಎಂದು ಸಂಕಲ್ಪ ಮಾಡಿ ಯಮನ ಹದಿನಾಲ್ಕು ಹೆಸರುಗಳನ್ನು ಹೇಳಿ ತರ್ಪಣ ಕೊಡಬೇಕು. ಇದರ ವಿಧಿಯನ್ನು ಪಂಚಾಂಗದಲ್ಲಿ ಕೊಟ್ಟಿರುತ್ತಾರೆ. ಇದೇ ದಿನ ಯಮನಿಗೆ ದೀಪದಾನವನ್ನು ಮಾಡುವುದಿರುತ್ತದೆ. ಯಮನು ಮೃತ್ಯು ಮತ್ತು ಧರ್ಮದ ದೇವತೆಯಾಗಿದ್ದಾನೆ. ಪ್ರತಿಯೊಬ್ಬ ಮನುಷ್ಯನಿಗೆ ಮರಣವಿದೆ ಎಂಬುದರ ಅರಿವು ಸತತವಾಗಿರುವುದು ಆವಶ್ಯಕವಾಗಿದೆ; ಏಕೆಂದರೆ ಇದರಿಂದ ಮನುಷ್ಯನಿಂದ ಕೆಟ್ಟ ಕಾರ್ಯ ಹಣದ ಅಪವ್ಯಯ ವಾಗುವುದಿಲ್ಲ. ಆದ್ದರಿಂದ ಯಮನಿಗೆ ದೀಪದಾನ ಮಾಡಿ ಮುಂದಿನಂತೆ ಹೇಳಬೇಕು, 'ಹೇ ಯಮನೇ, ಈ ದೀಪದಂತೆ ನಾವು ಸತರ್ಕರಾಗಿದ್ದೇವೆ, ಜಾಗರೂಕರಾಗಿದ್ದೇವೆ. ಜಾಗರೂಕತೆಯ, ಪ್ರಕಾಶದ ಪ್ರತೀಕವಾಗಿರುವ ದೀಪವನ್ನು ನಿನಗೆ ಅರ್ಪಿಸುತ್ತಿದ್ದೇವೆ, ನೀನು ಅದನ್ನು ಸ್ವೀಕರಿಸು. ನಿನ್ನ ಆಗಮನವು ಯಾವಾಗ ಆಗುವುದು ನಮಗೆ ತಿಳಿದಿಲ್ಲ; ಆದುದರಿಂದ ನಾವು ನಮ್ಮ ಲೆಕ್ಕಪತ್ರವನ್ನು ಸಮಯಕ್ಕೆ ಸರಿಯಾಗಿ ಬರೆದಿಡುತ್ತೇವೆ, ಇದರಿಂದ ಅರ್ಧಂಬರ್ಧ ಬರೆದ ಲೆಕ್ಕದ ಕಾಳಜಿಯನ್ನು ಮಾಡುವ ಆವಶ್ಯಕತೆ ಬೀಳುವುದಿಲ್ಲ. ಏಕೆಂದರೆ ನೀನು ಆಕಸ್ಮಿಕವಾಗಿ ಎಂದಿಗೂ ಬರಬಹುದೆಂಬುದು ನಮಗೆ ತಿಳಿದಿದೆ.

> **ಅನೇಕ ದಾರ್ಶನಿಕ ಸಂತರು ಹೇಳಿದಂತೆ ಮುಂಬರುವ ಕಾಲವು ಅತ್ಯಂತ ಭೀಕರವಾಗಿದೆ. ಆ ಕಾಲದಲ್ಲಿ ಯಾವ ಸಹೋದರನೂ ಅವನ ಸಹೋದರಿಯ ಅಥವಾ ಯಾವುದೇ ಸಹೋದರಿಯು ಅವಳ ಸಹೋದರನ ರಕ್ಷಣೆಯನ್ನು ಮಾಡಲು ಸಾಧ್ಯವಿಲ್ಲ. ಈ ಕಾಲದಲ್ಲಿ ಕೇವಲ ಭಗವಂತನೇ ನಮ್ಮ ರಕ್ಷಣೆಯನ್ನು ಮಾಡಲು ಸಾಧ್ಯ. ಆದುದರಿಂದ ಸಹೋದರಬಿದಿಗೆಯ ಶುಭದಿನದಂದು ಸಹೋದರ-ಸಹೋದರಿಯರು ಪರಸ್ಪರರ ರಕ್ಷಣೆಗಾಗಿ ಮೇಲಿನ ಪ್ರಾರ್ಥನೆಯ ಮಾಧ್ಯಮದಿಂದ ಭಗವಂತನಿಗೆ ಹರಕೆಯನ್ನು ಸಲ್ಲಿಸಬೇಕು.**

**ಸಹೋದರಿಯು ಸಹೋದರನಿಗೆ ಆರತಿಯನ್ನು ಬೆಳಗುವುದು:** ಈ ದಿನ ಸಹೋದರನು ಸಹೋದರಿಯ ಕಡೆಗೆ ಹೋಗಬೇಕು ಮತ್ತು ಸಹೋದರಿಯು ಸಹೋದರನಿಗೆ ಆರತಿಯನ್ನು ಬೆಳಗಬೇಕು. ಯಾರಾದರೊಬ್ಬ ಸ್ತ್ರೀಗೆ ಸಹೋದರನಿಲ್ಲದಿದ್ದರೆ ಅವಳು ಯಾರಾದರೂ ಅನ್ಯ ಪುರುಷನನ್ನು ಸಹೋದರನೆಂದು ತಿಳಿದು ಅವನಿಗೆ ಆರತಿ ಬೆಳಗಬೇಕು. ಅದು ಸಾಧ್ಯವಿಲ್ಲದಿದ್ದರೆ ಚಂದ್ರನನ್ನು ಸಹೋದರನೆಂದು ತಿಳಿದು ಆರತಿ ಬೆಳಗಬೇಕು. ಈ ದಿನ ಯಾವುದೇ ಪುರುಷನು ತನ್ನ ಮನೆಯಲ್ಲಿ ಪತ್ನಿಯು ತಯಾರಿಸಿದ ಅಡುಗೆಯನ್ನು ಸೇವಿಸಬಾರದು. ತಂಗಿಯ ಮನೆಗೆ ಹೋಗಿ ಅವಳಿಗೆ ವಸ್ತ್ರಾಲಂಕಾರಗಳನ್ನು ಕೊಟ್ಟು ಅವಳ ಮನೆಯಲ್ಲಿ ಭೋಜನ ಮಾಡಬೇಕು.

ಸ್ವಂತ ತಂಗಿ ಇಲ್ಲದಿದ್ದರೆ ಬೇರೆ ಸಹೋದರಿಯ ಮನೆಯಲ್ಲಿ ಅಥವಾ ಬೇರೆ ಸ್ತ್ರೀಯನ್ನು ಸಹೋದರಿಯೆಂದು ಪರಿಗಣಿಸಿ ಅವಳ ಮನೆಯಲ್ಲಿ ಭೋಜನ ಮಾಡಬೇಕು ಎಂದು ಹೇಳಲಾಗಿದೆ. ಸಹೋದರ ಬಿದಿಗೆಯ ದಿನದಂದು ಸಹೋದರಿಯು ಸಹೋದರನಿಗೆ ಆರತಿಯನ್ನು ಬೆಳಗುತ್ತಾಳೆ. ಅನಂತರ ಸಹೋದರನು ಸಹೋದರಿಗೆ ಅವಳ ನಿತ್ಯ ಉಪಯೋಗದ ವಸ್ತು, ಗ್ರಂಥ ಇಂತಹ ಉಡುಗೊರೆಯನ್ನು ಕೊಡಬೇಕು. ಪ್ರತಿವರ್ಷದಂತೆ ಈ ವರ್ಷವೂ ಸಹೋದರನು ಸಹೋದರಿಗೆ ಉಡುಗೊರೆಯನ್ನು ಕೊಡಬಹುದು. ಆ ಸಮಯದಲ್ಲಿ ಸಹೋದರಿ–ಸಹೋದರರು ಅವರ ಉಪಾಸ್ಯದೇವತೆ ಅಥವಾ ಗುರುದೇವರಿಗೆ ಮುಂಬರುವ ಭೀಕರ ಕಾಲದಲ್ಲಿ ನಮ್ಮ ರಕ್ಷಣೆಯಾಗಲಿ. ಈ ಭೀಕರ ಕಾಲವನ್ನು ಎದುರಿಸಲು ಆತ್ಮಬಲ, ಮನೋಬಲ ಸಿಗಲಿ. ನಮ್ಮಿಂದ ನಿರಂತರ ಭಗವಂತನ ನಾಮಸ್ಮರಣೆಯಾಗಲಿ', ಎಂದು ಪ್ರಾರ್ಥನೆಯನ್ನು ಮಾಡಬೇಕು.



• ಉದಯವಾಹಿನಿ, ವಿಶೇಷ

# ಖಾಲಿ ಹೊಟ್ಟೆಗೆ ಬೆಳ್ಳುಳ್ಳಿ ತಿನ್ನಬೇಕು ಎಂದು ಪೂರ್ವಜರು ಹೇಳೋದು ಯಾಕೆ?



ಬೆಳ್ಳುಳ್ಳಿ ಒಂದು ಆಯುರ್ವೇದಿಕ್ ಗುಣಗಳನ್ನು ಹೊಂದಿರುವ ಗಿಡಮೂಲಿಕೆಯಾಗಿದ್ದು, ಆರೋಗ್ಯಕ್ಕೆ ಹಲವಾರು ಪ್ರಯೋಜನಗಳನ್ನು ನೀಡುತ್ತದೆ. ಅದರಲ್ಲೂ ಖಾಲಿ ಹೊಟ್ಟೆಯಲ್ಲಿ ಬೆಳ್ಳುಳ್ಳಿ ತಿನ್ನುವುದರಿಂದ ಹಲವಾರು ಆರೋಗ್ಯ ಪ್ರಯೋಜನಗಳಿವೆ. ಬೆಳ್ಳುಳ್ಳಿ ವಿಟಮಿನ್ ಸಿ, ಎ, ಬಿ ಗಳಲ್ಲಿ ಸಮೃದ್ಧವಾಗಿದೆ, ಜೊತೆಗೆ ಮೆಗ್ನೀಸಿಯಮ್, ಕ್ಯಾಲ್ಸಿಯಂ, ಸತು ಮತ್ತು ಸೆಲೆನಿಯಮ್ ಗಳಲ್ಲಿ ಸಮೃದ್ಧವಾಗಿದೆ. ಅದನ್ನು ಪ್ರತಿದಿನ ಎಷ್ಟು ಸೇವಿಸಬೇಕು ಎಂಬುದನ್ನು ತಿಳಿಯೋಣ.

**ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ:** ಬೆಳ್ಳುಳ್ಳಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಪ್ರಯೋಜನಕಾರಿಯಾಗಿದೆ. ಇದು ಸಲ್ಫರ್ ಸಂಯುಕ್ತವಾದ ಆಲಿಸಿನ್‌ನಲ್ಲಿ ಸಮೃದ್ಧವಾಗಿದೆ. ಆಲಿಸಿನ್ ಬಿಳಿ ರಕ್ತ ಕಣಗಳ ಚಟುವಟಿಕೆಯನ್ನು ಹೆಚ್ಚಿಸುತ್ತದೆ, ಇದು ದೇಹವನ್ನು ಸೋಂಕುಗಳು ಮತ್ತು ಹಾನಿಕಾರಕ ಸೂಕ್ಷ್ಮಜೀವಿಗಳಿಂದ ರಕ್ಷಿಸುವಲ್ಲಿ ಮುಖ್ಯವಾಗಿದೆ. ಬೆಳಿಗ್ಗೆ ಬೆಳ್ಳುಳ್ಳಿಯನ್ನು ಸೇವಿಸುವುದರಿಂದ ನೈಸರ್ಗಿಕವಾಗಿ ನಿಮ್ಮ ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ, ಅನಾರೋಗ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.

**ಹೃದಯದ ಆರೋಗ್ಯಕ್ಕೆ ಉತ್ತಮ:** ಬೆಳ್ಳುಳ್ಳಿಯ ನಿಯಮಿತ ಸೇವನೆಯು ಹೃದಯದ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ಬೆಳ್ಳುಳ್ಳಿ ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಕೆಟ್ಟ ಐಆಐ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುತ್ತದೆ. ದೇಹದಲ್ಲಿ ಉತ್ತಮ ಕೊಲೆಸ್ಟ್ರಾಲ್ ಅನ್ನು ಹೆಚಿಸುತ್ತದೆ. ಈ ಅಂಶಗಳು ಹೃದಯ ಕಾಯಿಲೆಯ ಅಪಾಯವನ್ನು ಕಡಿಮೆ ಮಾಡುತ್ತದೆ.

**ನಿರ್ವಿಶೀಕರಣಕಾರಕವಾಗಿ ಕಾರ್ಯನಿರ್ವಹಿಸುತ್ತದೆ** ಬೆಳ್ಳುಳ್ಳಿ ನೈಸರ್ಗಿಕ ನಿರ್ವಿಶೀಕರಣಕಾರಕ ಆಗಿದ್ದು, ದೇಹದಿಂದ ವಿಷವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಇದರಲ್ಲಿರುವ ಆಲಿಸಿನ್ ಯಕೃತ್ತಿನ ಕಾರ್ಯವನ್ನು ಹೆಚ್ಚಿಸುತ್ತದೆ, ಇದು ರಕ್ತ ಪ್ರವಾಹದಿಂದ ಹಾನಿಕಾರಕ ವಸ್ತುಗಳನ್ನು ಪರಿಣಾಮಕಾರಿಯಾಗಿ ತೆಗೆದುಹಾಕಲು ಅನುವು ಮಾಡಿಕೊಡುತ್ತದೆ. ನಿಯಮಿತ ನಿರ್ವಿಶೀಕರಣವು ಉರಿಯೂತವನ್ನು ಕಡಿಮೆ ಮಾಡುತ್ತದೆ ಮತ್ತು ಸ್ಪಷ್ಟವಾದ ಚರ್ಮ, ಹೆಚ್ಚಿದ ಶಕ್ತಿಯ ಮಟ್ಟಗಳಿಗೆ ಸಹಾಯ ಮಾಡುತ್ತದೆ.

**ಜೀರ್ಣಾಂಗ ವ್ಯವಸ್ಥೆಯನ್ನು ಬಲಪಡಿಸುತ್ತದೆ:** ಬೆಳಿಗ್ಗೆ ಹಸಿ ಬೆಳ್ಳುಳ್ಳಿ ತಿನ್ನುವುದು ನಿಮ್ಮ ಜೀರ್ಣಾಂಗ ವ್ಯವಸ್ಥೆಗೆ ಅತ್ಯಂತ ಪ್ರಯೋಜನಕಾರಿಯಾಗಿದೆ. ಬೆಳ್ಳುಳ್ಳಿಯು ಕರುಳಿನ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ಉತ್ತೇಜಿಸುವ ಪ್ರಿಬಯಾಟಿಕ್ ಗುಣಗಳನ್ನು ಹೊಂದಿದೆ.

ಇದಲ್ಲದೆ, ನೀವು ಅಜೀರ್ಣ, ಆಮ್ಲೀಯತೆಯಿಂದ ಬಳಲುತ್ತಿದ್ದರೆ ಬೆಳಿಗ್ಗೆ ಬೆಳ್ಳುಳ್ಳಿ ತಿನ್ನುವುದು ಪ್ರಯೋಜನಕಾರಿಯಾಗಿದೆ.

**ಬೆಳ್ಳುಳ್ಳಿಯನ್ನು ತಿನ್ನಲು ಸರಿಯಾದ ವಿಧಾನ:** ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ 2 ರಿಂದ 3 ಎಸಳು ಬೆಳ್ಳುಳ್ಳಿಯನ್ನು ತಿನ್ನಿರಿ. ನೀವು ಅವುಗಳನ್ನು ಹುರಿದು ತಿನ್ನಬಹುದು. ಅದರ ಪರಿಣಾಮವು ತುಂಬಾ ಬಿಸಿಯಾಗಿ ಕಂಡುಬಂದರೆ ಮಲಗುವ ಮುನ್ನ ಬೆಳ್ಳುಳ್ಳಿಯನ್ನು ನೆನೆಸಿ ಸೇವಿಸಿ.



# ಮೊಡವೆ ಕಲೆಗಳಿಂದ ಮುಖದ ಸೌಂದರ್ಯ ಹಾಳಾಗಿದೆಯಾ? ರೋಸ್ ವಾಟರ್ ಹೀಗೆ ಬಳಸಿ

ಇತ್ತೀಚಿನ ದಿನಗಳಲ್ಲಿ ಹಣ ಒಂದಿದ್ದರೆ ಮುಖದ ಸೌಂದರ್ಯ ಹೆಚ್ಚಿಸುವ ಹಲವಾರು ರೀತಿಯ ಬ್ಯೂಟಿ ಪ್ರಾಡೆಕ್ಟ್‌ಗಳು ಮಾರುಕಟ್ಟೆಯಲ್ಲಿ ಲಭ್ಯ ವಿದೆ. ಆದರೆ ಪ್ರತಿನಿತ್ಯವೂ ಇದನ್ನೇ ಬಳಕೆ ಮಾಡಿದರೆ, ತಾತ್ಕಾಲಿಕವಾಗಿ ಮುಖದ ಕಾಂತಿ ಹೆಚ್ಚಾದರೂ, ಅದರ ಪರಿಣಾಮವು ಹೆಚ್ಚು ಕಾಲ ಉಳಿಯದು ಹಾಗೂ ಕೆಲವೇ ದಿನಗಳಲ್ಲಿ ಕಾಂತಿಯು ಮತ್ತೆ ಹೊರಟು ಹೋಗ ಬಹುದು.

**ಮುಖದ ಸೌಂದರ್ಯ ನೈಸರ್ಗಿಕವಾಗಿ ಹೆಚ್ಚಿಸಲು:** ಹೀಗಾಗಿ ಮುಖದ ಸೌಂದರ್ಯ ನೈಸರ್ಗಿಕವಾಗಿ ಹೆಚ್ಚಾಗಬೇಕು ಎಂದರೆ, ಮುಖ್ಯವಾಗಿ ಕೆಲವೊಂದು ಆರೋಗ್ಯಕಾರಿ ಅಂಶಗಳನ್ನು ಮೈಗೂಡಿಸಿ ಕೊಳ್ಳಬೇಕು. ಮುಖ್ಯವಾಗಿ ಆರೋಗ್ಯಕಾರಿ ಜೀವನಶೈಲಿ ಹಾಗೂ ಆಹಾರ ಪದ್ಧತಿಯನ್ನು ಅನುಸರಿಸಬೇಕು, ಇವೆಲ್ಲಾದರ ಜೊತೆಗೆ ಯಾವಾಗಲೂ ಸಕಾರಾತ್ಮಕವಾಗಿ ಆಲೋಚನೆ ಮಾಡುವುದು, ಹೆಚ್ಚು ಸಂತೋಷವಾಗಿರಲು ಪ್ರಯತ್ನಿಸುವುದು ಇಂತಹ ಧನಾತ್ಮಕ ಅಭ್ಯಾಸಗಳನ್ನು ಅನುಸರಿಸುವುದರಿಂದ ಕೂಡ ಮುಖದ ಸೌಂದರ್ಯವು ಕೂಡ ತನ್ನಿಂತಾನೆ ಹೆಚ್ಚಾಗುತ್ತಾ ಹೋಗುತ್ತದೆ. ಇದರ ಜೊತೆಗೆ ಇನ್ನೂ ಕೆಲವೊಂದು ನೈಸರ್ಗಿಕ ವಿಧಾನಗಳನ್ನು ಅನುಸರಿಸಿದರೆ ಸೌಂದರ್ಯ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅದರಲ್ಲೂ ಮುಖದ ಸೌಂದರ್ಯ ವೃದ್ಧಿಗೆ ರೋಸ್ ವಾಟರ್ ಬಳಸುವುದರಿಂದ, ತ್ವಚೆಗೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಕೂಡ ದೂರ ಮಾಡಬಹುದು.




**ರೋಸ್ ವಾಟರ್ ಮತ್ತು ತೆಂಗಿನ ಹಾಲು:** ಮೈಬಣ್ಣವನ್ನು ಹೆಚ್ಚಿಸಲು ಮತ್ತು ನಿಮ್ಮ ಹೊಳಪನ್ನು ಹೆಚ್ಚಿಸಲು ನೀವು ಬಯಸಿದರೆ, ನೀವು ತೆಂಗಿನ ಹಾಲನ್ನು ರೋಸ್ ವಾಟರ್‌ನೊಂದಿಗೆ ಬೆರೆಸಿ ಹಚ್ಚಬಹುದು. ಈ ಮಿಶ್ರಣವನ್ನು ತಯಾರಿಸಲು, ಎರಡು ಚಮಚ ರೋಸ್ ವಾಟರ್ ಅನ್ನು ಎರಡು ಚಮಚ ತೆಂಗಿನ ಹಾಲಿನೊಂದಿಗೆ ಬೆರೆಸಿ ನಿಮ್ಮ ಮುಖಕ್ಕೆ ಹಚ್ಚಿ. ತೆಂಗಿನ ಹಾಲಿನ ತೇವಾಂಶ ನೀಡುವ ಗುಣಗಳು ನಿಮ್ಮ ಚರ್ಮವನ್ನು ಮೃದುಗೊಳಿಸುತ್ತದೆ ಮತ್ತು ಹೊಳಪು ನೀಡುತ್ತದೆ. ಇದು ಫ್ರೀ ರಾಡಿಕಲ್‌ಗಳಿಂದ ರಕ್ಷಿಸುತ್ತದೆ ಮತ್ತು ಅದರ ಸೌಂದರ್ಯವನ್ನು ಹೆಚ್ಚಿಸುತ್ತದೆ.

**ರೋಸ್ ವಾಟರ್ ಮತ್ತು ಶ್ರೀಗಂಧದ ಪುಡಿ:** ಶ್ರೀಗಂಧದ ಪುಡಿ ಮತ್ತು ರೋಸ್ ವಾಟರ್‌ನ ಪೇಸ್ಟ್ ಮೊಡವೆಗಳು ಮತ್ತು ಮೊಡವೆಗಳನ್ನು ತೆಗೆದುಹಾಕುವಲ್ಲಿ ಪರಿಣಾಮಕಾರಿಯಾಗಿದೆ. ಇದನ್ನು ತಯಾರಿಸಲು, ಒಂದು ಟೀ ಚಮಚ ಶ್ರೀಗಂಧದ ಪುಡಿಯನ್ನು ಎರಡು ಟೀ ಚಮಚ ರೋಸ್ ವಾಟರ್ ನೊಂದಿಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಪೇಸ್ಟ್ ಅನ್ನು ನಿಮ್ಮ ಮುಖಕ್ಕೆ ಹಚ್ಚಿ, 15–20 ನಿಮಿಷಗಳ ಕಾಲ ಒಣಗಲು ಬಿಡಿ, ನಂತರ ಶುದ್ಧ ನೀರಿನಿಂದ ತೊಳೆಯಿರಿ. ಈ ಪೇಸ್ಟ್ ಮೊಡವೆಗಳು ಮತ್ತು ತುರಿಕೆಯಿಂದ ಪರಿಹಾರ ನೀಡುತ್ತದೆ. ಶ್ರೀಗಂಧದ ಪುಡಿ ಚರ್ಮದ ಕಿರಿಕಿರಿ, ಕೆಂಪು ಬಣ್ಣವನ್ನು ಸಹ ಶಮನ ಗೊಳಿಸುತ್ತದೆ.



# ರಾಮಾಯಣ



## ಮಾರೀಚನು ಮಾಯಾ ಮೃಗ ರೂಪದಿಂದ ಸೀತಾದೇವಿಯ ಬಳಿಗೆ ಬಂದದ್ದು

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ಆಗ ರಾವಣನಿಗೆ ಹೆದರಿ ಮಾರೀಚನು ರಾವಣೇಶ್ವರ, ನಾವು ಶ್ರೀರಾಮನ ಆಶ್ರಮಕ್ಕೆ ಹೋಗೋಣ. ಶೀಘ್ರವಾಗಿ ಏಳು ಎಂದು ಕಂಗೆಟ್ಟು ನುಡಿದನು. ಆ ಮಾತನ್ನು ಕೇಳಿ ರಾವಣನು ಅತ್ಯಂತ ಹರ್ಷಯುಕ್ತನಾಗಿ ಮಾರೀಚನನ್ನು ತಬ್ಬಿಕೊಂಡು ಆತನನ್ನು ಕುರಿತು ಮಾರೀಚ, ನೀನು ' ಮಹಾಪರಾಕ್ರಮಿಯಾದ್ದರಿಂದ ನನ್ನ ಮನಸ್ಸಿಗೆ ಪ್ರಿಯವಾದ ಮಾತನ್ನೇ ನುಡಿದೆ. ಈಗ ನೀನು ಮೊದಲಿನಂತಲ್ಲದೆ ನಿಜವಾದ ಮಾರೀಚನಾಗಿ ಮನೋಹರನಾಗಿ ತೋರುತ್ತಿದ್ದೀಯೆ. ಒಳ್ಳೆಯದಾಯಿತು. ಈ ರಥವನ್ನು ಹತ್ತು. ನಾವು ಶ್ರೀರಾಮನ ಆಶ್ರಮಕ್ಕೆ ಹೋಗೋಣ. ನೀನು ಸೀತಾದೇವಿಯನ್ನು ಮೃಗಸ್ವರೂಪದಿಂದ ಮರಳು ಮಾಡು. ಆಕೆಯು ಒಬ್ಬಳಾಗಿರುವ ಸಮಯದಲ್ಲಿ ನಾನು ಆಕೆಯನ್ನು ಅಪಹರಿಸುತ್ತೇನೆ ಎಂದು ಹೇಳಿದನು. ಅನಂತರ ಮಾರೀಚನೊಡನೆ ರಥವನ್ನೇರಿ ಆತನ ಆಶ್ರಮದಿಂದ ಹೊರಟು ಮಧ್ಯ ಮಾರ್ಗದಲ್ಲಿ ರಮಣೀಯವಾದ ಪಟ್ಟಣಗಳನ್ನೂ ಮನೋಹರವಾದ ವನಗಳನ್ನೂ ಪರ್ವತಗಳನ್ನೂ ನದಿಗಳನ್ನೂ ನೋಡುತ್ತ ದಂಡಕಾರಣ್ಯವನ್ನು ಹೊಕ್ಕನು. ಅಲ್ಲಿ ಶ್ರೀರಾಮನ ಆಶ್ರಮವನ್ನು ಕಂಡು ಸುವರ್ಣಮಯವಾದ ರಥದಿಂದಿಳಿದು ಮಾರೀಚನನ್ನು ಕುರಿತು ಮಾರೀಚ, ಕದಳೀವನಮಧ್ಯದಲ್ಲಿ ಅತ್ಯಂತ ರಮಣೀಯವಾಗಿ ರಾಮಾಶ್ರಮವು ಕಾಣಿಸುತ್ತಿದೆ. ನೀನು ಯಾವ ಕಾರ್ಯವನ್ನು ಕುರಿತು ಬಂದೆಯೋ ಆ ಕಾರ್ಯಕ್ಕೆ ತಕ್ಕ ಪ್ರಯತ್ನವನ್ನು ಮಾಡು ಎಂದು ಹೇಳಿದನು.

ಆ ಮಾತನ್ನು ಕೇಳಿ ಮಾರೀಚನು ಸುವರ್ಣಮಯವಾದ ಮೃಗಸ್ವರೂಪವನ್ನು ತಾಳಿ ಶ್ರೀರಾಮನ ಆಶ್ರಮದ ಬಳಿಯಲ್ಲಿ ಸಂಚರಿಸಲಾರಂಭಿಸಿದನು. ಅತಿಮನೋಹರವಾದ ಸ್ವರೂಪವುಳ್ಳ ಆ ಮೃಗವು ರತ್ನ ಮಯವಾದ ಕೊಂಬುಗಳುಳ್ಳದ್ದಾಗಿಯೂ ಕೆಂಪೂ ಬಿಳುಪೂ ಕೂಡಿದ ಮುಖಕಾಂತಿ ಯುಳ್ಳದ್ದಾಗಿಯೂ ಕೆಂದಾವರೆಯಂತೆ, ಕೆಂಗಣಗಲ ಹೂವಿನಂತೆ ಮುಖವುಳ್ಳದ್ದಾಗಿಯೂ ಇಂದ್ರನೀಲರತ್ನದಂತೆ ಕಿವಿಯುಳ್ಳದ್ದಾಗಿಯೂ ಕಾಂತಿಯುಕ್ತವಾದ ಹೊಟ್ಟೆಯುಳ್ಳದ್ದಾಗಿಯೂ ಸುವರ್ಣದಂತೆ ಹೊಳೆಯುತ್ತಿದ್ದ ಪಾರ್ಶ್ವಗಳುಳ್ಳದ್ದಾಗಿಯೂ ತಾವರೆದಂಟಿನಂತೆ ಕಾಲುಗಳುಳ್ಳದ್ದಾಗಿಯೂ ವೈಡೂರರತ್ನದಂತೆ ಉಗುರುಗಳುಳ್ಳದ್ದಾಗಿಯೂ ಇದ್ದಿತು. ಸೂಕ್ಷ್ಮವಾದ ಜಂಘಗಳುಳ್ಳದ್ದಾಗಿ ಇಂದ್ರಚಾಪದಂತೆ ಮನೋಹರವಾದ ಕಾಂತಿಯಿಂದ ಮೇಲಕ್ಕೆ ನೆಗಹಲ್ಪಟ್ಟ ಬಾಲವುಳ್ಳದ್ದಾಗಿ ಮೋಹಕವಾದ ರೂಪವುಳ್ಳ ಆ ಮೃಗವು ತನ್ನ ಶರೀರಕಾಂತಿಯಿಂದ ಆ ತಪೋವನ ವೆಲ್ಲವನ್ನೂ ಬೆಳಗಿಸುತ್ತಿತ್ತು. ಸೀತಾದೇವಿಯ ಮನಸ್ಸಿಗೆ ನೋಡಬೇಕೆಂಬ ಆಸೆಯನ್ನು ಹುಟ್ಟಿಸ ಬೇಕೆಂದು ಆ ಆಶ್ರಮದ ಬಾಗಿಲಿಗೆ ಹೋಯಿತು. ಒಳಗೆ ಹೋಗಿ ಅಲ್ಲಿದ್ದ ಎಳೆ ಹುಲ್ಲುಗಳನ್ನು ಮೇಯುತ್ತ ತನ್ನ ಶರೀರದಲ್ಲಿದ್ದ ಬಿಳಿ ಕುರುಹುಗಳಿಂದ ಮನೋಹರವಾಗಿ ತೋರಿತು.

ಮುಂದುವರಿಯುವುದು...

# ಬಿಪಿ ಕಂಟ್ರೋಲ್‌ನಲ್ಲಿಡುವುದು ಕಷ್ಟವೇನಲ್ಲ ಪಾನೀಯಗಳನ್ನು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ

ಅಧಿಕ ರಕ್ತದೊತ್ತಡ ಅಂದರೆ ಬಿಪಿ ಕಾಯಿಲೆ ಸೈಲೆಂಟ್ ಕಿಲ್ಲರ್ ಕಾಯಿಲೆಗಳಲ್ಲಿ ಇದು ಕೂಡ ಒಂದು. ಹಿಂದೆಲ್ಲಾ ಈ ಕಾಯಿಲೆ ಅನುವಂಶೀಯವಾಗಿ ಬರುವಂತಹ ಕಾಯಿಲೆ ಎಂದು ಜನರು ಅಂದುಕೊಳ್ಳುತ್ತಿದ್ದರು, ಆದರೆ ಈಗಿನ ಪರಿಸ್ಥಿತಿ ಹಿಂದಿನ ಹಾಗೆ ಇಲ್ಲ, ಒತ್ತಡದ ಜೀವನಶೈಲಿ ಆಹಾರಪದ್ಧತಿ, ಅನಾರೋಗ್ಯಕಾರಿ ಜೀವನಶೈಲಿ ಹಾಗೂ ದಿನನಿತ್ಯದ ಅದು–ಇದು ಟೆನ್ಶನ್ ಮಾಡಿಕೊಂಡು, ಇಲ್ಲಸಲ್ಲದ ಒತ್ತಡ ಹೆಚ್ಚಿಸಿಕೊಳ್ಳವ ಜನರಲ್ಲಿ ಜನರು ಮೊದಲು ಗುರಿಯಾಗುವುದು ಇದೇ ರಕ್ತದೊತ್ತಡ ಎನ್ನುವ ಕಾಯಿಲೆಗೆ. ಹಾಗಾಗಿ ವಯಸ್ಸು ಮೂವತ್ತು ದಾಟಿದ ಪ್ರತಿಯೊಬ್ಬರು ಕೂಡ ಈ ಕಾಯಿಲೆ ಬರದಂತೆ ಮುನ್ನೆಚ್ಚರಿಕೆವಹಿಸಬೇಕು.


### ಅಧಿಕ ರಕ್ತದೊತ್ತಡ ಅಪಾಯಕಾರಿ ಕಾಯಿಲೆ

**ಅಧಿಕ ರಕ್ತದೊತ್ತಡವು ಗಂಭೀರ ಸಮಸ್ಯೆಯಾಗಿದ್ದು, ಇದರಿಂದಾಗಿ ಹೃದ್ರೋಗ, ಮೂತ್ರಪಿಂಡ ವೈಫಲ್ಯ ಮತ್ತು ಇತರ ಹಲವು ಆರೋಗ್ಯ ಸಮಸ್ಯೆಗಳ ಅಪಾಯವು ಕೂಡ ಹೆಚ್ಚಿರುತ್ತದೆ. ಈ ಕಾಯಿಲೆಯಿಂದಾಗಿ ಮುಂದಿನ ದಿನಗಳಲ್ಲಿ ಕಣ್ಣುಗಳಿಗೂ ಕೂಡ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈಗಾಗಲೇ ಈ ಕಾಯಿಲೆಯಿಂದ ಬಳಲುತ್ತಿರುವವರು, ವೈದ್ಯರು ನೀಡುವ ಮಾತ್ರೆಗಳನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳುವುದರ ಜೊತೆಗೆ, ಆಹಾರ ಪದ್ಧತಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಕಾಯಿಲೆಯನ್ನು ನಿಯಂತ್ರಣದಲ್ಲಿಡಲು ನೆರವಿಗೆ ಬರುತ್ತದೆ.**

**ಇದ್ದಕ್ಕಿದ್ದಂತೆ ಬಿಪಿ ಹೆಚ್ಚಾಗಲು ಏನು ಕಾರಣ?:** ಪ್ರಮುಖವಾಗಿ ಹೇಳಬೇಕೆಂದರೆ ಅನಾರೋಗ್ಯಕಾರಿ ಆಹಾರಪದ್ಧತಿ ಹಾಗೂ ಜಡ ಜೀವನ ಶೈಲಿಯನ್ನು ಅನುಸರಿಸುವ ಜನರಲ್ಲಿ ದೇಹದ ತೂಕ ಕೂಡ ಹೆಚ್ಚಾಗು ವುದರ ಜೊತೆಗೆ ಅಂತಹ ಜನರಲ್ಲಿ ಬಹಳ ಬೇಗನೆ ರಕ್ತದೊತ್ತಡದಲ್ಲಿ ಏರುಪೇರು ಉಂಟಾಗುತ್ತದೆ. ಇದರ ಜೊತೆಗೆ ಧೂಮಪಾನ ಮದ್ಯಪಾನ, ಜಿಡ್ಡಿನಾಂಶ ಇರುವ ಆಹಾರ ಗಳ ಸೇವನೆ, ಎಣ್ಣೆಯಲ್ಲಿ ಕರಿದಿರುವ ಆಹಾರಗಳ ಸೇವನೆ, ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆ, ಅನುವಂಶೀಯ ಕಾರಣಗಳು ಹೀಗೆ ಹತ್ತು ಹಲವಾರು ಕಾರಣಗಳಿಂದಾಗಿಯೂ ಕೂಡ ರಕ್ತದೊತ್ತಡ ಹೆಚ್ಚಾಗ ಬಹುದು.



**ಶುಂಠಿ ಚಹಾ:** ಶುಂಠಿ ತನ್ನಲ್ಲಿ ವಿಟಮಿನ್ ಸಿ ಪೊಟ್ಯಾಶಿಯಂ ಸಹಿತ ಹಲವಾರು ರೀತಿಯ ಔಷಧೀಯ ಗುಣಗಳನ್ನು ತನ್ನಲ್ಲಿ ಒಳಗೊಂಡಿರುವ ಕಾರಣ, ಇದನ್ನು ದೈನಂದಿನ ಆಹಾರಪದ್ಧತಿಯಲ್ಲ ಬಳಸಿಕೊಳ್ಳುವುದರಿಂದ ರಕ್ತ ಸಂಚಾರ ಹೃದಯದ ಭಾಗಕ್ಕೆ ಸರಿಯಾಗಿ ನಡೆದು ರಕ್ತದೊತ್ತಡದ ಕಾಯಿಲೆಯನ್ನು ನಿಯಂತ್ರಣಕ್ಕೆ ತರುವಲ್ಲಿ ನೆರವಿಗೆ ಬರುತ್ತದೆ. ಅದರಲ್ಲೂ ಅಧಿಕ ರಕ್ತದೊತ್ತಡ ರೋಗಿಗಳಿಗೆ ಶುಂಠಿ ಚಹಾ ಅತ್ಯಂತ ಪರಿಣಾಮಕಾರಿ. ಇದರಿಂದ ಅಧಿಕ ರಕ್ತದೊತ್ತಡದ ಸಮಸ್ಯೆ ನಿಯಂತ್ರಣಕ್ಕೆ ಬರುವುದು ಮಾತ್ರವಲ್ಲದೆ, ಹೃದಯದ ಆರೋಗ್ಯವು ಕೂಡ ವೃದ್ಧಿಯಾಗು ವುದು. ಶುಂಠಿ ಚಹಾವನ್ನು ಮನೆಯಲ್ಲಿಯೇ ತಯಾರಿಸುವುದು ಕೂಡ ಸುಲಭ. ಒಂದು ಸಣ್ಣ ಪಾತ್ರೆಯಲ್ಲಿ ಒಂದು ಲೋಟದಷ್ಟು ನೀರನ್ನು ಬಿಸಿ ಮಾಡಿ ಶುಂಠಿ ಚೂರುಗಳನ್ನು ಸೇರಿಸಿ. ಅದು ಕುದಿಯಲು ಪ್ರಾರಂಭಿಸಿದ ಬಳಿಕ ಈಗ ಸ್ಟವ್ ಆಫ್ ಮಾಡಿ, ಈ ಪಾನೀಯವನ್ನು ಇನ್ನೊಂದು ಪಾತ್ರೆಗೆ ಸೋಸಿ. ಇದಕ್ಕೆ ಬೇಕಿದ್ದರೆ ಒಂದು ಚಮಚ ನಿಂಬೆ ರಸ ಅಥವಾ ಜೇನು ತುಪ್ಪವನ್ನು ಹಾಕಿಸೇರಿಸಬಹುದು. ಈ ಚಹಾ ಅಧಿಕ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.



**ದಾಸವಾಳದ ಚಹಾ:** ದಾಸವಾಳದ ಚಹಾವು ರಕ್ತದೊತ್ತಡವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಈ ಹೂವಿನ ಒಣಗಿದ ದಳಗಳಿಂದ ತಯಾರಿಸಿದ ದಾಸವಾಳದ ಚಹಾವು ರಕ್ತದೊತ್ತಡವನ್ನು ಕಡಿಮೆ ಮಾಡುವ ಪರಿಣಾಮಗಳನ್ನು ಹೊಂದಿದೆ ಎಂದು ತೋರಿಸಲಾಗಿದೆ. ಇದು ಆಂಥೋಸಯಾನಿನ್‌ಗಳು ಮತ್ತು ಫ್ಲೇವನಾಯ್ಡ್‌ಗಳನ್ನು ಒಳಗೊಂಡಂತೆ ಜೈವಿಕವಾಗಿ ಸಕ್ರಿಯವಾಗಿರುವ ಸಂಯುಕ್ತಗಳನ್ನು ಹೊಂದಿದ್ದು, ಇದು ರಕ್ತನಾಳಗಳನ್ನು ವಿಶ್ರಾಂತಿ ಮಾಡಲು ಮತ್ತು ಅಧಿಕ ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.



ದಾಸವಾಳದ ಚಹಾದ ನಿಯಮಿತ ಸೇವನೆಯು ಸಿಸ್ಟೊಲಿಕ್ ಮತ್ತು ಡಯಾಸ್ಟೊಲಿಕ್ ರಕ್ತದೊತ್ತಡ ಎರಡನ್ನೂ ಕಡಿಮೆ ಮಾಡುತ್ತದೆ ಎಂದು ಅಧ್ಯಯನಗಳು ತೋರಿಸುತ್ತವೆ. ಈ ಚಹಾದ ನಿಯಮಿತ ಸೇವನೆಯು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

**ಬೀಟ್ರೂಟ್ ಜ್ಯೂಸ್:** ಬೀಟ್ರೂಟ್ ರಸವನ್ನು ಕುಡಿಯುವ ಮೂಲಕ ಅಧಿಕ ರಕ್ತದೊತ್ತಡವನ್ನು ಸಹ ನಿರ್ವಹಿಸಬಹುದು. ಬೀಟ್ರೂಟ್ ರಸವು ನೈಟ್ರೇಟ್‌ಗಳ ನೈಸರ್ಗಿಕ ಮೂಲವಾಗಿದ್ದು, ಇದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ದೇಹದಲ್ಲಿ ನೈಟ್ರೇಟ್‌ಗಳು ನೈಟ್ರಿಕ್ ಆಕ್ಸೈಡ್ ಆಗಿ ಪರಿವರ್ತನೆಗೊಂಡು ರಕ್ತ ಪರಿಚಲನೆ ಸುಧಾರಿಸುತ್ತದೆ. ಬೀಟ್ರೂಟ್ ರಸವನ್ನು ನಿಯಮಿತವಾಗಿ ಕುಡಿಯುವುದರಿಂದ ರಕ್ತದೊತ್ತಡವನ್ನು ಸ್ವಲ್ಪ ಕಡಿಮೆ ಮಾಡಬಹುದು ಎಂದು ಸಂಶೋಧನೆ ತೋರಿಸುತ್ತದೆ. ಬೀಟ್ರೂಟ್ ರಸವು ಉತ್ಕರ್ಷಣ ನಿರೋಧಕಗಳು ಮತ್ತು ಬೆಟಾಲೈನ್ ಗಳಂತಹ ಪ್ರಯೋಜನಕಾರಿ ಸಂಯುಕ್ತಗಳಿಂದ ಸಮೃದ್ಧವಾಗಿದೆ, ಇದು ಹೃದಯಕ್ಕೂ ಪ್ರಯೋಜನಕಾರಿಯಾಗಿದೆ.

ಪ್ರಯೋಜನಗಳನ್ನು ಪಡೆಯಲು, ನಿಮ್ಮ ದೈನಂದಿನ ದಿನಚರಿಯಲ್ಲಿ ಒಂದು ಲೋಟ ತಾಜಾ ಬೀಟ್ರೂಟ್ ರಸವನ್ನು ಸೇರಿಸಿಕೊಳ್ಳಿ.

**ಹಸಿರು ಸ್ಮೂಥಿಗಳು:** ಪಾಲಕ್, ಕೇಲ್ ಅಥವಾ ಸ್ವಿಸ್ ಚಾರ್ಡ್ ನಂತಹ ಎಲೆಗಳ ಹಸಿರು ತರಕಾರಿಗಳಿಂದ ತುಂಬಿದ ಹಸಿರು ಸ್ಮೂಥಿಗಳು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಅವೆಲ್ಲವೂ ಪೊಟ್ಯಾಸಿಯಮ್‌ನ ಅತ್ಯುತ್ತಮ ಮೂಲಗಳಾಗಿವೆ. ಪೊಟ್ಯಾಸಿಯಮ್ ರಕ್ತದೊತ್ತಡವನ್ನು ಕಡಿಮೆ ಮಾಡುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದೆ.



ಪೊಟ್ಯಾಸಿಯಮ್ ದೇಹದಲ್ಲಿ ಸೋಡಿಯಂನ ಪರಿಣಾಮಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ, ಮೂತ್ರದ ಮೂಲಕ ಹೆಚ್ಚುವರಿ ಸೋಡಿಯಂ ವಿಸರ್ಜನೆಯನ್ನು ಉತ್ತೇಜಿಸುತ್ತದೆ. ನಿಮ್ಮ ದೈನಂದಿನ ದಿನಚರಿಯಲ್ಲಿ ಹಸಿರು ಸ್ಮೂಥಿಗಳನ್ನು ಸೇರಿಸಿಕೊಳ್ಳುವುದರಿಂದ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

**ಮೆಂತ್ಯ ನೀರು:** ಮೆಂತ್ಯವನ್ನು ಅಡುಗೆಯಲ್ಲಿ ಮಸಾಲೆ ಪದಾರ್ಥವಾಗಿ ಬಳಸಲಾಗುತ್ತದೆ. ಮೆಂತ್ಯ ನೀರಿನಲ್ಲಿ ನಾರಿನಂಶ ಹೆಚ್ಚಿದ್ದು, ಇದು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮೆಂತ್ಯ ನೀರನ್ನು ಕುಡಿಯುವುದರಿಂದ ರಕ್ತದೊತ್ತಡವನ್ನು ನಿಯಂತ್ರಿಸಬಹುದು.

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿರಂತರವಾಗಿ ಸಭೆಗಳನ್ನು ನಡೆಸಿ, ಪರಿಶೀಲನೆ ನಡೆಸಬೇಕು:ಡಿಸಿ

# ಎಸ್‌ಸಿಪಿ-ಟಿಎಸ್‌ಪಿ ಕಾಯ್ದೆ ಗಂಭೀರತೆ ಅರಿತುಕೊಂಡು ಕಾರ್ಯ ನಿರ್ವಹಿಸಿ

• ಉದಯವಾಹಿನಿ ವಿಜಯಪುರ

ಎಸ್‌ಸಿಪಿ-ಟಿಎಸ್‌ಪಿ ಇದೊಂದು ಕಾಯ್ದೆಯಾಗಿದೆ. ಈ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸೌಲಭ್ಯ ದೊರಕಿಸಲು ಅಧಿಕಾರಿಗಳು ಈ ಕಾಯ್ದೆಯ ಗಂಭೀರತೆಯನ್ನು ಅರಿತುಕೊಂಡು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ 2025-26ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯ ಕೇಂದ್ರ, ರಾಜ್ಯ, ಹಾಗೂ ಜಿಲ್ಲಾ ವಲಯ ಯೋಜನೆ ಕಾರ್ಯಕ್ರಮಗಳ ಇಲಾಖಾವಾರು ಸೆಪ್ಟಂಬರ್ 2025ರ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಸ್‌ಸಿಪಿ-ಟಿಎಸ್‌ಪಿ ಕಾಯ್ದೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಫಲಾನುಭವಿಗಳಿಗೆ ಸೌಲಭ್ಯ ದೊರಕಿಸಬೇಕು. ಸಂಬಂಧಿಸಿದ ಇಲಾಖೆಗಳು ಈ ಎಸ್‌ಸಿಪಿ-ಟಿಎಸ್‌ಪಿ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಳಿಸದೇ ಇದ್ದ ಸಂದರ್ಭದಲ್ಲಿ ಶೋಕಾಸ್ ನೋಟಿಸ್ ನೀಡಲು ಹಾಗೂ ನಿಗದಿತ ಅವಧಿಯಲ್ಲಿ ಎಸ್‌ಸಿಪಿ ಟಿಎಸ್‌ಪಿ ಅನುದಾನ ವೆಚ್ಚ ಮಾಡದೇ ಬಾಕಿ ಉಳಿಸಿಕೊಂಡಲ್ಲಿ ಕ್ರಮ ಜರುಗಿಸಲು ಅವಕಾಶವಿರುವುದರಿಂದ ಇದಕ್ಕೆ ಆಸ್ಪದ ನೀಡದೇ, ಕಾಯ್ದೆಯ ಗಂಭೀರತೆಯನ್ನು ಅರಿತುಕೊಂಡು, ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿ,


ಉದಯವಾಹಿನಿ ಚಿತ್ರ

**ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ**

ಸಮರ್ಪಕವಾಗಿ ಅನುಷ್ಠಾನಗೊಳಿಸಿ ಅರ್ಹರಿಗೆ ಸೌಲಭ್ಯ ದೊರಕಿಸಲು ಅನುದಾನ ವೆಚ್ಚ ಮಾಡುವಂತೆ ಅವರು ಸೂಚನೆ ನೀಡಿದರು.

ಅಧಿಕಾರಿಗಳು ಎಸ್‌ಸಿಪಿ-ಟಿಎಸ್‌ಪಿ ಆರ್ಥಿಕ ಹಾಗೂ ಭೌತಿಕ ಸಾಧನೆಯ ನಿಖರವಾಗಿ ಮಾಹಿತಿ ಸಲ್ಲಿಸಬೇಕು. ಇಲಾಖಾವಾರು ಯೋಜನೆಯ ಮಾಹಿತಿ ಒದಗಿಸಬೇಕು.ಕೇಂದ್ರ, ರಾಜ್ಯ, ಜಿಲ್ಲಾ ಪಂಚಾಯತ್ ಸೇರಿದಂತೆ ಆಯಾ ವಲಯವಾರು ಪ್ರತ್ಯೇಕವಾಗಿ ಮಾಹಿತಿ ಒದಗಿಸಬೇಕು. ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಡಿ ಸೌಲಭ್ಯ ಒದಗಿಸಿರುವ ಕುರಿತು ನಿಖರವಾಗಿ ಮಾಹಿತಿ ಹಾಗೂ ಬಾಕಿ ಉಳಿಯಲು ಇರುವ ಕಾರಣವನ್ನು ನಿಖರವಾಗಿ ಒದಗಿಸಬೇಕು.

ಅನುದಾನ ವೆಚ್ಚ ಮಾಡದೆ ಬಾಕಿ ಉಳಿಸಿಕೊಂಡಿರುವ ಕುರಿತು ಸಬೂಬೂ ನೀಡದೆ, ಬಿಡುಗಡೆಯಾದ ಅನುದಾನ, ವೆಚ್ಚ ಮಾಡಿದ ಅನುದಾನಕ್ಕೆ ಪೂರಕ ದಾಖಲೆಗಳನ್ನು ಸಲ್ಲಿಸುವಂತೆ ಅವರು ಸೂಚನೆ ನೀಡಿದರು.

ಭೌತಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಫಲಾನುಭವಿ ಆಯ್ಕೆ, ಸೌಲಭ್ಯ ದೊರಕಿಸುವುದು ಸೇರಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅವರು ಸೂಚನೆ ನೀಡಿದರು.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ರೇಷ್ಮೆ ಇಲಾಖೆ, ಮೀನುಗಾರಿಕೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರೂದ್ದಿನ್ ಸೌದಾಗರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಹೇಶ ಪೋತದಾರ, ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಪಾಟೀಲ, ಸಿದ್ದಪ್ಪ ಬಿಂಜಗೇರಿ ಇದ್ದರು.

**ಶೇಕಡಾವಾರು ಪ್ರಗತಿ ಸಾಧಿಸುವಂತೆ ಸೂಚನೆ**

ಈ ಯೋಜನೆಯ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆಯಾಗುವ ಅನುದಾನಕ್ಕೆ ನಿಗದಿತ ಕಾಲಾವಧಿಯಲ್ಲಿ ಕ್ರೀಯಾಯೋಜನೆ ಸಿದ್ಧಪಡಿಸಿಕೊಂಡು ಸಂಬಂಧಿಸಿದ ಇಲಾಖಾ ಮುಖ್ಯಸ್ಥರ ಅನುಮೋದನೆ ಪಡೆದುಕೊಂಡು ಫಲಾನುಭವಿಗಳ ಆಯ್ಕೆ ಮಾಡಿ, ಫಲಾನುಭವಿಗಳಿಗೆ ಲಾಭ ದೊರಕಿಸುವ ಮೂಲಕ ಶೇಕಡಾವಾರು ಪ್ರಗತಿ ಸಾಧಿಸುವಂತೆ ಅವರು ಸೂಚನೆ ನೀಡಿದರು.

**ಅನುದಾನ ಲ್ಯಾಪ್‌ವಾಗದಂತೆ ಎಚ್ಚರಿಕೆ ವಹಿಸಿ**

ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿರಂತರವಾಗಿ ಸಭೆಗಳನ್ನು ನಡೆಸಿ, ಪರಿಶೀಲನೆ ನಡೆಸಬೇಕು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕಾಲಕಾಲಕ್ಕೆ, ಅತ್ಯಂತ ಪ್ರಮುಖ ಇಲಾಖೆಗಳಾದ ಶಿಕ್ಷಣ ಇಲಾಖೆ, ಕೃಷಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಬೇಕು. ಎಸ್‌ಸಿಪಿ-ಟಿಎಸ್‌ಪಿ ಯೋಜನೆಗಳು ಲಾಭ ಫಲಾನುಭವಿಗಳಿಗೆ ತಲುಪುತ್ತಿರುವ ಕುರಿತು ಪರಿಶೀಲನೆ ನಡೆಸಬೇಕ, ಈ ಯೋಜನೆಯಡಿ ಬಿಡುಗಡೆಯಾದ ಅನುದಾನ ಲ್ಯಾಪ್‌ವಾಗದಂತೆ ಎಚ್ಚರಿಕೆ ವಹಿಸುವಂತೆ ಅವರು ಸೂಚನೆ ನೀಡಿದರು.

## ಅನುದಾನ ಕೊರತೆ: ಕುಸ್ತಿ ಇಲ್ಲ, ಕಿತ್ತೂರು ಉತ್ಸವದ ಜಟ್ಟಿಪ್ರೇಮಿಗಳಿಗೆ ನಿರಾಸೆ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಇಲ್ಲಿ ನಡೆಯುವ ಕಿತ್ತೂರು ಉತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಕುಸ್ತಿಯೂ ಒಂದು. ಮೂರು ದಿನಗಳ ಉತ್ಸವದ ಕೊನೇ ದಿನ (ಅಕ್ಟೋಬರ್ 25) ನಡೆಯುವ ಜಟ್ಟಿಗಳ ಕಾಳಗ ವೀಕ್ಷಣೆಗೆ ಸಾವಿರಾರು ಜನ ಸೇರುತ್ತಾರೆ. ಆದರೆ, ಈ ಬಾರಿ ಅಂತರರಾಷ್ಟ್ರೀಯ ಕುಸ್ತಿ ಪಂದ್ಯಾವಳಿ ಆಯೋಜಿಸದಿರುವುದು ಜಟ್ಟಿ ಪ್ರೇಮಿಗಳಲ್ಲಿ ನಿರಾಸೆ ಮೂಡಿಸಿದೆ. 2023ರಲ್ಲಿ ಉತ್ಸವದ ಪ್ರಯುಕ್ತ ನಡೆದ ಅಂತರರಾಷ್ಟ್ರೀಯ ಕುಸ್ತಿ ಪಂದ್ಯಾವಳಿಯಲ್ಲಿ ಇರಾನ್ ದೇಶದ ರಿಜಾ, ಅಹಮದ್ ಮಿರ್ಜಾ ಪಾಲ್ಗೊಂಡಿದ್ದರು. 2024ರ ಟೂರ್ನಿಯಲ್ಲಿ ಇರಾನ್ ದೇಶದ ಇರ್ಫಾನ್ ಹುಸೇನ್ ಜಾದ್ ಶಾ ಅಲಿ ಭಾಗವಹಿಸಿದ್ದರು. ತಮ್ಮೂರಿನಲ್ಲೇ ಅಂತರರಾಷ್ಟ್ರೀಯ ಕುಸ್ತಿ ಪಂದ್ಯಗಳನ್ನು ನೋಡಿ, ಗ್ರಾಮಸ್ಥರು ಸಂಭ್ರಮಿಸಿದ್ದರು.

ಆದರೆ, ಈ ಬಾರಿ ಅನುದಾನ ಕೊರತೆ ಕಾರಣಕ್ಕೆ ಅಂತರರಾಷ್ಟ್ರೀಯ ಕುಸ್ತಿ ಟೂರ್ನಿ ಆಯೋಜನೆಗೆ ಹಿನ್ನಡೆ ಉಂಟಾಗಿದೆ. ಲಭ್ಯವಿರುವ ಅನುದಾನದಲ್ಲೇ ಎಲ್ಲವನ್ನೂ ನಿರ್ವಹಿಸಬೇಕಾದ ಕಾರಣ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳು, ಅಂತರರಾಷ್ಟ್ರೀಯ ಕುಸ್ತಿಪಟುಗಳನ್ನು ಪಂದ್ಯಕ್ಕೆ ಆಹ್ವಾನಿಸಲಾಗದು' ಎಂದಿದ್ದಾರೆ.

ಈ ಬಾರಿಯ ರಾಷ್ಟ್ರಮಟ್ಟದ ಟೂರ್ನಿಯಲ್ಲಿ ಪುರುಷರ ವಿಭಾಗದಲ್ಲಿ 50 ಮತ್ತು ಮಹಿಳೆಯರ ವಿಭಾಗದಲ್ಲಿ ಏಳು ಜೋಡಿ ಸೆಣಸಲಿವೆ. ಕರ್ನಾಟಕದ ಜೊತೆಗೆ, ಪಂಜಾಬ್, ಹರಿಯಾಣ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದ ಪೈಲ್ವಾನರು ಭಾಗವಹಿಸುವರು.

**15 ಲಕ್ಷ ಅನುದಾನ:** ಕಳೆದ ಬಾರಿಯ ಉತ್ಸವದಲ್ಲಿ ವಾಲಿಬಾಲ್, ಕಬಡ್ಡಿ, ಕುಸ್ತಿ ಮತ್ತಿತರ ಕ್ರೀಡೆಗಳ ಆಯೋಜನೆಗೆ ರಾಜ್ಯ ಸರ್ಕಾರವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ರೂ.22 ಲಕ್ಷ ಅನುದಾನ ಕೊಟ್ಟಿತ್ತು. ಈ ಬಾರಿ ರೂ.15 ಲಕ್ಷ ಮಾತ್ರ ನೀಡಿದೆ.

ವಿದೇಶದ ಒಂದು ಜೋಡಿ ಪೈಲ್ವಾನರನ್ನು ಆಹ್ವಾನಿಸಲು ರೂ.3 ಲಕ್ಷ ಖರ್ಚಾಗುತ್ತದೆ. ಆದರೆ, ಈಗ ಲಭಿಸಿದ ಅನುದಾನದಲ್ಲಿ ಕುಸ್ತಿ, ವಾಲಿಬಾಲ್, ಕಬಡ್ಡಿ, ಹಗ್ಗಜಗ್ಗಾಟ ಸ್ಪರ್ಧೆ, ಜಲಸಾಹಸ ಕ್ರೀಡೆಗಳ ಆಯೋಜನೆ ಜತೆಗೆ, ವಿದೇಶದ ಪೈಲ್ವಾನರನ್ನು ಕರೆಯಿಸಲಾಗದು' ಎಂದು ಅಧಿಕಾರಿಗಳು ತಿಳಿಸಿದರು.


ಉದಯವಾಹಿನಿ ಚಿತ್ರ

> ಸರ್ಕಾರ ನೀಡಿದ ಅನುದಾನದಲ್ಲೇ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ ಯಶಸ್ವಿಯಾಗಿ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದೇವೆ.
> -ಬಿ. ಶ್ರೀನಿವಾಸ ಉಪನಿರ್ದೇಶಕ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಳಗಾವಿ

## ಪುರಸಭೆಯಿಂದ ಕಲುಷಿತ ನೀರು ಪೂರೈಕೆ

• ಉದಯವಾಹಿನಿ ಹೊನ್ನಾಳಿ

ಪುರಸಭೆ ವತಿಯಿಂದ ಪೂರೈಕೆಯಾದ ಕುಡಿಯುವ ನೀರು ಕಸ, ಕಡ್ಡಿ, ಮಣ್ಣು ಮಿಶ್ರಿತವಾಗಿದ್ದು, ಕುಡಿಯಲು ಯೋಗ್ಯವಾಗಿರಲಿಲ್ಲ ಎಂದು ಪಟ್ಟಣದ ನಿವಾಸಿಗಳು ದೂರಿದ್ದಾರೆ. ಮಳೆ ಬಂದಾಗ ನದಿಯ ನೀರು ಕೆಸರು ಮಿಶ್ರಿತವಾಗಿ ಬರುವುದು ಸರ್ವೇ ಸಾಮಾನ್ಯ. ಇಂತಹ ನೀರನ್ನು ಪೂರೈಸುವ ಮುನ್ನ ಹಿಂದಿನ ದಿನ ನೀರನ್ನು ಜಾಕ್‌ವೆಲ್ ಮೂಲಕ ಎತ್ತಿ, ಫಿಲ್ಟರ್ ಮಾಡಿ, ಅಗತ್ಯ ಕಂಡುಬಂದರೆ ಅದಕ್ಕೆ ಆಲಂ ಪೌಡರ್ ಬೆರೆಸಿ ಪೂರೈಕೆ ಮಾಡಲಾಗುತ್ತಿತ್ತು. ಆದರೆ, ಮಳೆ ಬಂದಿದೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ನದಿಯಿಂದ ಯಾವುದೇ ಫಿಲ್ಟರ್ ಮಾಡದೇ ನೇರವಾಗಿ ಜನರಿಗೆ ನೀರು ಪೂರೈಸುತ್ತಿರುವುದು ಎಷ್ಟು ಸರಿ ಎಂದು ಅರುಣ್ ಕುಮಾರ್ ಪ್ರಶ್ನಿಸಿದ್ದಾರೆ. ಪಟ್ಟಣದಲ್ಲಿ ಶೇ 80 ರಷ್ಟು ಬಡ ಹಾಗೂ ಮಧ್ಯಮ ವರ್ಗದವರು ವಾಸಿಸುತ್ತಿದ್ದಾರೆ. ಈ ಮನೆಗಳಲ್ಲಿ ನದಿಯಿಂದ ಬರುವ ನೀರನ್ನು ಶುದ್ಧ ಮಾಡಿ ಕುಡಿಯುವ ವ್ಯವಸ್ಥೆ ಇಲ್ಲ. ಪುರಸಭೆಯಿಂದ ಬರುವ ನೀರನ್ನೇ ನೇರವಾಗಿ ಕುಡಿಯಲು ಬಳಸುತ್ತಾರೆ.


ಉದಯವಾಹಿನಿ ಚಿತ್ರ

ಹೀಗಿರುವಾಗ ನೀರನ್ನು ಶುದ್ಧ ಮಾಡಿ ಪೂರೈಕೆ ಮಾಡದೆ ಇದ್ದರೆ ಜನ ಹೇಗೆ ಈ ನೀರನ್ನು ಕುಡಿಯಬೇಕು ಎಂದು ದುರ್ಗಿಗುಡಿ ನಿವಾಸಿ ಚನ್ನವೀರಪ್ಪ ಆಕ್ರೋಶ ಹೊರಹಾಕಿದ್ದಾರೆ. ಇಂತಹ ನೀರು ಕುಡಿಯುವುದಿರಲಿ, ಬಟ್ಟೆ ತೊಳೆಯುವುದಕ್ಕೂ ಯೋಗ್ಯವಾಗಿಲ್ಲ. ನೀರಿನ ಪೂರೈಕೆ ಮಾಡುವಾಗಲಾದರೂ ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಬೇಕಿತ್ತು. ಆದರೆ ಇಂಥಹ ನಿರ್ಲಕ್ಷ್ಯ ಸರಿಯಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕುಡಿಯುವ ನೀರು ಸರಬರಾಜು ಮಾಡುವವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕು ಎಂದು ಗೃಹಿಣಿ ಹೇಮಾ ಒತ್ತಾಯಿಸಿದರು.

## ಗ್ರಾಮಾಂತರ ಪ್ರದೇಶಗಳ ಬಹುಪಾಲು ರಸ್ತೆ ಗುಂಡಿಮಯ

• ಉದಯವಾಹಿನಿ ತರೀಕೆರೆ

ತಾಲ್ಲೂಕಿನಲ್ಲಿ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಪಟ್ಟಣ ಸೇರಿದಂತೆ ಗ್ರಾಮಾಂತರ ಪ್ರದೇಶಗಳ ಬಹುಪಾಲು ರಸ್ತೆಗಳಲ್ಲಿ ಗುಂಡಿಗಳು ಬಿದ್ದಿವೆ. ಈ ಗುಂಡಿಗಳನ್ನು ಮುಚ್ಚಲು ಮಳೆ ಬಿಡುವು ನೀಡುತ್ತಿಲ್ಲ. ಈ ಗುಂಡಿಗಳಿಂದ ವಾಹನ ಸಂಚಾರಕ್ಕೆ ಸಾಕಷ್ಟು ತೊಂದರೆಯ ಜೊತೆಗೆ ಅಲ್ಲಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಶಾಲಾ ಮಕ್ಕಳು, ಮಹಿಳೆಯರು ಮತ್ತು ವೃದ್ಧರು ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಅವರಿಗೆ ರಾಡಿ ನೀರಿನ ಸಿಂಚನವಾಗುತ್ತಿದೆ.

ಇನ್ನು ಪಟ್ಟಣದಲ್ಲಿ ಬಿ.ಎಚ್. ರಸ್ತೆ ವಿಸ್ತರಣೆ ಕಾಮಗಾರಿ ನಡೆಯುತ್ತಿದ್ದು, ಬಾಕ್ಸ್ ಚರಂಡಿ ಮತ್ತು ಸೇತುವೆಗಳು ಭಾಗಶಃ ಮುಕ್ತಾಯದ ಹಂತದಲ್ಲಿವೆ. ಇದರಿಂದ ರಸ್ತೆಯಲ್ಲಿ ಉಬ್ಬು-ತಗ್ಗುಗಳು ವಿಪರೀತವಾಗಿದ್ದು, ಮಳೆ ಬಂದಾಗ ಅಲ್ಲಲ್ಲಿ ನೀರು ತುಂಬಿಕೊಂಡು ವಾಹನ ಸವಾರರಿಗೆ ಗುಂಡಿಗಳು ಇರುವುದು ಗೊತ್ತಾಗದೆ ಅಪಘಾತಗಳು ಸಂಭವಿಸಿವೆ. ಪುರಸಭೆ ವ್ಯಾಪ್ತಿಯ ಕೋಟೆ ಕ್ಯಾಂಪ್, ಹಳಿಯೂರು, ಉಪ್ಪಾರ ಬಸವನಹಳ್ಳಿ, ಪಾಳೆಗಾರರ ಕ್ಯಾಂಪ್, ಕೋಡಿಕ್ಯಾಂಪ್, ಗಾಳಿಹಳ್ಳಿ, ಮಾಚೇನಹಳ್ಳಿ ಭಾಗಗಳಲ್ಲಿ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿವೆ.


ಉದಯವಾಹಿನಿ ಚಿತ್ರ

ಲಿಂಗದಹಳ್ಳಿ ಹೋಬಳಿಯಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣಗಳಾದ ಕಲ್ಲತ್ತಿಗಿರಿ, ಕೆಮ್ಮಣ್ಣುಗುಂಡಿ, ಹೆಬ್ಬೆಫಾಲ್ಸ್‌ಗಳಿಗೆ ದಿನದಿಂದ ದಿನಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೆ ಇದೆ. ಆದರೆ ಇಲ್ಲಿಗೆ ತಲುಪುವ ರಸ್ತೆಗಳು ಅಲ್ಲಲ್ಲಿ ಹಾಳಾಗಿದ್ದು ಪ್ರವಾಸಿಗರ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಕಾಫಿ ಎಸ್ಟೇಟ್ ಭಾಗದಲ್ಲಿರುವ ದೂಪದಕಾನ್, ಕುರಕಲಮಟ್ಟಿ ಎಸ್ಟೇಟ್, ತಣಿಗೇ ಬೈಲು, ಜೈಪುರ, ತಿಗಡ, ನಂದಿಬಟ್ಟಲು ಕಾಲೊನಿ ಈ ಭಾಗದಲ್ಲಿ ರಸ್ತೆಗಳು ಅತೀ ಹೆಚ್ಚು ಹಾಳಾಗಿವೆ. ಅಮೃತಾ ಹೋಬಳಿಯ ಪಿರುಮೇನಹಳ್ಳಿ, ಎ. ರಾಮನಹಳ್ಳಿ, ಬಿ. ರಾಮನಹಳ್ಳಿ, ಲಕ್ಕೇನಹಳ್ಳಿ ಯರೇಹಳ್ಳಿ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಾರ್ವಜನಿಕರಿಗೆ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ.

## ಆಮೆಗತಿಯಲ್ಲಿ ಜೆಜೆಎಂ ಕಾಮಗಾರಿ

• ಉದಯವಾಹಿನಿ ಅಂಕೋಲಾ

ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆ ಜಲ ಜೀವನ್ ಮಿಷನ್ ಪ್ರಗತಿಯು ಸರ್ಕಾರಿ ಇಲಾಖೆಗಳ ತಕರಾರು ಹಾಗೂ ಅನುದಾನದ ಕೊರತೆಯಿಂದ ತಾಲ್ಲೂಕಿನಲ್ಲಿ ಕುಂಠಿತವಾಗಿದೆ ಎಂಬ ದೂರು ಹೆಚ್ಚಿದೆ. ತಾಲ್ಲೂಕಿನಲ್ಲಿ ಯೋಜನೆಯಡಿ 73 ಕಾಮಗಾರಿಗಳಿಗೆ ಅನುಮೋದನೆ ಸಿಕ್ಕಿದೆ. ಅವುಗಳ ಪೈಕಿ 45 ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನೂ 28 ಕಾಮಗಾರಿಗಳು ನನೆಗುದಿಗೆ ಬಿದ್ದಿವೆ.

ತಾಂತ್ರಿಕ ಕಾರಣ, ವಿದ್ಯುತ್ ಸರಬರಾಜು ಆಗದಿರುವುದು, ಪೈಪ್‌ಲೈನ್ ಅಳವಡಿಕೆಗೆ ಹೆದ್ದಾರಿ ಪ್ರಾಧಿಕಾರ, ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಂದ ಅನುಮತಿ ಸಿಗದೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು. 2021-22 ನೇ ಸಾಲಿನಿಂದ ಹಲವು ಬಾರಿ ಟೆಂಡರ್ ಆಹ್ವಾನಿಸಿದರೂ ಗುತ್ತಿಗೆದಾರರು ಕಾಮಗಾರಿಗಳನ್ನು ನಿರ್ವಹಿಸಲು ಹಿಂದೇಟು ಹಾಕಿದ ಪರಿಣಾಮ ಕೆಲವೆಡೆ ಕಾಮಗಾರಿ ಆರಂಭಿಸಲಾಗಿಲ್ಲ ಎಂದೂ ಹೇಳಿದರು.

ಕೆಲ ಗ್ರಾಮಗಳಲ್ಲಿ ಪೈಪ್‌ಲೈನ್‌ನಲ್ಲಿ ಸಂಪರ್ಕ ಹಾಗೂ ಬಾವಿ, ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿವೆ. ಆದರೆ, ನೀರು ಎತ್ತಿ, ಸಂಗ್ರಹಿಸಿ ಪೂರೈಸಲು ವಿದ್ಯುತ್ ಸಂಪರ್ಕವನ್ನೇ ನೀಡಿಲ್ಲ. ಸುಂಕಸಾಳ, ಅಚವೆ, ಬ್ರಹ್ಮರು, ಗುಡಿ ನೆವಳಸೆ, ಬಿದರಳ್ಳಿ, ಡೋಂಗ್ರಿ, ಅಗಸೂರು ಗ್ರಾಮಗಳಲ್ಲಿ ಕಾಮಗಾರಿ ಪೂರ್ಣಗೊಂಡು ವರ್ಷಗಳೇ ಕಳೆದರೂ ನೀರು ಸರಬರಾಜು ಮಾಡುವ ಕೆಲಸ ಆರಂಭವಾಗಿಲ್ಲ ಎಂದು ಗುತ್ತಿಗೆದಾರರೊಬ್ಬರು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತಕರಾರು ಇದ್ದ ಕಾರಣದಿಂದ ವಂದಿಗೆ, ಬೆಳಸೆ, ಶೆಟಗೇರಿ, ವಾಸರ ಕುದ್ರಿಗೆ, ಹೊನ್ನೇಬೈಲ್ ಮತ್ತು ಬೆಳಂಬಾರ ಸೇರಿದಂತೆ 6 ಗ್ರಾಮ ಪಂಚಾಯಿತಿಗಳಿಗೆ ಹೊನ್ನಳ್ಳಿಯ ಗಂಗಾವಳಿ ನದಿಯಿಂದ ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡುವ ವಾಸರ ಕುದ್ರಿಗೆ ಬಹುಗ್ರಾಮ ಕುಡಿಯುವ ನೀರು ಸ್ಥಗಿತಗೊಂಡಿದೆ ಎಂದೂ ಹೇಳಿದರು.


ಉದಯವಾಹಿನಿ ಚಿತ್ರ

**ಶುದ್ದೀಕರಣ ಘಟಕಕ್ಕೆ ವಿರೋಧ**

'ಹಿಲ್ಲೂರು ಡೋಂಗ್ರಿ, ಮತ್ತು ಅಚವೆ ಪಂಚಾಯಿತಿ ವ್ಯಾಪ್ತಿಯ ಕಾಮಗಾರಿಗಳ ಮುಂದುವರಿಸಲು ಅರಣ್ಯ ಇಲಾಖೆ ತಕರಾರು ಮಾಡಿದೆ. ಶಿರಗುಂಜಿ ಗ್ರಾಮದಲ್ಲಿ ಸ್ಥಾಪನೆಯಾಗಬೇಕಿರುವ ಬಹು ಗ್ರಾಮ ಕುಡಿಯವ ನೀರು ಯೋಜನೆಯ ನೀರು ಶುದ್ದೀಕರಣ ಘಟಕ ಸ್ಥಾಪನೆಗೂ ಇದೇ ಸಮಸ್ಯೆ ಎದುರಾಗಿದೆ. ಇವಗಳಿಂದ ಯೋಜನೆ ಪ್ರಗತಿ ಕಾಣುತ್ತಿಲ್ಲ' ಎಂಬುದು ಗ್ರಾಮ ಪಂಚಾಯಿತಿ ಅಧ್ಯಕ್ಷರೊಬ್ಬರ ಆರೋಪ.

## ಕೆಲಸ ಸಮಾನ; ಸೌಲಭ್ಯ ಅಸಮಾನ: ಎಎಸ್‌ಐ,ಪಿಎಸ್‌ಐಗಳ ಅಳಲು

• ಉದಯವಾಹಿನಿ ಮಂಗಳೂರು

ಸರ್ಕಾರಿ ರಜಾದಿನಗಳಲ್ಲೂ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಪತ್ರಾಂಕಿತ ರಜೆ ಬದಲಾಗಿ ಸರ್ಕಾರ, ರಜಾ ಸಂಬಳವನ್ನು ನೀಡುತ್ತದೆ. ಆದರೆ, ಈ ಸಂಬಳ ನೀಡುವಲ್ಲಿ ತಾರತಮ್ಯವಾಗುತ್ತಿದೆ ಎಂಬುದು ಹಲವು ಎಎಸ್‌ಐ, ಪಿಎಸ್‌ಐಗಳ ಅಳಲು. ಹಬ್ಬಗಳು, ಸರ್ಕಾರಿ ರಜಾ ದಿನಗಳಲ್ಲಿ ಪೊಲೀಸರನ್ನು ಶಾಂತಿ, ಸುವ್ಯವಸ್ಥೆ ಕಾಪಾಡಲು ವಿಶೇಷ ಬಂದೋಬಸ್ತ್‌ಗೆ ನಿಯೋಜಿಸಲಾಗುತ್ತದೆ. ಸಾರ್ವತ್ರಿಕ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸುವ ಕಾನ್‌ಸ್ಟೆಬಲ್ ಹುದ್ದೆಯಿಂದ ಸಬ್ ಇನ್‌ಸ್ಪೆಕ್ಟರ್ ದರ್ಜೆವರೆಗಿನ ಅಧಿಕಾರಿ, ಸಿಬ್ಬಂದಿಗೆ ಪತ್ರಾಂಕಿತ ರಜೆಗಳ ಬದಲಾಗಿ, ಒಂದು ತಿಂಗಳ ಸಂಬಳಕ್ಕೆ ಸಮಾನವಾದ ಮೊತ್ತವನ್ನು ಸರ್ಕಾರ ನೀಡುತ್ತದೆ. ಆದರೆ, ಈ ರೀತಿ ವೇತನ ನೀಡುವಾಗ ಪೊಲೀಸ್ ಕಾನ್‌ಸ್ಟೇಬಲ್, ಹೆಡ್ ಕಾನ್‌ಸ್ಟೇಬಲ್‌ಗಳಿಗೆ ಒಂದು ರೀತಿ ಇದ್ದರೆ, ಎಎಸ್‌ಐ ಮತ್ತು ಪಿಎಸ್‌ಐಗಳಿಗೆ ಒಂದು ರೀತಿ ಇದೆ ಎಂಬುದು ಸೌಲಭ್ಯ ವಂಚಿತರ ಆರೋಪ.

ಪೊಲೀಸ್ ಕಾನ್‌ಸ್ಟೇಬಲ್, ಹೆಡ್ ಕಾನ್‌ಸ್ಟೇಬಲ್‌ಗಳಿಗೆ ಅವರು ಪಡೆಯುವ ಸಂಬಳಕ್ಕೆ ಸಮಾನವಾಗಿ 30 ದಿನಗಳ ಹೆಚ್ಚುವರಿ ವೇತನವನ್ನು, ಜೂನ್ ತಿಂಗಳಿನಲ್ಲಿ ಪಡೆಯುವ ಸಂಬಳಕ್ಕೆ ಅನುಗುಣವಾಗಿ ಮೂಲವೇತನ, ಡಿಎ ಮತ್ತು ಎಚ್‌ಆರ್‌ಎ ಆಧರಿಸಿ ಮುಂದಿನ ವರ್ಷದ ಜನವರಿಯಲ್ಲಿ ನೀಡಲಾಗುತ್ತದೆ. ಆದರೆ, ಎಎಸ್‌ಐ ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಕೇವಲ 15 ದಿನಗಳ ಸಂಬಳವನ್ನು ಮಾತ್ರ ಸರ್ಕಾರ ನೀಡುತ್ತದೆ. ಬಂದೋಬಸ್ತ್ ಸೇರಿದಂತೆ ಎಲ್ಲಾ ರೀತಿಯ ಕರ್ತವ್ಯಗಳನ್ನು ನಾವು ಸಮಾನವಾಗಿ ನಿರ್ವಹಿಸುತ್ತೇವೆ. ಆದರೆ, ಪತ್ರಾಂಕಿತ ರಜಾ ಸಂಬಳದಲ್ಲಿ ಮಾತ್ರ ನಮಗೆ ಭೇದಭಾವ ಯಾಕೆ' ಎಂದು ಪ್ರಶ್ನಿಸುತ್ತಾರೆ ಎಎಸ್‌ಐ ಒಬ್ಬರು. ಎಎಸ್‌ಐ, ಪಿಎಸ್‌ಐ ಜೊತೆಗೆ ತತ್ಸಮಾನ ಹುದ್ದೆಯಲ್ಲಿರುವ ಸಿವಿಲ್, ಸಶಸ್ತ್ರ ಮೀಸಲು ಪಡೆ, ಕೆಎಸ್‌ಆರ್‌ಪಿ, ಕೆಎಸ್‌ಐಎಫ್ ಇನ್ನಿತರ ವಿಭಾಗಗಳ ರಾಜ್ಯದ ಸುಮಾರು 12,900ಕ್ಕೂ ಹೆಚ್ಚು ಸಿಬ್ಬಂದಿಗೆ ಈ ರೀತಿ ಅನ್ಯಾಯವಾಗುತ್ತಿದೆ. 1988ರಲ್ಲಿ ಆಗಿರುವ ಆದೇಶದಲ್ಲಿ ಮಾರ್ಪಾಡು ಮಾಡಿ, ಪತ್ರಾಂಕಿತ ರಜಾ ಸಂಬಳದಲ್ಲಿ ಸಮಾನತೆ ತರಬೇಕು ಎಂಬ ಬಗ್ಗೆ ಹಲವಾರು ಬಾರಿ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ವಿನಂತಿಸಲಾಗಿದೆ ಎಂದು ಸಬ್‌ಇನ್‌ಸ್ಪೆಕ್ಟರ್ ಒಬ್ಬರು ಹೇಳುತ್ತಾರೆ.



# ಅವ್ಯವಸ್ಥೆ ತಾಣ ಹಲಗೇರಿ ಎಪಿಎಂಸಿ ಉಪ ಮಾರುಕಟ್ಟೆ

• ಹತ್ತಾರು ದಶಕಗಳು ಗತಿಸಿದರೂ ರಸ್ತೆ, ಚರಂಡಿ, ಶೌಚಾಲಯ ಸೇರಿದಂತೆ ಮೂಲ ಸೌಲಭ್ಯ ಒದಗಿಸಿಲ್ಲ

• ಉದಯವಾಹಿನಿ ರಾಣೆಬೆನ್ನೂರು

ತಾಲ್ಲೂಕಿನಲ್ಲಿಯೇ ಅತಿವೇಗವಾಗಿ ಬೆಳೆಯುತ್ತಿರುವ ಹಲಗೇರಿ ಗ್ರಾಮವು ಪಟ್ಟಣದಿಂದ 7 ಕಿ.ಮೀ ಅಂತರದಲ್ಲಿದೆ. ಇಲ್ಲಿನ ಕೃಷಿ ಉತ್ಪನ್ನ ಮಾರಾಟ ಮಾರುಕಟ್ಟೆ ಪ್ರಾಂಗಣ (ಎಪಿಎಂಸಿ ಉಪ ಮಾರುಕಟ್ಟೆ) 6 ಎಕರೆ 28 ಗುಂಟೆ ಜಾಗೆ ಹೊಂದಿದ್ದು, ಯಾವುದೇ ಮೂಲ ಸೌಲಭ್ಯಗಳಿಲ್ಲದೇ ಸಮಸ್ಯೆಗಳ ಆಗರವಾಗಿದೆ.

ರೈತರ ಅನುಕೂಲಕ್ಕಾಗಿ ಸರ್ಕಾರ ಉಪ ಕೃಷಿ ಉತ್ಪನ್ನ ಮಾರುಕಟ್ಟೆ ಆರಂಭಿಸಿ ಹತ್ತಾರು ದಶಕಗಳು ಗತಿಸಿದರೂ ರಸ್ತೆ, ಚರಂಡಿ, ಶೌಚಾಲಯ ಸೇರಿದಂತೆ ಮೂಲ ಸೌಲಭ್ಯ ಒದಗಿಸಿಲ್ಲ. ಈ ಬಗ್ಗೆ ಅನೇಕ ಬಾರಿ ಎಪಿಎಂಸಿ ಅಧಿಕಾರಿಗಳಿಗೆ ತಿಳಿಸಿದರೂ ಏನೂ ಕ್ರಮಕೈಗೊಂಡಿಲ್ಲ. ವಾಣಿಜ್ಯ ಮಳಿಗೆ ಮುಂದೆ 200 ಮೀ ಸಿಸಿ ರಸ್ತೆ ಬಿಟ್ಟರೇ ಯಾವುದೇ ಸೌಲಭ್ಯಗಳಿಲ್ಲ ಎಂದು ರೈತರ ದೂರಾಗಿದೆ.

ಎಪಿಎಂಸಿ ಆವರಣದ ಸುತ್ತಲೂ ಕಸ ಮತ್ತು ಜಾಲಿ ಮುಳ್ಳಿನ ಪೊದೆ ಬೆಳೆದಿದೆ. ಕುಡಿಯುವ ನೀರಿನ ಟ್ಯಾಂಕ್‌ಗಳು ಉಪಯೋಗಕ್ಕೆ ಬಾರದೇ ತೀರಾ ಹಳೆಯದಾಗಿವೆ. ಬೋರ್‌ವೆಲ್ ಇದ್ದು ನೀರು ಪೂರೈಕೆಯಾಗುತ್ತಿಲ್ಲ. ತುಮ್ಮಿನಟ್ಟಿ-ಹಲಗೇರಿ ಡಿವೈಡರ್ ರಸ್ತೆ ನಿರ್ಮಿಸುವಾಗ ಮುಂದಿನ ಆವರಣ ಗೋಡೆ, ಗೇಟ್ ಹೊಸದಾಗಿ ನಿರ್ಮಿಸಿದ್ದು ಬಿಟ್ಟರೇ ಏನೂ ಅಭಿವೃದ್ಧಿ ಕಂಡಿಲ್ಲ.

ರಸ್ತೆ ನಿರ್ಮಿಸುವಾಗ ಕಡಿದ ಮರ, ದಿಮ್ಮೆಗಳ ಬೇರಿನ ದೊಡ್ಡ ದೊಡ್ಡ ಗಂಟುಗಳು ಆವರಣದಲ್ಲಿ ಬಿದ್ದಿವೆ. ಸುತ್ತಲೂ ಹುಣಸೇ ಮರಗಳಿದ್ದು, ಮಂಗಗಳ ಹಾವಳಿ ಹೇಳತೀರದು. ಕಚೇರಿ ಕಟ್ಟಡದ ಬಾಗಿಲು, ಕಿಟಕಿ ಕಿತ್ತಿವೆ. ಅಲ್ಲಿ ಮುರಿದ ಕುರ್ಚಿಗಳು ಬಿಟ್ಟರೇ ಏನೂ ಇಲ್ಲ. ಆವರಣದಲ್ಲಿ ಯುವಕರು ಕ್ರಿಕೆಟ್ ಹಾಗೂ ವಾಲಿಬಾಲ್ ಕೋರ್ಟ್ ಮಾಡಿಕೊಂಡಿದ್ದಾರೆ. ಅವರು ದಿನಾಲು ಆಟಕ್ಕೆ ಬೇಕಾದ ಜಾಗ ಸ್ವಚ್ಛ ಮಾಡಿಕೊಳ್ಳುತ್ತಾರೆ. ಅಲ್ಲಿ ಕೂಡ ಕಿಡಿಗೇಡಿಗಳು ದಿನಾಲು ಗಲೀಜು ಮಾಡುತ್ತಾರೆ ಎಂದು ಕ್ರೀಡಾಭಿಮಾನಿಗಳ ದೂರಿದರು. ಹಗಲು ಹೊತ್ತಿನಲ್ಲಿಯೇ ಕುಡುಕರ ಹಾವಳಿ ಹೆಚ್ಚಾಗಿದೆ. ರಾತ್ರಿಯಂತೂ ಹೇಳತೀರದು. ಜೂಜಾಟದ ತಾಣವಾಗಿ ಮಾರ್ಪಟ್ಟಿದೆ. ಎಲ್ಲಿ ನೋಡಿದರೂ ಕುಡಿದು ಬಿಸಾಕಿದ ಕಾಲಿ ಬಾಟಲ್‌ಗಳು ಮತ್ತು ಪ್ಲಾಸ್ಟಿಕ್ ಪೌಚ್‌ಗಳು ತುಂಬಿಕೊಂಡಿವೆ. ಉತ್ಪನ್ನಗಳನ್ನು ಒಣಗಿಸುವ ಕಟ್ಟೆಯಲ್ಲಿ ಗುರುವಾರ ಸಂತೆ ದಿನ ಬಿಟ್ಟರೆ ಉಳಿದ ದಿನಗಳಲ್ಲಿ ಬಿಡಾಡಿ ನಾಯಿಗಳು ಮಲಗುತ್ತವೆ. ಗುರುವಾರ ಬೆಳ್ಳುಳ್ಳಿ ಸಂತೆ ದಿನ ಎಪಿಎಂಸಿ ಒಬ್ಬರು ಇಬ್ಬರು ಸಿಬ್ಬಂದಿ ಬರುತ್ತಾರೆ. ಅವರು ಏನೂ ಮಾಡಬೇಕು. ಸ್ವಯಂ ಪ್ರೇರಿತರಾಗಿ ಸೌಲಭ್ಯ ಕಲ್ಪಿಸುವ ಗೋಜಿಗೆ ಅಧಿಕಾರಿಗಳು ಹೋಗದೇ ಇರುವುದು ರೈತರ ವ್ಯಾಪಾರಸ್ಥರ ಆಕ್ರೋಶಕ್ಕೆ ಕಾರಣವಾಗಿದೆ.

ಮಾರುಕಟ್ಟೆ ದಿನ ಆವರಣದಲ್ಲಿ ತಳ್ಳು ಗಾಡಿ ಅಂಗಡಿಯವರು ತಂಬಾಕು, ಪಾನ್ ಪರಾಗ್, ಗುಟಕಾ ಮಾರಾಟ ಮಾಡುತ್ತಾರೆ. ಹಮಾಲರು ಸ್ಯಾಂಪಲ್‌ಗೆ ಬೆಳ್ಳುಳ್ಳಿ ತೆಗೆದುಕೊಳ್ಳುತ್ತಾರೆ. ಇನ್ನು ಬಿಳಿ ಚೀಟಿ ನಡೆಯುತ್ತಿದೆ. ಈ ಬಗ್ಗೆ ಎಪಿಎಂಸಿ ಅಧಿಕಾರಿಗಳ ಗಮನಕ್ಕೆ ಇದ್ದರೂ ಕೂಡ ಯಾವುದೇ ರೀತಿ ಕ್ರಮಕೈಗೊಳ್ಳಲು ಮುಂದಾಗಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ.

ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡುವ ಚಟುವಟಿಕೆಗಳನ್ನು ಕೈಗೊಳ್ಳಲು ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ನಿರ್ಮಿಸಿದೆ. ಮಾರುಕಟ್ಟೆಗೆ ಆಗಮಿಸುವ ರೈತರು ಹಾಗೂ ವರ್ತಕರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯವಿರುವ ಎಲ್ಲಾ ರೀತಿಯ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂಬುವುದು ರೈತರು ಮತ್ತು ವ್ಯಾಪಾರಸ್ಥರ ಒತ್ತಾಸೆಯಾಗಿದೆ. ಆವರಣದಲ್ಲಿ ಮಳೆ ನೀರು ಮಳೆಗಾಲದಲ್ಲಿ ಮಳೆ ನೀರು ಹೊರಗಡೆ ಹೋಗುವುದಿಲ್ಲ. ಮಳೆ ನೀರು ನಿಂತು ಕೆಸರು ಗದ್ದೆಯಾಗಿರುತ್ತದೆ. ಹಾಗಾಗಿ ಮಾರುಕಟ್ಟೆ ಒಳಗಡೆ ವಾಹನಗಳು ಹೋಗುವಂತಿಲ್ಲ. ಸುತ್ತಮುತ್ತಲಿನ ಜನತೆ ಗಲೀಜು ಮಾಡುತ್ತಾರೆ. ಕಲ್ಲು ಮುಳ್ಳು ತುಳಿದುಕೊಂಡು ಅಡ್ಡಾಡುವಂತಾಗಿದೆ. ಇಲ್ಲಿ ಪ್ರತಿ ಗುರುವಾರ ನಡೆಯುವ ಬೆಳ್ಳುಳ್ಳಿ ಮಾರುಕಟ್ಟೆಗೆ ವಿಜಯಪುರ ಬಾಗಲಕೋಟೆ ಬೆಳಗಾವಿ ಗದಗ ಹುಬ್ಬಳ್ಳಿ ಧಾರವಾಡ ಬಳ್ಳಾರಿ ಚಿತ್ರದುರ್ಗ ದಾವಣಗೆರೆ ಶಿವಮೊಗ್ಗ ಕಾರವಾರ ಜಿಲ್ಲೆಗಳ ವ್ಯಾಪಾರಕ್ಕೆ ವ್ಯಾಪಾರಸ್ಥರು ಆಗಮಿಸುತ್ತಾರೆ. ಹಾವೇರಿ ಜಿಲ್ಲೆ ಸುತ್ತಮುತ್ತಲಿನ ರೈತರು ತಂದ ಬೆಳ್ಳುಳ್ಳಿ ವ್ಯಾಪಾರ ವಹಿವಾಟು ನಡೆಯುತ್ತದೆ. ಬೆಳ್ಳುಳ್ಳಿ ಒಣಗಿಸಲು ಒಂದೇ ಕಟ್ಟೆ ಇದೆ. ರಾತ್ರಿ ಹೊತ್ತು ವ್ಯಾಪಾರಸ್ಥರ ಮಾಲಿಗೆ ರಕ್ಷಣೆ ಇಲ್ಲ ಎನ್ನುತ್ತಾರೆ ವ್ಯಾಪಾರಸ್ಥರು.


ಉದಯವಾಹಿನಿ ಚಿತ್ರ

> ಹಲಗೇರಿ ಎಪಿಎಂಸಿ ಆವರಣದಲ್ಲಿ ಸಮಸ್ಯೆಗಳು ಶಾಶ್ವತವಾಗಿದ್ದು ಮಳೆಗಾಲದಲ್ಲಿ ಮಳೆ ನೀರು ಹೊರಗೆ ಹೋಗುವುದಿಲ್ಲ. ಕೆಸರು ಗದ್ದೆಯಂತಾಗುತ್ತದೆ. ಇದರಿಂದ ವ್ಯಾಪಾರಸ್ಥರಿಗೆ ರೈತರಿಗೆ ಅನಾನುಕೂಲವಾಗಿದೆ.
> -ಸೋಮಣ್ಣ ಮಾಳಗಿ ರೈತ ಮುಖಂಡ

> ಹಲಗೇರಿ ಎಪಿಎಂಸಿ ಉಪಪ್ರಾಂಗಣದಲ್ಲಿ ಪ್ರತಿ ಗುರುವಾರ ಮಾತ್ರ ಮಾರುಕಟ್ಟೆ ಇರುತ್ತದೆ. ಸದ್ಯ ಹೊಸದಾಗಿ ಲೇಔಟ್ ಮಾಡಿಸಲಾಗಿದ್ದು ಅಗತ್ಯ ಸೌಲಭ್ಯ ಕಲ್ಪಿಸಲು ಪ್ರಸ್ತಾವ ಸಲ್ಲಿಸಲಾಗಿದೆ.
> -ಪರಮೇಶ್ವರ ನಾಯಕ ಸಹಾಯಕ ಕಾರ್ಯದರ್ಶಿ ಎಪಿಎಂಸಿ

**ಜೂಜಾಟದ ತಾಣವಾಗಿ ಮಾರ್ಪಡು**

## ಮಿನಿ ನ್ಯೂಸ್

### 7,629 ಪಡಿತರ ಚೀಟಿ ಎಪಿಎಲ್‌ಗೆ ಪರಿವರ್ತನೆ

• ಉದಯವಾಹಿನಿ ಬಾಗಲಕೋಟೆ

ಬಿಪಿಎಲ್ ಹಾಗೂ ಅಂತ್ಯೋದಯ ಪಡಿತರ ಚೀಟಿ ಪಡೆಯಲು ಅರ್ಹರಲ್ಲದ 7,629 'ಅಂತ್ಯೋದಯ' ಮತ್ತು 'ಬಿಪಿಎಲ್' ಪಡಿತರ ಚೀಟಿಗಳನ್ನು ಜಿಲ್ಲೆಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು 'ಎಪಿಎಲ್' ಕಾರ್ಡ್‌ಗಳನ್ನಾಗಿ ಪರಿವರ್ತಿಸಿದ್ದಾರೆ. ರಾಜ್ಯದೆಲ್ಲೆಡೆ ನಡೆದಿರುವಂತೆ ಜಿಲ್ಲೆಯಲ್ಲಿಯೂ ಒಂದೂವರೆ ತಿಂಗಳಿಂದ ಪಡಿತರ ಚೀಟಿಗಳ ಪರಿಷ್ಕರಣೆ ಕಾರ್ಯ ಆರಂಭಿಸಲಾಗಿದ್ದು, ಬಿಪಿಎಲ್ ಪಡೆಯಲು ಇರುವ ಮಾನದಂಡಗಳಡಿ ಬಾರದವರ ಕಾರ್ಡ್‌ಗಳನ್ನು ಎಪಿಎಲ್‌ಗೆ ಬದಲಾಯಿಸಲಾಗುತ್ತಿದೆ.

ಜಿಲ್ಲೆಯಲ್ಲಿ 7,629 ಕಾರ್ಡ್‌ಗಳು ಅನರ್ಹರ ಪಾಲಾಗಿದ್ದವು. ಇವುಗಳನ್ನು ಪತ್ತೆ ಹಚ್ಚಿದ ಅಧಿಕಾರಿಗಳು ಈ ಎಲ್ಲಾ ಕಾರ್ಡ್‌ಗಳನ್ನು ಎಪಿಎಲ್ (ಆದ್ಯತಾ ರಹಿತ ಕುಟುಂಬ-ಎನ್‌ಪಿಎಚ್‌ಎಚ್) ಕಾರ್ಡ್‌ಗಳಿಗೆ ಪರಿವರ್ತಿಸಿದ್ದಾರೆ. ಅರ್ಹರಲ್ಲದವರೂ ಬಿಪಿಎಲ್ (ಬಡತನ ರೇಖೆಗಿಂತ ಕೆಳಗಿರುವವರು), ಅಂತ್ಯೋದಯ ಕಾರ್ಡ್‌ಗಳನ್ನು ಹೊಂದಿದ್ದಾರೆ.

ಇದರಿಂದಾಗಿ ಪಡಿತರ ಸೇರಿದಂತೆ ಹಲವಾರು ಸೌಲಭ್ಯಗಳು ಅನರ್ಹರ ಪಾಲಾಗುತ್ತಿದ್ದವು. ಅದನ್ನು ತಪ್ಪಿಸಲು ಸರ್ಕಾರದ ನಿರ್ದೇಶನದ ಮೇರೆಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ. 4.82 ಲಕ್ಷ ಕಾರ್ಡ್‌ಗಳು ಜಿಲ್ಲೆಯಲ್ಲಿ 44,783 ಅಂತ್ಯೋದಯ ಕಾರ್ಡ್‌ಗಳು, 73,762 ಎಪಿಎಲ ಕಾರ್ಡ್‌ಗಳು ಹಾಗೂ 3,64,343 ಬಿಪಿಎಲ್ ಕಾರ್ಡ್‌ಗಳಿವೆ. ಒಟ್ಟು ಜಿಲ್ಲೆಯಲ್ಲಿ 4,82,892 ಪಡಿತರ ಚೀಟಿಗಳಿವೆ.

### ಮಹಿಳೆಯನ್ನು ವಂಚಿಸಿ ಚಿನ್ನದ ಸರ ಕಳವು

• ಉದಯವಾಹಿನಿ ಹಾಸನ

ಅರಸೀಕೆರೆ ತಾಲ್ಲೂಕಿನ ಕಾಮೇನಹಳ್ಳಿ ತಾಂಡ್ಯದ ಕಟ್ಟೆ ಬಳಿ ಹೋಗುತ್ತಿದ್ದ ಮಹಿಳೆಯನ್ನು ವಂಚಿಸಿದ ಅಪರಿಚಿತ ವ್ಯಕ್ತಿಯೊಬ್ಬ 25 ಗ್ರಾಂ ಚಿನ್ನದ ಸರ ಕಳವು ಮಾಡಿದ್ದಾನೆ. ಕಾಮೇನಹಳ್ಳಿಯ ನಿರ್ಮಲಾ ಎಚ್. ಎಸ್. ಅವರು ದಾಳಿಂಬೆ ಜಮೀನಿಗೆ ಹೋಗಲು ಕಾಮೇನಹಳ್ಳಿ ತಾಂಡ್ಯದ ಕಟ್ಟೆ ಬಳಿ ನಡೆದುಕೊಂಡು ಹೋಗುತ್ತಿದ್ದರು. ಅಲ್ಲಿಗೆ ಬಂದ ಅಪರಿಚಿತ ವ್ಯಕ್ತಿ, ಸಖರಾಯಪಟ್ಟಣದ ದಾರಿ ಕೇಳಿದ್ದಾನೆ. ಆಗ, 'ನಿಮ್ಮ ಕೊರಳ ಬಳಿ ಹುಳು ಇದೆ ತೆಗೆಯಿರಿ' ಎಂದ ಅಪರಿಚಿತ ವ್ಯಕ್ತಿ, ತಾನೆ ಕೊರಳಿಗೆ ಕೈ ಹಾಕಿದ್ದಾನೆ. ಜಮೀನಿನ ಬಳಿ ತೆರಳಿದ ನಿರ್ಮಲಾ ಅವರು ಕೊರಳನ್ನು ನೋಡಿದಾಗ, 25 ಗ್ರಾಂ ಚಿನ್ನದ ಸರ ಇರಲಿಲ್ಲ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ತಂಬಾಕುಮುಕ್ತ ಸಮಾಜ ನಿರ್ಮಾಣಕ್ಕೆ ಸಹಕಾರ ಅಗತ್ಯ

• ಉದಯವಾಹಿನಿ ಯಲಬುರ್ಗಾ

ತಾಲ್ಲೂಕಿನ ಗುನ್ನಾಳ ಗ್ರಾಮದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆ, ತಂಬಾಕು ನಿಯಂತ್ರಣ ಕೋಶ ಹಾಗೂ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ತಂಬಾಕು ಸೇವನೆ ಕುರಿತ ಜಾಗೃತಿ ಕಾರ್ಯಕ್ರಮ ಪ್ರಯುಕ್ತ ವಿದ್ಯಾರ್ಥಿಗಳಿಗೆ ಉಪನ್ಯಾಸ ಹಾಗೂ ರಸಪ್ರಶ್ನೆ ಸ್ಪರ್ಧೆ ನಡೆಯಿತು. ವೈದ್ಯಾಧಿಕಾರಿ ಡಾ.ದಯಾನಂದಸ್ವಾಮಿ ಮಾತನಾಡಿ, ತಂಬಾಕು ಸೇವನೆಯಿಂದ ಆರೋಗ್ಯ ಮೇಲೆ ಪರಿಣಾಮ ಬೀರುವ ತೊಂದರೆಗಳ ಬಗ್ಗೆ ಯುವಕರು ತಿಳಿದುಕೊಳ್ಳಬೇಕು. ಅನೇಕರು ದುಷ್ಪರಿಣಾಮದ ಬಗ್ಗೆ ಅರಿವು ಇದ್ದರೂ ಫ್ಯಾಷನ್ ರೀತಿಯಲ್ಲಿ ತಂಬಾಕು ಹಾಗೂ ತಂಬಾಕು ಯುಕ್ತ ಪದಾರ್ಥಗಳ ಸೇವನೆಯಲ್ಲಿ ಆಸಕ್ತಿ ತೋರುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

ವಿಶೇಷವಾಗಿ ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರ ಸಹಕಾರ ಅಗತ್ಯವಿದೆ ಎಂದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವಿ.ಪಿ. ಮಾತನಾಡಿ, ಸಾರ್ವಜನಿಕ ಆರೋಗ್ಯ ಸುಧಾರಣೆಗೆ ಬಗ್ಗೆ ನಿರಂತರ ಅರಿವು ಕಾರ್ಯಕ್ರಮದ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಸಾರ್ವಜನಿಕರು,ಯುವಕರು ಎಚ್ಚೆತ್ತುಕೊಳ್ಳುವುದು ಮುಖ್ಯವಾಗಿದೆ. ವಿಶೇಷವಾಗಿ ಯುವಕರು ಆರೋಗ್ಯ ಸುಧಾರಣೆಗೆ ಸಮುದಾಯದಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕಾಗಿದೆ' ಎಂದರು.

### ಪೊಲೀಸರ ಸೇವೆ ಸೈನಿಕರಷ್ಟೇ ಅನುಪಮವಾದುದು ನ್ಯಾಯಾಧೀಶ ಮಂಜುನಾಥ ನಾಯಕ್

• ಉದಯವಾಹಿನಿ ಶಿವಮೊಗ್ಗ

ಸ್ವಾತಂತ್ರ್ಯಾನಂತರ ಈವರೆಗೆ 36,000 ಪೊಲೀಸ್ ಸಿಬ್ಬಂದಿ ಕರ್ತವ್ಯದ ವೇಳೆ ಮೃತಪಟ್ಟಿದ್ದಾರೆ. ಆದರೆ ಸೇನೆಯ ಹೋರಾಟದಲ್ಲಿ ಹುತಾತ್ಮ ಸೈನಿಕರ ಸಂಖ್ಯೆ 23,000. ದೇಶದ ಗಡಿ ಕಾಯುವ ಸೈನಿಕರ ಸ್ಮರಣೀಯ ಸೇವೆ ಮೀರಿ, ಅತೀ ಒತ್ತಡದಲ್ಲಿ, ಯಾವುದೇ ತುರ್ತು ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸರ ಸೇವೆ ಅತ್ಯಂತ ಮೌಲಿಕವಾದುದು' ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮಂಜುನಾಥ ನಾಯಕ್ ಹೇಳಿದರು.

ಇಲ್ಲಿನ ಪೊಲೀಸ್ ಕವಾಯತು ಮೈದಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಯಾವುದೇ ಸಂದರ್ಭದಲ್ಲಿ ಸದಾ ಸನ್ನದ್ಧರಾಗಿದ್ದು ಕಾರ್ಯನಿರ್ವಹಿಸುವ ಪೊಲೀಸರ ಸೇವೆ ಅಭಿನಂದನೀಯ ಎಂದರು.

ಪೊಲೀಸ್ ಸಿಬ್ಬಂದಿಗೆ ದೊರೆಯುವ ಗೌರವ ಅವರ ಕುಟುಂಬದ ಎಲ್ಲಾ ಸದಸ್ಯರಿಗೂ ದೊರೆಯುವಂತಾಗಬೇಕು. ಕೇವಲ ವೇತನ-ಭತ್ಯೆಗಳಿಂದ ಅವರನ್ನು ಸಮಾಧಾನಪಡಿಸುವುದು ಸಾಧ್ಯವಾಗದು. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಶಿವಮೊಗ್ಗ ಅತಿಸೂಕ್ಷ್ಮ ಪ್ರದೇಶ. ಆದಾಗ್ಯೂ ಜಿಲ್ಲೆಯ ಶಾಂತಿಯುತ ವಾತಾವರಣಕ್ಕೆ ಪೊಲೀಸ್ ಇಲಾಖೆಯ ಸೇವೆ ಅನುಪಮವಾದುದು ಎಂದು ಹೇಳಿದರು. ಕಾಯಕನಿಷ್ಠೆ ಮೆರೆಯುವ, ಕೇವಲ ಆರೋಪಗಳಿಂದಷ್ಟೇ ಗುರುತಿಸಲಾಗುವ ಪೊಲೀಸರು ಪ್ರಶಂಸೆ-ಪುರಸ್ಕಾರಗಳನ್ನು ನಿರೀಕ್ಷಿಸದೇ ಎದುರಾಗಬಹುದಾದ ಎಲ್ಲಾ ಸಂದರ್ಭ-ಸವಾಲುಗಳಿಗೆ ಒಗ್ಗಿಕೊಳ್ಳುವ ಅನಿವಾರ್ಯವಿದೆ. ಅದಕ್ಕಾಗಿ ಚಿಂತಿಸುವ, ಚರ್ಚಿಸುವ ಧೃತಿಗೆಡುವ ಅಗತ್ಯವಿಲ್ಲ ಎಂದ ಅವರು, ಪ್ರಾಮಾಣಿಕವಾಗಿ, ಆತ್ಮಸಂತೃಪ್ತಿಗಾಗಿ ಸೇವೆ ಮಾಡಬೇಕು. ಅದು ಮನಸಿಗೆ ಹೆಚ್ಚಿನ ಸಮಾಧಾನ ನೀಡಲಿದೆ ಎಂದರು.

ಪೊಲೀಸರು ತಮ್ಮ ದಿನನಿತ್ಯದ ಕರ್ತವ್ಯದ ಜೊತೆಗೆ ವೈಯಕ್ತಿಕ ಬದುಕಿನ ಉನ್ನತಿಗೂ ಚಿಂತಿಸಬೇಕಾದ ಅಗತ್ಯವಿದೆ. ಅಂಚೆ ಸೇರಿದಂತೆ ವಿವಿಧ ವಿಮಾ ಕಂಪನಿಗಳಲ್ಲಿ ಅಲ್ಪಪ್ರಮಾಣದಲ್ಲಿ ವಾರ್ಷಿಕ ಶುಲ್ಕ ಪಾವತಿಸಿ, ಹೆಚ್ಚಿನ ಲಾಭ ಪಡೆಯುವ ವಿಮಾ ಸೌಲಭ್ಯ ಹೊಂದುವಂತೆ ಜಿ.ಪಂ.ಸಿಇಒ ಎನ್.ಹೇಮಂತ್ ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ, ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ.

**ವೃಷಭ** ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ.

**ಮಿಥುನ** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ, ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

**ಕರ್ಕಾಟಕ** ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

**ಸಿಂಹ** ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಲಿವೆ.

**ಕನ್ಯಾ** ತೊಂದರೆಯಲ್ಲಿರುವ ಯಾರಿಗಾದರೂ ಸಹಾಯ ಮಾಡಲು ನಿಮ್ಮ ಚೈತನ್ಯವನ್ನು ಬಳಸಿ. ಲೋಕೋಪಕಾರಕ್ಕಾಗಲ್ಲದಿದ್ದಲ್ಲಿ ಈ ನಶ್ವರ ದೇಹದ ಉಪಯೋಗವಾದರೂ ಏನು.

**ತುಲಾ** ಆರೋಗ್ಯ ಚೆನ್ನಾಗಿರುತ್ತದೆ. ಸುಮ್ಮನೆ ಕುಳಿತುಕೊಳ್ಳುವ ಬದಲು -ಏಕೆ ಏನನ್ನಾದರೂ ಮಾಡಬಾರದು. ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ.

**ವೃಶ್ಚಿಕ** ನೀವು ಒಂದು ದೀರ್ಘ ಪ್ರಯಾಣಕ್ಕೆ ಹೋಗಲು ಯೋಜನೆ ಹಾಕುತ್ತಿದ್ದ ಹಾಗೆ ನಿಮ್ಮ ಆರೋಗ್ಯ ಮತ್ತು ಇಂಥ ಸಂರಕ್ಷಣೆಯ ಹವ್ಯಾಸ ನಿಮಗೆ ಅಪಾರವಾದ ಉಪಯೋಗವುಂಟುಮಾಡುತ್ತದೆ.

**ಧನಸ್ಸು** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ಮಕರ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

**ಕುಂಭ** ಒಬ್ಬ ದೂರದ ಸಂಬಂಧಿಯಿಂದ ಅನಿರೀಕ್ಷಿತ ಸುದ್ದಿ ಇಡೀ ದಿನವನ್ನು ಉಜ್ವಲಗೊಳಿಸುತ್ತದೆ. ನಿಮ್ಮ ಸಂಗಾತಿಯ ಕುಟುಂಬದ ಸದಸ್ಯರ ಅಡ್ಡಿಯ ಕಾರಣದಿಂದ ನಿಮ್ಮ ದಿನ ಸ್ವಲ್ಪ ಏರುಪೇರಾಗಬಹುದು.

**ಮೀನ** ನಿಮ್ಮ ಸ್ನೇಹಿತರು ಅಥವಾ ಕುಟುಂಬ ಸದಸ್ಯರೊಂದಿಗಿನ ಸಂತಸದ ಪ್ರಯಾಣ ನಿಮಗೆ ಸಮಾಧಾನ ನೀಡುತ್ತದೆ. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ.

● ಸಕಲ ಜೀವಿಗಳಿಗೆ ದಯೆ ಪಾಲಿಸಲಿವೆಂದು ಭಕ್ತಿ, ಶ್ರದ್ಧೆಯಿಂದ ದೀಪಾವಳಿ ಹಬ್ಬ ಆಚರಿಸಿ ಪ್ರಾರ್ಥನೆ

# ಬಂಜಾರಾ ಸಮಾಜದಿಂದ ದೀಪಾವಳಿ ಹಬ್ಬ ಆಚರಣೆ

**ಉದಯವಾಹಿನಿ ವಿಶೇಷ**

• ಮಹೇಬೂಬಶಾ ಅಣವಾರ

• ಉದಯವಾಹಿನಿ ಚಿಂಚೋಳಿ





ಉದಯವಾಹಿನಿ ಚಿತ್ರ



ದೀಪಾವಳಿ ಹಬ್ಬವನ್ನು ಬಂಜಾರ ಸಮಾಜದಲ್ಲಿ ಅತಿ ವಿಜೃಂಭಣೆಯಿಂದ ದೇವರಲ್ಲಿ ವಿಶ್ವಾವಿಟ್ಟು ಕುವೆಂಪುರವರ ನುಡಿಯಂತೆ ಸರ್ವಜನಾಂಗದ ಶಾಂತಿಯ ತೋಟದಂತೆ ಸರ್ವರು ಸುಖಶಾಂತಿಯಿಂದ ಬಾಳಲಿ ಧನಕರುಗಳಿಗೂ ಪ್ರಾಣಿ ಪಕ್ಷಿಗಳಿಗೂ ಒಳ್ಳೆದಾಗಲಿ ಎಂದು ವರ್ಷ ದಾಡರ ಕೊರ ದವಾಳ ಬಾಪು ತೋನ ಮೇರಾ,ಯಾಡಿ ತೋನ ಮೇರಾ,ಭೀಯಾ ತೋನ ಮೇರಾ, ಬಾಯಿ ತೋನ ಮೇರಾ, ಅದೇ ರೀತಿ ಎತ್ತುಗಳಿಗೂ ಮೇರಾ ದನಕರುಗಳಿಗೂ ಮೇರಾ ಎಂದು ಹಾಡಿನ ಮುಖಾಂತರ ದೇವರು ಕರುಣಿಸಲಿ ಎಂದು ಹುಡಗಿಯರು ಮಹಿಳೆಯರು ದೇವರಲ್ಲಿ ಪ್ರಾರ್ಥಿಸುತ್ತಾರೆ. - ರಾಮಶೆಟ್ಟಿ ಪವ್ವಾರ. ಬಂಜಾರ ಸಮಾಜದ ತಾಲ್ಲೂಕಾಧ್ಯಕ್ಷರು,ಪುರಸಭೆ ಮಾಜಿ ಅಧ್ಯಕ್ಷರು ಚಿಂಚೋಳಿ.



ಯುವತಿಯರು ವೇಷಭೂಷಣ ಧರಿಸಿ ಹಣ್ಣು ಹಂಪಲು ತಿನ್ನುತ್ತಾ ಪ್ರಕೃತಿಯೆಡೆಗೆ ಸಾಗಿ, ಪ್ರಕೃತಿಯಲ್ಲಿ ದೊರಕುವ ಎಲ್ಲಾ ತರಹದ ಹೂವುಗಳು ಕಡಿದು ಬುಟ್ಟಿಯಲ್ಲಿ ಹಾಕಿಕೊಂಡು ನೃತ್ಯ ಮಾಡುತ್ತಾ ತಾಂಡಾದ ಕಡೆಗೆ ಬಂದು ಸೇವಾಲಾಲ್ ಮಂದಿರದ ಆವರಣದಲ್ಲಿ ಬಂದು ಹಾಡುಗಳನ್ನು ಹಾಡುತ್ತಾ ನೃತ್ಯ ಮಾಡುತ್ತಾ, ಗೆಳತಿಯರೊಂದಿಗೆ ವಿಭಿನ್ನವಾದ ಫೋಟೋಗಳು ತೆಗೆಸಿಕೊಂಡು ಬುಟ್ಟಿಯಲ್ಲಿ ಹೂಗಳನ್ನು ಇಟ್ಟುಕೊಂಡು ತಾಂಡಾದ ಪ್ರತಿ ಮನೆಗೆ ತೆರಳಿ ಗೋವುಗಳ ಸೆಗಣಿಯಲ್ಲಿ ಹೂಗಳನ್ನು ಇಟ್ಟು ಪೂಜೆ ಮಾಡಿ ಮೂಕ ಜೀವಿಗಳಿಗೂ ರಕ್ಷಣೆ ಮಾಡಲಿ ಎಂದು ಹಾರೈಸುತ್ತಾರೆ. - ರಾಜು ಪವ್ವಾರ, ಮಾಜಿ ಉಪಾಧ್ಯಕ್ಷರು ಪುರಸಭೆ ಚಿಂಚೋಳಿ.

ಭಾರತ ದೇಶದ ಬಂಜಾರಾ ಜನಾಂಗದವರು ವಿಶಿಷ್ಟ ರೀತಿಯಲ್ಲಿ ದೀಪಾವಳಿ ಹಬ್ಬವು ವಿಜೃಂಭಣೆಯಿಂದ ಆಚರಿಸಿ ಸಕಲ ಜೀವಿಗಳಿಗೆ,ದಯೆ ಪಾಲಿಸಲಿವೆಂದು ಭಕ್ತಿ ಶ್ರದ್ಧೆಯಿಂದ ಆಚರಿಸಿ ದೇವರಲ್ಲಿ ಪ್ರಾರ್ಥನೆ ಮಾಡುತ್ತಾರೆ. ದೀಪಾವಳಿ ಅಮವಾಸ್ಯೆಯ ದಿನದಂದು ಸಾಯಂಕಾಲ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ದೀಪವನ್ನು ಹಚ್ಚಿ ಲಕ್ಷ್ಮಿ ಮಾತೆಯ ದೇವಿಯ ವಿಗ್ರಹವನಿಟ್ಟು

**ಭಕ್ತಿ ಶೃದ್ಧೆಯಿಂದ ದೇವರಲ್ಲಿ ಪ್ರಾರ್ಥನೆ**

ಪೂಜಿಸುತ್ತಾರೆ,ಒಂದು ಮನೆ ಯಿಂದ ಇನ್ನೊಂದು ಮನೆಗೆ ದೀಪವನ್ನು ಹಚ್ಚುತ್ತಾ ಮನೆಯ ಮಕ್ಕಳು ತಮ್ಮ ಆಳಗ ಬಳಗದ ಹಿರಿಯರನ್ನು ಕಂಡು ಯೋಗಕ್ಷೇಮ ವಿಚಾರಿಸಿ,ಕಾಲಿಗೆ ನಮಸ್ಕಾರಿಸಿ ಆಶೀರ್ವಾದ ಪಡೆದು ಸಿಹಿ ಹಂಚುತ್ತಾರೆ,ಬಂಜಾರಾ ಜನಾಂಗದವರು ಹಲವಾರು ರೀತಿಯ ವೇಷ ಭೂಷಣದಿಂದ ಚಿರಪರಿಚಿತರಾಗಿ ಅವರ ಉಡುಗೆ ತೋಡುಗೆ,ಆಹಾರ ಪದ್ಧತಿ,ಭಾಷೆ, ಕೆಲಸ,ಸಂಸ್ಕೃತಿ ಆಚರಣೆಗಳು ವಿಶಿಷ್ಟ ರೀ ತಿಯಲ್ಲಿ ಕಾಣಬಹುದು.

ಹಬ್ಬದ ವಿಶೇಷವೆಂದರೆ ಕುಮಾರಿಯರು ಹುಡಗಿಯರು ಮಾತ್ರ ಒಂದು ಕಡೆ ಸೇರಿ ದಿನಾಲು ದೀಪಾವಳಿ ಹಬ್ಬ ಬರುವವರೆಗೂ ಕಾಲಿಗೆ ಕಾಲ್ಗೆಜ್ಜೆ ಕಟ್ಟಿಕೊಂಡು ನೃತ್ಯ ಹಾಡುಗಳನ್ನು ಪ್ರದರ್ಶಿಸುತ್ತಾರೆ, ತಾಂಡಾದಲ್ಲಿನ ಗಂಡು ಹೆಣ್ಣು ಹಿರಿಯರು ವೀಕ್ಷಣೆ ಮಾಡುತ್ತಾರೆ ದೀಪಾವಳಿ ಹಬ್ಬದ ಸಾಂಪ್ರಾದಾಯಿಕ ವೇಷ ಭೂಷಣ, ದೀಪಾವಳಿ ಹಬ್ಬ ಬರುವವರೆಗೆ ಹುಡುಗಿಯರು ಎರಡರಿಂದ ಮೂರು ಜೋತೆ ನೂತನ ಬಟ್ಟೆಗಳನ್ನು ಖರೀದಿಸಿ ಸಾಂಪ್ರದಾಯಿಕವಾಗಿ ಅವುಗಳನ್ನು ಹೋಲಿಸಿ ಹಬ್ಬದ ದಿನದಂದು ತೊಟ್ಟು ಸಂಭ್ರಮಿಸುತ್ತಾರೆ.

ಬಂಜಾರ ಜನಾಂಗವು ಹಿಂದೂ ಹಬ್ಬಗಳು ಮಾತ್ರವಲ್ಲದೆ ಎಲ್ಲಾ ಧರ್ಮದ ಹಬ್ಬಗಳೂ ಆಚರಣೆಯನ್ನು ಮಾಡುತ್ತಾ ಆದರಲ್ಲೂ ಹೋಳಿ ಹುಣ್ಣಿಮೆಯ ಹಬ್ಬ ಹಾಗೂ ದೀಪಾವಳಿ ಹಬ್ಬದ ಆಚರಣೆ ವಿಭಿನ್ನತೆಯಿಂದ ಕೂಡಿರುತ್ತದೆ, ದೀಪಾವಳಿ ಹಬ್ಬ ಇನ್ನೂ ಒಂದು ತಿಂಗಳು ಮುಂಚಿತ ಆಗಿರೂವಾಗಲೇ ಹಬ್ಬವು ಪ್ರಾರಂಭಿಸುತ್ತಾರೆ.

ತಾಂಡದಲ್ಲಿನ ಹುಡುಗಿಯರು ಪ್ರತಿದಿನ ರಾತ್ರಿಯ ಸಮಯದಲ್ಲಿ ತಮಟೆ,ಡಿಜೆ ಸೌಂಡ್ ಹಚ್ಚಿ ಅವರ ಸಂಸ್ಕೃತಿಕ ನೃತ್ಯವನ್ನು ಮಾಡುತ್ತಾ,ತಾಂಡಾದ ಎಲ್ಲಾ ಹುಡಗಿಯರು (ಕುಮಾರಿಯರು) ತನ್ನ ಮನೆಯಿಂದ ಸಿಂಗರಿಸಿಕೊಂಡು ದೀಪವನ್ನು ಕೈಯಲ್ಲಿ ಹಿಡಿದು ಸೇವಾಲಾಲ್ ಮಂದಿರದ ಆವರಣಕ್ಕೆ ಬಂದು ದೇವರುಗಳಿಗೆ ಆರತಿಯನ್ನು ಮಾಡಿ ನಂತರ ನಾಯಕರ ಮುಖಂಡರ ಎಲ್ಲಾ ಮನೆಗೆ ಹೋಗಿ ಕಷ್ಟದುಃಖ ಆಲಿಸಿ ಯೋಗಕ್ಷೇಮ ವಿಚಾರಿಸುತ್ತಾರೆ. ಮಧ್ಯರಾತ್ರಿ ಕೈಯಲ್ಲಿ ದೀಪವನ್ನು ಹಿಡಿದುಕೊಂಡು ಸಾಲಾಗಿ ಹಾಡುಗಳನ್ನು ಹಾಡುತ್ತಾ, ಪ್ರತಿ ಮನೆ ಮನೆಗೂ ಹೋಗಿ ದೇವರು ಆಶೀರ್ವಾದ ಮಾಡಲಿ,ಸಕಲ ಜೀವಿಗಳಿಗೆ ದೇವರು ಕರುಣಿಸಲಿ ಎಂದು ಬೇಡಿ ಕೊಳ್ಳುತ್ತಾರೆ,ತಾಂಡಾ ಗ್ರಾಮಗಳ ಮನೆಯಲ್ಲಿನ ಮನುಷ್ಯರನ್ನು ಹಿಡಿದು ಪ್ರಾಣಿಗಳಿಗೂ ದಯೆ ಕರುಣಿಸಲಿ ಎಂದು ವರ್ಷ ದಾಡರ ಕೊರ ದವಾಳ ಬಾಪು ತೋನ ಮೇರಾ,ಯಾಡಿ ತೋನ ಮೇರಾ,ಭೀಯಾ ತೋನ ಮೆರಾ,ಬಾಯಿ ತೋನ ಮೇರಾ,ಅದೇ ರೀತಿ ಎತ್ತುಗಳಿಗೂ ಮೇರಾ ದನಕಾರುಗಳಿಗೂ ಮೇರಾ ಎಂದು ಹಾಡಿನ ಮುಖಾಂತರ ದೇವರು ಕರುಣಿಸಲಿ ಎಂದು ಬೇಡಿಕೊಳ್ಳುತ್ತಾರೆ.

ದೀಪಾವಳಿ ಹಬ್ಬದ ದಿನದಂದು ಪ್ರತಿ ಮನೆಯವರು ದೀಪದ ಹಣತಿಯಲ್ಲಿ ಹಣದ ನಾಣ್ಯಗಳನ್ನು ಹಾಕುತ್ತಾರೆ,ಮುಂಜಾನೆ ಸಂಪ್ರಾದಾಯಿಕ ಬಂಜಾರ ವೇಷಭೂಷಣ ಧರಿಸಿ ಹಣ್ಣು ಹಂಪಲು ತಿನ್ನುತ್ತಾ ಪ್ರಕೃತಿಯೇಡೆಗೆ ಸಾಗಿ,ಪ್ರಕೃತಿಯಲ್ಲಿ ದೊರಕುವ ಎಲ್ಲಾ ತರಹದ ಹೂವುಗಳು ಕಡಿದು ಬುಟ್ಟಿಯಲ್ಲಿ ಹಾಕಿಕೊಂಡು ನೃತ್ಯ ಮಾಡುತ್ತಾ ತಾಂಡಾದ ಕಡೆಗೆ ಹೋಗುತ್ತಾರೆ, ಸೇವಾಲಾಲ್ ಮಂದಿರದ ಆವರಣದಲ್ಲಿ ಬಂದು ಹಾಡುಗಳನ್ನು ಹಾಡುತ್ತಾ ನೃತ್ಯ ಮಾಡುತ್ತಾ ಗೆಳತಿಯರೊಂದಿಗೆ ವಿಭಿನ್ನವಾಗಿ ಫೋಟೋಗಳನ್ನು ತೆಗೆದುಕೊಳ್ಳುತ್ತಾರೆ.

ಬಂಜಾರ ಭಾಷೆಯಲ್ಲಿ ಮೇರಾ ಅಂದರೆ ದಯೆ ಎಂದು ಅರ್ಥ ಕೊಡುತ್ತದೆ, ಹೀಗೆ ಪ್ರತಿ ಮನೆ ಮನೆಗೂ ಬೆಳಗಾಗುವವರೆಗೆ ಮೇರಾ ಹೇಳುತ್ತಾರೆ,ಮಧ್ಯಾಹ್ನದ ನಂತರ ಎಲ್ಲಾ ಹುಡುಗಿಯರು ಬುಟ್ಟಿಯಲ್ಲಿ ಹೂಗಳನ್ನು ಇಟ್ಟುಕೊಂಡು ತಾಂಡಾದ ಪ್ರತಿ ಮನೆಗೆ ತೆರಳಿ ಗೋವುಗಳ ಸೆಗಣಿಯಲ್ಲಿ ಹೂಗಳನ್ನು ಇಟ್ಟು ಪೂಜೆ ಮಾಡಿ ಮೂಕ ಜೀವಿಗಳಿಗೂ ರಕ್ಷಣೆ ಮಾಡಲಿವೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ.


ಈ ರೀತಿ ಬಂಜಾರ ಸಮಾಜದವರು ಅತಿ ವಿಜೃಂಭಣೆಯಿಂದ ದೀಪಾವಳಿ ಹಬ್ಬವು ಆಚರಿಸುತ್ತಾರೆ.

# ದಾಸ ಶ್ರೇಷ್ಠ ಸಂತ ಕನಕದಾಸರ ಕಂಚಿನ ಮೂರ್ತಿ ಲೋಕಾರ್ಪಣೆ

• ಉದಯವಾಹಿನಿ ಹಳ್ಳೂರ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕಪ್ಪಲಗುದ್ದಿ ಗ್ರಾಮದಲ್ಲಿ ದಾಸ ಶ್ರೇಷ್ಠ ಶ್ರೀ ಕನಕದಾಸರ ನೂತನವಾಗಿ ಕಂಚಿನ ಮೂರ್ತಿಯನ್ನು ಉದ್ಘಾಟನೆ ನೆರವೇರಿಸಿ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ ನಮ್ಮ ತಂದೆ ರಾಜಕೀಯದ ಕೊನೆಯ ಘಟ್ಟದಲ್ಲಿದ್ದಾರೆ. ವೈಚಾರಿಕವಾಗಿ, ಪ್ರಗತಿಪರವಾದ ಸಿದ್ಧಾಂತ ಇಟ್ಟುಕೊಂಡಿರುವ ಅವರಿಗೆ ಮಾರ್ಗದರ್ಶನ ನೀಡಲು ನಾಯಕರು ಬೇಕು. ಆ ಜವಾಬ್ದಾರಿಯನ್ನು ಸಚಿವ ಸತೀಶ್ ಜಾರಕಿಹೊಳಿ ವಹಿಸಿಕೊಳ್ಳುತ್ತಾರೆ. ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳ ಮೇಲೆ ನಂಬಿಕೆ ಇಟ್ಟುಕೊಂಡಿರುವ ಎಲ್ಲಾ ರಾಜಕಾರಣಿಗಳಿಗೆ, ಯುವಕರಿಗೆ ಅವರು ಮಾದರಿಯಾಗಿ ನಮ್ಮನ್ನೆಲ್ಲ ಮುನ್ನಡೆಸಿಕೊಂಡು ಹೋಗುವ ನಂಬಿಕೆ ನನಗಿದೆ ಎಂದರು.

ಈ ರೀತಿಯ ತತ್ವ ಬದ್ಧತೆ ಇರುವ ನಾಯಕರು ಸಿಗುವುದು ಬಹಳ ಕಷ್ಟ. ಆದರೆ ಅಂತಹ ಕೆಲಸವನ್ನು ಜಾರಕಿಹೊಳಿ ಅವರು ಮಾಡುತ್ತಿದ್ದಾರೆ. ಇದನ್ನು ಹೀಗೆಯೇ ಮುಂದುವರೆಸಲಿ ಎಂದು



ಉದಯವಾಹಿನಿ ಚಿತ್ರ

ಆಶಿಸಿದರು. ರಾಜ್ಯ ರಾಜಕೀಯದಲ್ಲಿ ಈಗಾಗಲೇ ನವೆಂಬರ್ ಕ್ರಾಂತಿಯ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕುರ್ಚಿ ಕಳೆದುಕೊಳ್ಳಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಈ ನಡುವೆ ಸಿದ್ದರಾಮಯ್ಯನವರ ಅವರ ಪುತ್ರ ಡಾ.ಯತೀಂದ್ರ ಅವರು ನೀಡಿರುವ ಹೇಳಿಕೆ ರಾಜಕೀಯ ವಲಯದಲ್ಲಿ ಸಂಚಲನ ಉಂಟುಮಾಡಿದೆ. ಮೂರ್ತಿ ಉದ್ಘಾಟನೆ ತದ ನಂತರ ಭವ್ಯ ಮೆರವಣಿಗೆಯೊಂದಿಗೆ ಸಚಿವ ಸತೀಶ ಜಾರಕಿಹೊಳಿ ವಿಧಾನ ಪರಿಷತ್ ಸದಸ್ಯ ಡಾ. ಯತಿಂದ್ರ ಸಿದ್ದರಾಮಯ್ಯ ಹಲವು ಮಹಾಸ್ವಾಮಿಗಳ ಜೋತೆಗೆ ಭವ್ಯ ವೇದಿಕೆ ಮೇಲೆ ಕರೆ ತರಲಾಯಿತು. ಅಮರೇಶ್ವರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಸಿದ್ದೇಶ್ವರ ಶರಣರು. ನಗರಾಭಿರುದ್ಧಿ ನಿಗಮದ ಅಧ್ಯಕ್ಷ ಲಕ್ಷ್ಮಣ ಚಿಂಗಳೇ ತೇರದಾಳ ಮತಕ್ಷೇತ್ರದ ಮುಖಂಡ ಸಿದ್ದು ಕೊಣ್ಣೂರ ಭಗೀರಥ ನಿಗಮದ ಅಧ್ಯಕ್ಷ ಬರಮಣ್ಣ ಉಪ್ಪಾರ.ಮಾ ಕು ಸ ಅ ರಾಜೇಂದ್ರ ಸಣ್ಣಕ್ಕಿ.ಕುರಿ ಉಣ್ಣೆ ನಿಗಮದ ಉಪಾಧ್ಯಕ್ಷ ಕಾಶೀನಾಥ್ ಹುಡೆದ ಪಂಚ್ ಗ್ಯಾರಂಟಿ ಅಧ್ಯಕ್ಷ ವಿನಯ ನಾವಲಗಟ್ಟಿ.ತಹಶೀಲ್ದಾರ ಮಹಾದೇವ ಸಣಮುರಿ.ಕಂದಾಯ ನಿರೀಕ್ಷಕ ರಾಜು ದಾನೊಳಿ.ಸಿ ಬಿ ಕೂಲಿಗೋಡ ಉಪಸ್ಥಿತರಿದ್ದರು.

ಲೋಕೋಪಯೋಗಿ ಇಲಾಖೆ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಮಾತನಾಡಿ ಬಸವಣ್ಣನವರ, ಕನಕದಾಸರಂತಹ ಮಹಾನ ಮೇಧಾವಿಗಳ ಪುತ್ಥಳಿ ನಿರ್ಮಾನವಾಗಿ ಅವರ ತತ್ವ ಆದರ್ಶಗಳನ್ನು ಯುವ ಪೀಳಿಗೆಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯಾರು ಮೇಲು ಕೀಳು ಎಂಬ ಬೇಧ ಭಾವ ಮಾಡದೆ ಎಲ್ಲರನ್ನು ಸರಿ ಸಮನಾಗಿ ಕಾಣಬೇಕು. ಜಾತಿ ಗಣತಿ ನಿಮ್ಮ ಸ್ಥಿತಿ ಗತಿ ತಿಳಿದು ಬಡವರನ್ನು ಶ್ರೀಮಂತರಾಗಿಸುವ ಉದ್ದೇಶವಾಗಿದೆ. ನಾವು ಮಾತು ಕೊಟ್ಟಂತೆ ರೈತರಿಗೆ ಕೃಷಿಗೆ ಅನುಕೂಲವಾಗುವಂತೆ ಕಿನಾಲ್ ನೀರಿನ ವ್ಯವಸ್ಥೆ ಕಲ್ಪಿಸುತ್ತಿದ್ದೇವೆ. -ಸಚಿವ ಸತೀಶ್ ಜಾರಕಿಹೊಳಿ

## ಅಂಗನವಾಡಿ; 238 ಹುದ್ದೆಗಳಿಗೆ ಅರ್ಜಿ

• ಉದಯವಾಹಿನಿ, ಹಾವೇರಿ

ಜಿಲ್ಲೆಯ ಅಂಗನವಾಡಿಗಳಲ್ಲಿ ಖಾಲಿ ಇರುವ 61 ಕಾರ್ಯಕರ್ತೆ ಹಾಗೂ 177 ಸಹಾಯಕಿಯರ ಹುದ್ದೆಗಳ ಭರ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 17 ಕೊನೆ ದಿನವಾಗಿದೆ. ಬ್ಯಾಡಗಿ ತಾಲ್ಲೂಕಿನಲ್ಲಿ 3. ಹಾನಗಲ್ 13, ಹಾವೇರಿ 5, ಹಿರೇಕೆರೂರು 12, ರಾಣೆಬೆನ್ನೂರು 20, ಸವಣೂರು 4 ಹಾಗೂ ಶಿಗ್ಗಾವಿ ತಾಲ್ಲೂಕಿನಲ್ಲಿ 4 ಕಾರ್ಯಕರ್ತೆ ಹುದ್ದೆಗಳು ಖಾಲಿಯಿವೆ. ಬ್ಯಾಡಗಿ ತಾಲ್ಲೂಕಿನಲ್ಲಿ 17, ಹಾನಗಲ್ 21, ಹಾವೇರಿ 29, ಹಿರೇಕೆರೂರು 27, ರಾಣೆಬೆನ್ನೂರು 34, ಸವಣೂರು 23 ಹಾಗೂ ಶಿಗ್ಗಾವಿ ತಾಲ್ಲೂಕಿನಲ್ಲಿ 26 ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

'ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ದ್ವಿತೀಯ ಪಿಯುಸಿ ಪೂರ್ಣಗೊಳಿಸಿರಬೇಕು. ಸಹಾಯಕಿಯರ ಹುದ್ದೆಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ಕನಿಷ್ಠ 19 ವರ್ಷ ಹಾಗೂ ಗರಿಷ್ಠ 35 ವರ್ಷ ವಯಸ್ಸಿನವರಾಗಿರಬೇಕು. ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಆಯಾ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಗ್ರಾಮ ಆಡಳಿತಾಧಿಕಾರಿ ಅಮಾನತು

• ಉದಯವಾಹಿನಿ, ಔರಾದ್

ತಾಲ್ಲೂಕಿನ ವಡಗಾಂವ್ (ಡಿ) ಗ್ರಾಮ ಆಡಳಿತಾಧಿಕಾರಿ ನಾಮದೇವ ಅವರನ್ನು ಸೇವೆಯಿಂದ ಅಮಾನತು ಮಾಡಿ ಉಪವಿಭಾಗಾಧಿಕಾರಿ ಆದೇಶ ಹೊರಡಿಸಿದ್ದಾರೆ. ರೈತರ ವಿವಿಧ ಕೆಲಸ ಮಾಡಿಕೊಡಲು ಹಾಗೂ ಜನನ, ಮರಣ ಪ್ರಮಾಣಪತ್ರ, ಪಂಚನಾಮ ವರದಿ ಸಲ್ಲಿಸಲು ವಿಳಂಬ ಮಾಡುವುದು ಹಾಗೂ ರೈತರೊಬ್ಬರಿಂದ ಲಂಚ ಕೇಳಿರುವ ವಿಡಿಯೋ ವೈರಲ್ ಆದ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

## ಮಳೆಗೆ ನೆಲಕಚ್ಚಿದ ಭತ್ತದ ಬೆಳೆ

• ಉದಯವಾಹಿನಿ, ಗಂಗಾವತಿ

ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಮಂಗಳವಾರ ಸಂಜೆ ಮಳೆ ಸುರಿದಿದ್ದು, ನಗರದಲ್ಲಿ ಸಾರ್ವಜನಿಕರು ಸಂಚಾರಕ್ಕಾಗಿ ಕೆಲ ಗಂಟೆ ಪರದಾಡಿದರು. ದೀಪಾವಳಿ ಹಬ್ಬದ ನಿಮಿತ್ತ ಸಾರ್ವಜನಿಕರು ಅಂಜನಾದ್ರಿ, ಹುಲಿಗಿಯ ಹುಲಿಗೆಮ್ಮ ದೇವಸ್ಥಾನ, ಪಂಪಾಸರೋವರ, ದುರ್ಗಾದೇವಿ ದೇವಸ್ಥಾನಕ್ಕೆ ನೂರಾರು ಸಂಖ್ಯೆಯಲ್ಲಿ ಬಂದು, ದರ್ಶನ ಪಡೆದರು. ಮಳೆಯಲ್ಲಿ ಸಿಲುಕಿ ಊರು ಸೇರಲು ಪರದಾಡಿದರು. ಈ ಮಳೆಗೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬೆಳೆದು ನಿಂತು ಕಟಾವಿಗೆ ಬಂದ ಭತ್ತದ ಬೆಳೆಗಳು ನೆಲಕ್ಕೆ ಉರುಳಿದ ದೃಶ್ಯಗಳು ಕಂಡುಬಂದವು. ನಗರದ ವಿವಿಧ ವಾರ್ಡ್‌ಗಳಲ್ಲಿನ ಖಾಲಿ ನಿವೇಶನಗಳಲ್ಲಿ ಮಳೆ ನೀರು ನಿಂತಿತು. ಕೆಲವೆಡೆ ರಸ್ತೆಯಲ್ಲಿ ನೀರು ಹರಿಯಿತು.



ಉದಯವಾಹಿನಿ ಚಿತ್ರ



ಉದಯವಾಹಿನಿ ಚಿತ್ರ

## ಮುದ್ದು ಮಕ್ಕಳಿಗೆ ಬುಟ್ಟೆಯಲ್ಲಿಟ್ಟುಕೊಂಡು ಹೂವು ತರಲು ಹೊರಟ ಯುವತಿಯರು

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಶಾಧಿಪೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಾಪ್ಲಾನಾಯಕ ತಾಂಡಾದಲ್ಲಿ ಬಂಜಾರ ಸಮಾಜದವರು ದೀಪಾವಳಿ ಹಬ್ಬವು ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುತ್ತಾ ಯುವತಿಯರು ಬೂಟ್ಟಿಯನ್ನು ತೆಗೆದುಕೊಂಡು ಕಾಡಿಗೆ ಹೂವು ತರಲು ಹೋಗುತ್ತಿರುವಾಗ ತಲೆ ಮೇಲೆ ಬುಟ್ಟಿ ಇಟ್ಟುಕೊಂಡು ಬುಟ್ಟಿಯಲ್ಲಿ ಮುದ್ದುಮಕ್ಕಳಿಗೆ ಕುಡಿಸಿಕೊಂಡು ಹೋಗುತ್ತಿರುವುದು ಕಾಣಬಹುದು.

ಪ್ರತಿ ವರ್ಷ ಚಾಪ್ಲಾನಾಯಕ ತಾಂಡಾದಲ್ಲಿ ದೀಪಾವಳಿ ಹಬ್ಬವನ್ನು ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುತ್ತೇವೆ ಯುವತಿಯರು ಹೂವು ತರಲು ಕಾಡಿಗೆ ಹೋಗುತ್ತಿರುವಾಗ ಖಾಲಿ ಬುಟ್ಟೆಯಿಂದ ಹೋಗಬಾರದೆಂದು ಚಿಕ್ಕಚಿಕ್ಕ ಮುದ್ದುಮಕ್ಕಳಿಗೆ ಬುಟ್ಟೆಯಲ್ಲಿಟ್ಟುಕೊಂಡು ಹೋಗುವ ಸಂಪ್ರದಾಯದಿಂದ ಮುದ್ದುಮಕ್ಕಳಿಗೆ ಬುಟ್ಟೆಯಲ್ಲಿ ಇಟ್ಟುಕೊಂಡು ಹೋಗುತ್ತಾರೆ ಎಂದು ಬಿಜೆಪಿ ಯುವ ಮುಖಂಡ ಗ್ರಾಮಸ್ಥ ವಿಜಯಕುಮಾರ ರಾಠೋಡ ಹೇಳಿದರು.

## ಶಿಕ್ಷಕರ ಕೊರತೆ: ವ್ಯರ್ಥವಾದ ಕಂಪ್ಯೂಟರ್ ಬಳಕೆ

• ಉದಯವಾಹಿನಿ, ಸಂಡೂರು



ಉದಯವಾಹಿನಿ ಚಿತ್ರ

**ಖಾಯಂ ಶಿಕ್ಷಕರ ಕೊರತೆ**

ತಾಲ್ಲೂಕಿನ ಚೋರನೂರು ಹೋಬಳಿಯ ಬಂಡ್ರಿ, ಗ್ರಾಮದ ಬಳಿ ಇರುವ ಕೊಮಡಪುರದ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಲವಾರು ವರ್ಷಗಳಿಂದ ಖಾಯಂ ಶಿಕ್ಷಕರ ಕೊರತೆಯಿಂದ ಶಾಲೆಯಲ್ಲಿನ 6 ಕಂಪ್ಯೂಟರ್‌ಗಳು ಉಪಯೋಗಕ್ಕೆ ಬಾರದಂತಾಗಿದೆ. ಶಾಲೆಯಲ್ಲಿ 1 ರಿಂದ 6ನೇ ತರಗತಿಯವರೆಗೆ 150 ಮಕ್ಕಳಿದ್ದು, 150 ಮಕ್ಕಳು ಅಭ್ಯಾಸ ಮಾಡುತ್ತಿದ್ದು, ಒಬ್ಬರು ಮುಖ್ಯ ಶಿಕ್ಷಕರು 4 ಜನ ಅತಿಥಿ ಶಿಕ್ಷಕರು ಸೇವೆ ಸಲ್ಲಿಸಿ ಸೇವೆಯಲ್ಲಿ ಗಣಕ ಯಂತ್ರ ಶಿಕ್ಷಕ ಇತರೆ ಶಿಕ್ಷಕರು ಖಾಯಂ ಆಗಿ ಇಲ್ಲದೇ ಇರುವುದರಿಂದ ಲಕ್ಷಾಂತರ ವೆಚ್ಚ ಮಾಡಿದ ಗಣಕ ಯಂತ್ರಗಳು ವ್ಯರ್ಥವಾಗಿದ್ದು, ಮಕ್ಕಳ ಕಲಿಕೆ ಹಿನ್ನಡೆಯಾಗಿದೆ. ಶಾಲೆಯಲ್ಲಿ 6 ಗಣಕ ಯಂತ್ರಗಳನ್ನು ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಂಡಳಿಯ ಅನುದಾನ ಸೇರಿದಂತೆ ಸರ್ಕಾರದ ಇತರೆ ಅನುದಾನದಲ್ಲಿ ಗಣಕ ಯಂತ್ರಗಳನ್ನು ಖರೀದಿಸಲಾಗಿದ್ದು, ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ಅಳವಡಿಸಲಾಗಿದೆ. ಗಣಕಯಂತ್ರ ಬಳಕೆ ಮಾಡಲು ಸೂಕ್ತವಾದ ಆಸನೆಗಳನ್ನು ಮಾಡದೇ ಇರುವುದರಿಂದ ಕಂಪ್ಯೂಟರ್ ಸೇವೆ ವ್ಯರ್ಥವಾಗಿದೆ.

## ವೈದ್ಯಕೀಯ ಕಾಲೇಜಿಗೆ ಆಗ್ರಹಿಸಿ ಪಂಜಿನ ಮೆರವಣಿಗೆ

• ಉದಯವಾಹಿನಿ, ವಿಜಯಪುರ





ಉದಯವಾಹಿನಿ ಚಿತ್ರ

ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ 31 ದಿನದಿಂದ ಅನಿರ್ದಿಷ್ಟ ಧರಣಿ ನಡೆದರೂ ಸ್ಪಂದಿಸದ ರಾಜ್ಯ ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿ ಸ್ಥಾಪನಾ ಸಮಿತಿಯ ಹೋರಾಟಗಾರರು ಪಂಜಿನ ಮೆರವಣಿಗೆ ನಡೆಸಿದರು.

ನಗರದ ಶಿವಾಜಿ ವೃತ್ತದಿಂದ ಆರಂಭವಾದ ಪಂಜಿನ ಮೆರವಣಿಗೆ ಗಾಂಧಿ ಚೌಕ್, ಸರಾಫ್ ಬಜಾರ್, ಹೆಡಗೆವಾರ್ ವೃತ್ತ, ಸಿದ್ದೇಶ್ವರ ದೇವಸ್ಥಾನ, ಗಾಂಧಿ ಚೌಕ್, ಬಸವೇಶ್ವರ ವೃತ್ತದ ಮೂಲಕ ಸಾಗಿ ಅಂಬೇಡ್ಕರ್ ವೃತ್ತದಲ್ಲಿರುವ ಧರಣಿ ಸ್ಥಳಕ್ಕೆ ತಲುಪಿ ಸಮಾಪ್ತಿಯಾಯಿತು. ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟಕ್ಕೆ ಒಂದು ತಿಂಗಳು ಕಳೆದರೂ , ಸರ್ಕಾರ ಕಣ್ಣು ಮುಚ್ಚಿ ಕೂತಂತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್, ಸಚಿವ ಶಿವಾನಂದ್ ಪಾಟೀಲ್, ಶಾಸಕರು ಸರ್ಕಾರದ ಗಮನ ಸೆಳೆಯುವಲ್ಲಿ ವಿಫಲವಾಗಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಹೋರಾಟ ಸಮಿತಿಯ ಸದಸ್ಯರಾದ ಭಗವಾನ್ ರೆಡ್ಡಿ, ಲಲಿತಾ ಬಿಜ್ಜರಗಿ, ಲಕ್ಷ್ಮಣ್ ಕಂಬಾಗಿ, ಗಿರೀಶ್ ಕಲಘಟಗಿ, ಭೋಗೇಶ್ ಸೋಲಾಪುರ್, ಜಗದೇವ್ ಸೂರ್ಯವಂಶಿ, ಸಿದ್ದರಾಮ್ ಹಲ್ಲೂರ್ ಇದ್ದರು.

## ಮುಲ್ಲಾಮಾರಿ ನದಿಯ ರಭಸಕ್ಕೆ 2 ಎತ್ತು ಒಂದು ಹಸು ಕೊಚ್ಚಿ ಹೋಗಿ ಸಾವು

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕನಕಪುರ ಗ್ರಾಮದ ರೈತ ವೀರಶೆಟ್ಟಿ ಉಳ್ಳಾಗಡ್ಡಿ ಅವರಿಗೆ ಸೆರಿದ ಎರಡು ಎತ್ತು ಒಂದು ಹಸು ಮುಲ್ಲಾಮಾರಿ ನದಿಯ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋದ ಘಟನೆ ಮಂಗಳವಾರ ಬೆಳಿಗ್ಗೆ ಜಾವ ನಡೆದಿದೆ. ತಾಲ್ಲೂಕಿನಾದ್ಯಂತ ಧಾರಾಕಾರವಾಗಿ ಮಳೆ ಸುರಿದಿದೆ ಹಾಗೂ ನಾಗರಾಳ ಜಲಾಶಯ ಸುತ್ತಮುತ್ತಲಿನ ಪ್ರದೇಶ ಹೆಚ್ಚು ಮಳೆ ಆಗಿರುವುದರಿಂದ ಮುಲ್ಲಾಮಾರಿ ನದಿಗೆ ರಾತ್ರಿ 600ಕ್ಯೂಸೆಕ್ ನೀರು ಹೊರ ಬಿಟ್ಟಿದ್ದು ಇಷ್ಟು ಪ್ರಮಾಣದ ನೀರಿನಿಂದ ಯಾವುದೇ ಹಾನಿಯಾಗಲ್ಲ ಎಂದು ನಾಗರಾಳ ಜಲಾಶಯ ಜೆಇ ವಿನಾಯಕ ಚವ್ಹಾಣ ತಿಳಿಸಿದ್ದಾರೆ.

ಕನಕಪುರ ಬ್ರಿಜ್ಡ್ ಕಂ.ಬ್ಯಾರೇಜ್ ಹತ್ತಿರ ಎರಡು



ಉದಯವಾಹಿನಿ ಚಿತ್ರ

ಎತ್ತುಗಳು ಸಾವನೋಪ್ಪಿವೆ ಎತ್ತುಗಳಿಗೆ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು ರೈತನಿಗೆ ಪರಿಹಾರ ನೀಡಲು ಆಪತ್ತು ನಿಧಿಯಲ್ಲಿ ದಾಖಲಿಸಿದ್ದು ಪರಿಹಾರ ದೊರಕುತ್ತದೆ ಆದರೆ ಹಸು ಇನ್ನು ಪತ್ತೆಯಾಗಿಲ್ಲ,ಪತ್ತೆಯಾದನಂತರ ಪ್ರಕ್ರಿಯೆ ನಡೆಸಿ ವರದಿ ಮಾಡಲಾಗುವುದು ಎಂದು ಪಶು ವೈದ್ಯಕೀಯ ಅಧಿಕಾರಿ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಬಡ ರೈತ ವೀರಶೆಟ್ಟಿ ಉಳ್ಳಾಗಡ್ಡಿ ಅವರಿಗೆ ಸೇರಿದ ಎರಡು ಎತ್ತು ಒಂದು ಹಸು ಮುಲ್ಲಾಮಾರಿ ನದಿಯ ನೀರಿನ ರಭಸಕ್ಕೆ ಕೊಚ್ಚಿಕೊಂಡು ಹೋಗಿವೆ, ಇದರಿಂದ ಎತ್ತುಗಳು ಕಳೆದುಕೊಂಡು ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ, ಹಾಗೂ ಈ ವರ್ಷ ಜಮೀನಿನಲ್ಲಿ ಬೆಳೆ ಸಹ ನಷ್ಟವಾಗಿದ್ದು ಇದರಿಂದ ರೈತ ತುಂಬಾ ಕಷ್ಟದಲ್ಲಿದ್ದು ರೈತನಿಗೆ ಸುಮಾರು 1.50ಲಕ್ಷ ದಷ್ಟು ನಷ್ಟವಾಗದ್ದು ಅಧಿಕಾರಿಗಳು ಜನಪ್ರತಿನಿಧಿಗಳು ಗಮನಹರಿಸಿ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥ ಶ್ರೀಧರ ವಗ್ಗಿ ಸರ್ಕಾರಕ್ಕೆ ಒತ್ತಾಯಿಸಿದರು.

# ಆರ್ಥಿಕತೆಯ ಸಂಕಷ್ಟಕ್ಕೆ ಡ್ರಗ್ಸ್ ಆಯುಧ: ಆಂಜನೇಯ ರೆಡ್ಡಿ

## ಭಾರತದ ಆರ್ಥಿಕತೆಯನ್ನು ಹಾಳು ಮಾಡಲು ಡ್ರಗ್ಸ್ ಎಂಬ ಆಯುಧವನ್ನು ಕೆಲ ಮುಂದುವರಿದ ದೇಶಗಳು ಉಪಯೋಗ ಮಾಡುತ್ತಿವೆ

• ಉದಯವಾಹಿನಿ, ಪುತ್ತೂರು

ಭಾರತದ ಆರ್ಥಿಕತೆಯನ್ನು ಹಾಳು ಮಾಡಲು ಡ್ರಗ್ಸ್ ಎಂಬ ಆಯುಧವನ್ನು ಕೆಲ ಮುಂದುವರಿದ ದೇಶಗಳು ಉಪಯೋಗ ಮಾಡುತ್ತಿವೆ. ಸಮಾಜದಲ್ಲಿ ನಡೆಯುವ ಸಂಘರ್ಷಗಳಲ್ಲಿ ಡ್ರಗ್ಸ್ ಪ್ರಮುಖಪಾತ್ರ ವಹಿಸುತ್ತಿದೆ.

ಹಾಗಾಗಿ ಡ್ರಗ್ಸ್ ಎಂಬ ವಿಷದ ಬಗ್ಗೆ ಜನಸಾಮಾನ್ಯರಿಗೂ ಅರಿವು ಮೂಡಿಸುವ ಕೆಲಸವಾಗಬೇಕು. ಇದು ಕುಟುಂಬಕ್ಕೆ ಅನ್ನ ನೀಡುವ ತಾಯಿಯ ಮೂಲಕ ಆರಂಭವಾಗಬೇಕು ಎಂದು ಪುತ್ತೂರು ನಗರಠಾಣೆಯ ಉಪನಿರೀಕ್ಷಕ ಆಂಜನೇಯ ರೆಡ್ಡಿ ಅಭಿಪ್ರಾಯಪಟ್ಟರು.

ಜನಶಿಕ್ಷಣ ಟ್ರಸ್ಟ್ ಮಹಿಳಾ ಸಾಂತ್ವನ ಕೇಂದ್ರ ಪುತ್ತೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾ.ಪಂ., ತಾಲ್ಲೂಕು ಸಂಜೀವಿನಿ ಒಕ್ಕೂಟ, ಸುಗ್ರಾಮ ಜಾಗೃತಿ ವೇದಿಕೆ ಸಹಯೋಗದಲ್ಲಿ ತಾಲ್ಲೂಕು ಪಂಚಾಯತ್ ತರಬೇತಿ ಸಭಾಂಗಣದಲ್ಲಿ ನಡೆದ 'ಸಮುದಾಯದತ್ತ ಸಾಂತ್ವನ ಅಭಿಯಾನ'- ಕಸಮುಕ್ತ, ನಶೆಮುಕ್ತ, ಹಿಂಸಾಮುಕ್ತ ಸಮಾಜದ ನಿರ್ಮಾಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭಯೋತ್ಪಾದಕರಂತೆ ಡ್ರಗ್ಸ್ ಕೂಡಾ ಅತ್ಯಂತ ಅಪಾಯಕಾರಿಯಾಗಿದೆ. ಸಮಾಜದ ಸುರಕ್ಷತೆ ಹಾಗೂ ಸಾಮಾಜಿಕವಾದ ಬದಲಾವಣೆಗೆ ವಿಶೇಷವಾಗಿ ಮಹಿಳೆಯರು ಜಾಗೃತವಾಗಬೇಕು. ಬುದ್ಧಿಜೀವಿಗಳ ಊರಾಗಿರುವ ದ.ಕ ಜಿಲ್ಲೆಯಲ್ಲಿಯೂ ಸೈಬರ್ ಕ್ರೈಂ ಹೆಚ್ಚಾಗುತ್ತಿದೆ. ಓರ್ವ ಟೀಚರ್ 5 ಲಕ್ಷ , ಓರ್ವ ವೈದ್ಯರೇ ರೂ.90 ಲಕ್ಷ ಕಳೆದುಕೊಂಡಿರುವುದು ಜಿಲ್ಲೆಯಲ್ಲಿ ನಡೆದಿದೆ. ಯಾವುದೇ ಸಂದರ್ಭದಲ್ಲಿ ಬ್ಯಾಂಕ್‌ಗಳ ಹೆಸರಲ್ಲಿ ಕರೆಬಂದಾಗ ವಂಚನೆಗೆ ಒಳಗಾಗದೆ ಬ್ಯಾಂಕಿನಲ್ಲಿಯೇ ಹೋಗಿ ವಿಚಾರಿಸಬೇಕು ಎಂದ ಅವರು ಮನೆಯಲ್ಲಿರುವ ಫ್ರಿಜ್ ರೋಗಗಳ ಮೂಲವಾಗಿದೆ ಈ ಬಗ್ಗೆ ಮಹಿಳೆಯರು ಜಾಗೃತರಾಗಬೇಕು ಎಂದರು.

ಎಲ್ಲಾ ಕ್ಷೇತ್ರದಲ್ಲಿಯೂ ದ.ಕ ಜಿಲ್ಲೆಯ ಮಂದಿ ಮುಂಚೂಣಿಯ ಸಾಧಕರಾಗಿದ್ದಾರೆ. ಆದರೆ ಸರ್ಕಾರಿ ಕೆಲಸ ಪಡೆದುಕೊಳ್ಳುವಲ್ಲಿ ಮಾತ್ರ ಮುಂದೆ ಬರುತ್ತಿಲ್ಲ. ಪೊಲೀಸ್ ಇಲಾಖೆಯಲ್ಲಿ ಜಿಲ್ಲೆಯ ಜನ ಇಲ್ಲವೇ ಇಲ್ಲ ಎಂಬಂತಾಗಿದೆ. ಹಾಗಾಗಿ ಒಬ್ಬ ಮಗನನ್ನು ಕೃಷಿಕನಾಗಿ ಮಾಡಿ. ಇನ್ನೋರ್ವ ಮಗನನ್ನು ಪೊಲೀಸ್ ಅಧಿಕಾರಿಯನ್ನಾಗಿ ಮಾಡಿ. ಆಗ ನಮ್ಮ ರಕ್ಷಣೆ ಮಾಡುವ ಇಲಾಖೆಯಲ್ಲಿ ನಮ್ಮವರೇ ಇರುವಂತಾಗುತ್ತದೆ. -ಆಂಜನೇಯ ರೆಡ್ಡಿ





ಉದಯವಾಹಿನಿ ಚಿತ್ರ

**ಸಮುದಾಯದತ್ತ ಸಾಂತ್ವನ ಅಭಿಯಾನ**

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ ಮಾತನಾಡಿ, ಸಮಾಜದಿಂದ ಸಾಕಷ್ಟು ಪಡೆದುಕೊಳ್ಳುವ ನಾವು ಸಮಾಜಕ್ಕಾಗಿ ನೀಡುವುದು ಕಡಿಮೆಯಾಗಿದೆ. ನಮ್ಮ ಬದುಕಿನ ರೀತಿಯಲ್ಲಿ ಬದಲಾವಣೆ ಆಗಬೇಕಾಗಿದೆ. ಇದರಿಂದ ಸ್ವಸ್ಥ ಸಮಾಜದ ಪರಿಕಲ್ಪನೆಗೆ ಅರ್ಥಪೂರ್ಣ ಬೆಂಬಲ ದೊರೆಯುವಂತಾಗುತ್ತದೆ ಎಂದರು.

ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕ ಹಾಗೂ ಮಾಜಿ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಮಾತನಾಡಿ, ನಮ್ಮ ಅಂತರಂಗ ಶುದ್ದಿಯಾದಾಗ ಮಾತ್ರ ಮನೋಸ್ಥಿತಿ ಬದಲಾಗುತ್ತದೆ. ಮನೋಸ್ಥಿತಿಯ ಬದಲಾವಣೆಯೊಂದಿಗೆ ಮನೆಯ ಸ್ಥಿತಿಯೂ ಬದಲಾಗುತ್ತದೆ. ಈ ಚಿಂತನೆ ಮನುಷ್ಯತ್ವ ರೂಪಿಸುವಲ್ಲಿ ಸಹಕಾರಿಯಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಸ್ವಚ್ಛತಾ ಸ್ವಯಂ ಘೋಷಣಾ ಪತ್ರ ಬಿಡುಗಡೆಗೊಳಿಸಲಾಯಿತು. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಕುರಿತು ಅಶ್ವಿನಿ, ಕಾನೂನು ನೆರವು ಕುರಿತು ರಾಜೇಶ್ವರಿ ಅವರು ಮಾಹಿತಿ ನೀಡಿದರು.

ಭಾರತ ಮತ್ತು ಪಾಕಿಸ್ತಾನದ ನಡುವೆ ಯಾವುದೇ ಯುದ್ಧ ನಡೆಯೋದಿಲ್ಲ. ಇದು ಬಹಳ, ಬಹಳ ಒಳ್ಳೆಯ ವಿಷಯ

# ಅಮೆರಿಕದಲ್ಲಿ ದೀಪಾವಳಿ ಆಚರಿಸಿದ ಅಧ್ಯಕ್ಷ ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್ ಡಿಸಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶ್ವೇತಭವನದಲ್ಲಿ ದೀಪಾವಳಿ ಆಚರಣೆಯಲ್ಲಿ ಪಾಲ್ಗೊಂಡು, ಭಾರತದ ಜನತೆಗೆ ಮತ್ತು ಭಾರತೀಯ ಅಮೆರಿಕನ್ನರಿಗೆ ಹಬ್ಬಕ್ಕೆ ಶುಭಾಷಯ ಕೋರಿದರು. ಜೊತೆಗೆ ಪ್ರಧಾನಿ ಮೋದಿಯವರನ್ನು ಶ್ರೇಷ್ಠ ವ್ಯಕ್ತಿ ಮತ್ತು ಒಳ್ಳೆಯ ಸ್ನೇಹಿತ ಎಂದು ಕೊಂಡಾಡಾಡಿದರು.

ಭಾರತದಲ್ಲಿ ದೀಪಾವಳಿ ಹಬ್ಬದ ಸಂಭ್ರಮ ಮನೆ ಮಾಡಿದೆ. ಆ ಬೆನ್ನಲ್ಲೇ ಅಮೆರಿಕದ ಶ್ವೇತಭವನದಲ್ಲೂ ಅಮೆರಿಕ ಅಧ್ಯಕ್ಷ ಟ್ರಂಪ್ ದೀಪಕ್ಕೆ ಕ್ಯಾಂಡಲ್‌ನಿಂದ ಬೆಂಕಿ ಹಚ್ಚಿ ದೀಪ ಬೆಳಗಿದರು. ಆನಂತರ ಸುದ್ದಿಗೋಷ್ಠಿ ನಡೆಸಿ, ಭಾರತೀಯರಿಗೆ ಹಬ್ಬದ ಶುಭಾಷಯ ತಿಳಿಸಿದರು. ಪ್ರಧಾನಿ ಮೋದಿಯವರ ಬಳಿ ಮಾತನಾಡಿದ ಬಗ್ಗೆ ತಿಳಿಸಿದರು. ಚೀನಾಗೆ ಸುಂಕ ವಿಧಿಸಿದ ಬಗ್ಗೆಯೂ ಮಾಹಿತಿ ನೀಡಿದರು.

ಮೋದಿಗೆ ಕರೆ ಮಾಡಿದ್ದೆ ಇಷ್ಟೆಲ್ಲ ಮಾತನಾಡಿದ್ವಿ ಭಾರತದ ಜನತೆಗೆ ದೀಪಾವಳಿ ಹಬ್ಬದ ಹೃತ್ಪೂರ್ವಕ ಶುಭಾಶಯಗಳು. ನಾನು ನಿಮ್ಮ ಪ್ರಧಾನ ಮಂತ್ರಿ ಮೋದಿಯವರೊಂದಿಗೆ ಮಾತನಾಡಿದೆ. ನಮ್ಮ ಸಂಭಾಷಣೆ ಬಹಳ ಉತ್ತಮವಾಗಿತ್ತು. ನಾವು ವ್ಯಾಪಾರದ ಬಗ್ಗೆ ಮಾತನಾಡಿದೆವು. ಆ ಬಗ್ಗೆ ಅವರು ಬಹಳ ಆಸಕ್ತಿ ಹೊಂದಿದ್ದಾರೆ. ಸ್ವಲ್ಪ ಸಮಯದ ಹಿಂದೆ, ನಾವು ಪಾಕಿಸ್ತಾನದೊಂದಿಗೆ ಯಾವುದೇ ಯುದ್ಧ ಬೇಡ ಎಂದು ಮಾತನಾಡಿ ಕೊಂಡಿದ್ದೆವು.



**ಮೋದಿ ಒಬ್ಬ ಮಹಾನ್ ವ್ಯಕ್ತಿ, ಅವರು ನನಗೆ ಒಬ್ಬ ಉತ್ತಮ ಸ್ನೇಹಿತ**

**ದೀಪ ಬೆಳಗಿಸುವುದು ನಾವು ಕತ್ತಲೆಯ ಮೇಲೆ ಬೆಳಕಿನ ವಿಜಯದ ನಂಬಿಕೆಯ ಸಂಕೇತವಾಗಿ ದೀಪವನ್ನು ಬೆಳಗುತ್ತೇವೆ... ಇದು ಅಜ್ಞಾನದ ಮೇಲೆ ಜ್ಞಾನ ಮತ್ತು ಕೆಡುಕಿನ ಮೇಲೆ ಒಳ್ಳೆಯತನದ ವಿಜಯ. ದೀಪಾವಳಿಯ ಸಮಯದಲ್ಲಿ, ಸಂಭ್ರಮಿಸುವವರು ಶತ್ರುಗಳನ್ನು ಸೋಲಿಸಿದ, ಅಡೆತಡೆಗಳನ್ನು ನಿವಾರಿಸಿದ ಮತ್ತು ಬಂಧಿತರನ್ನು ಬಿಡುಗಡೆ ಮಾಡಿದ ಪ್ರಾಚೀನ ಕಥೆಗಳನ್ನು ಸ್ಮರಿಸಲಾಗುತ್ತದೆ. ಬುದ್ಧಿವಂತಿಕೆಯ ಮಾರ್ಗವನ್ನು ಹುಡುಕಲು, ಶ್ರದ್ಧೆಯಿಂದ ಕೆಲಸ ಮಾಡಲು ದೀಪ ಜ್ವಾಲೆ ನೆನಪಿಸುತ್ತದೆ ಎಂದು ಹೇಳಿದರು.**

- **ಭಾರತೀಯರಿಗೆ ದೀಪಾವಳಿ ಹಬ್ಬಕ್ಕೆ ಶುಭಾಷಯ ಕೋರಿದ ಡೊನಾಲ್ಡ್ ಟ್ರಂಪ್**
- **ಚೀನಾ ಮೇಲೆ ನವೆಂಬರ್ 1 ರಿಂದ ಶೇ.155 ರಷ್ಟು ಸುಂಕ ವಿಧಿಸಿದ ಟ್ರಂಪ್**
- **ಮೋದಿಗೆ ಕರೆ ಮಾಡಿ ವ್ಯಾಪಾರದ ಬಗ್ಗೆ ಮಾತನಾಡಿದೆ ಎಂದ ಅಮೆರಿಕ ಅಧ್ಯಕ್ಷ**

**ಭಾರತೀಯರಿಗೆ ಹಬ್ಬದ ಶುಭಾಷಯ**

ಈ ನಮ್ಮ ಸಂಭಾಷಣೆಯಲ್ಲಿ ವ್ಯಾಪಾರದ ಬಗ್ಗೆಯೂ ಸೇರಿತ್ತು. ಭಾರತ ಮತ್ತು ಪಾಕಿಸ್ತಾನದ ನಡುವೆ ಯಾವುದೇ ಯುದ್ಧ ನಡೆಯೋದಿಲ್ಲ. ಇದು ಬಹಳ, ಬಹಳ ಒಳ್ಳೆಯ ವಿಷಯ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿದರು. ಯುರೋಪಿಯನ್ ಯೂನಿಯನ್, ಜಪಾನ್ ಮತ್ತು ದಕ್ಷಿಣ ಕೊರಿಯಾದೊಂದಿಗೆ ಉತ್ತಮ ಒಪ್ಪಂದಗಳನ್ನು ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. ಈ ಸುಂಕಗಳು ರಾಷ್ಟ್ರೀಯ ಭದ್ರತೆಗೆ ಮುಖ್ಯ. ಸುಂಕಗಳ ಮೂಲಕ ಅಮೆರಿಕಕ್ಕೆ ನೂರಾರು ಬಿಲಿಯನ್, ಟ್ರಿಲಿಯನ್ ಡಾಲರ್‌ಗಳಷ್ಟು ಹಣ ಬರುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ. ಈ ಹಣವನ್ನು ಬಳಸಿ ಅಮೆರಿಕದ ಸಾಲವನ್ನು ತೀರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

**ಚೀನಾ ಮೇಲೆ ಶೇ.155ರಷ್ಟು ಸುಂಕ**

**ಈ ಮಧ್ಯೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಚೀನಾ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವ ಬಗ್ಗೆ ಮಾತನಾಡಿದ್ದಾರೆ. ನವೆಂಬರ್ 1 ರಿಂದ ಚೀನಾದ ಮೇಲೆ ಶೇಕಡಾ 155ರಷ್ಟು ಸುಂಕ ವಿಧಿಸಲಾಗುವುದು. ಇದು ಚೀನಾಗೆ ತಡೆಯಲು ಸಾಧ್ಯವಿಲ್ಲ. ಚೀನಾ ಮತ್ತು ಇತರ ದೇಶಗಳು ಅಮೆರಿಕಾವನ್ನು ದುರುಪಯೋಗಪಡಿಸಿಕೊಂಡಿವೆ ಎಂದು ಟ್ರಂಪ್ ಆರೋಪಿಸಿದ್ದಾರೆ.**

## ಎಐ ದೋಷ ದುರಸ್ತಿ ಅಗತ್ಯ: ಡೆಮಿಸ್

**ನವದೆಹಲಿ:** ಗೂಗಲ್ ಡೀಪ್ ಮೈಂಡ್ ಸಿಇಒ ಡೆಮಿಸ್ ಹಸಾಬಿಸ್ ಕೃತಕ ಬುದ್ಧಿಮತ್ತೆಯ ನಿರ್ಣಾಯಕ ದೋಷದ ಬಗ್ಗೆ ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ.

ಗೂಗಲ್ ಫಾರ್ ಡೆವಲಪರ್ಸ್ ಪಾಡ್ ಕ್ಯಾಸ್ಟ್ ನಲ್ಲಿ ಮಾತನಾಡಿದ ಅವರು, ಅತ್ಯಂತ ಸುಧಾರಿತ ಎಐ ವ್ಯವಸ್ಥೆಗಳು ಸಹ ದೊಡ್ಡ ಸವಾಲುಗಳನ್ನು ನಿಭಾಯಿಸಬಹುದು. ಆದರೆ ಪ್ರಾಥಮಿಕ ಶಾಲಾ ಸಮಸ್ಯೆಗಳಲ್ಲಿ ವಿಫಲವಾಗುತ್ತವೆ ಎಂದು ಹಸಾಬಿಸ್ ಬಹಿರಂಗಪಡಿಸಿದ್ದಾರೆ. ಕೃತಕ ಸಾಮಾನ್ಯ ಬುದ್ಧಿಮತ್ತೆ ತಲುಪುವ ಮೊದಲು ಈ ದುರ್ಬಲತೆಯನ್ನು ಸರಿಪಡಿಸಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಸರಾಸರಿ ವ್ಯಕ್ತಿಗೆ ವ್ಯವಸ್ಥೆಯಲ್ಲಿ ಕ್ಷುಲ್ಲಕ ದೋಷವನ್ನು ಕಂಡುಹಿಡಿಯುವುದು ಅಷ್ಟು ಸುಲಭವಲ್ಲ ಎಂದು ಹೇಳಿರುವ ಹಸಾಬಿಸ್, ಡೀಪ್ ಥಿಂಕ್‌ನೊಂದಿಗೆ ವರ್ಧಿಸಲಾದ ಗೂಗಲ್‌ನ ಜೆಮಿನಿ ಮಾದರಿಗಳು ಅಂತಾರಾಷ್ಟ್ರೀಯ ಗಣಿತದ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕಗಳನ್ನು ಗೆಲ್ಲಬಹುದು ಆದರೆ ಪ್ರೌಢಶಾಲಾ ಗಣಿತದಲ್ಲಿ ಇನ್ನೂ ಸರಳ ತಪ್ಪುಗಳನ್ನು ಮಾಡುತ್ತವೆ ಎಂಬುದನ್ನು ಬಿಂಬಿಸಿದ್ದಾರೆ. ಪ್ರಸ್ತುತ ಎಐ ಅನ್ನು ಅಸಮ ಬುದ್ಧಿವಂತಿಕೆ ಅಥವಾ ಜಾಗ್ಡ್ ಬುದ್ಧಿವಂತಿಕೆ ಎಂದು ಹಸಾಬಿಸ್ ವಿವರಿಸಿದ್ದಾರೆ. ಕೆಲವು ಆಯಾಮಗಳಲ್ಲಿ ಅದ್ಭುತವಾಗಿ ಉತ್ಕೃಷ್ಟವಾಗಿದೆ ಮತ್ತು ಇತರರಲ್ಲಿ ಸುಲಭವಾಗಿ ಬಹಿರಂಗಗೊಳ್ಳುತ್ತದೆ. ಈ ನಿರೂಪಣೆಯು ಗೂಗಲ್ ಸಿಇಒ ಸುಂದರ್ ಪಿಚೈ ಅವರ ''ಎಜೆಐ ಎಂಬ ಪದವನ್ನು ಪ್ರತಿಧ್ವನಿಸುತ್ತದೆ.

ಈ ಅಸಮಂಜಸತೆಯನ್ನು ಪರಿಹರಿಸಲು ಡೇಟಾ ಮತ್ತು ಕಂಪ್ಯೂಟಿಂಗ್ ಶಕ್ತಿಯನ್ನು ಹೆಚ್ಚಿಸುವುದಕ್ಕಿಂತ ಹೆಚ್ಚಿನದು ಅಗತ್ಯವಿದೆ ಎಂದು ಡೀಪ್ ಮೈಂಡ್ ಮುಖ್ಯಸ್ಥರು ಒತ್ತಿ ಹೇಳಿದ್ದಾರೆ. ''ಸ್ಮರಣೆಯಲ್ಲಿ ತಾರ್ಕಿಕತೆ ಮತ್ತು ಯೋಜನೆಯಲ್ಲಿ ಕೆಲವು ಕಾಣೆಯಾದ ಸಾಮರ್ಥ್ಯಗಳನ್ನು ಇನ್ನೂ ಭೇದಿಸಬೇಕಾಗಿದೆ ಎಂದು ಅವರು ವಿವರಿಸಿದ್ದಾರೆ. ಎಐ ಸಾಮರ್ಥ್ಯಗಳು ಮತ್ತು ದೌರ್ಬಲ್ಯಗಳನ್ನು ನಿಖರವಾಗಿ ನಕ್ಷೆ ಮಾಡಲು ಉತ್ತಮ ಪರೀಕ್ಷಾ ವಿಧಾನಗಳು ಮತ್ತು ಹೊಸ, ಕಠಿಣ ಮಾನದಂಡಗಳಿಗೆ'' ಕರೆ ನೀಡಿದ್ದಾರೆ.

## ಕೆನಾಡದೊಂದಿಗೆ ಭಾರತ ಮುಕ್ತ ವ್ಯಾಪಾರ ಮಾಡಲು ಸಿದ್ದ


**ಒಟ್ಟಾವ:** ಹರ್ದೀಪ್ ಸಿಂಗ್ ಜಿಜ್ಜರ್ ಹತ್ಯೆ ಬಳಿಕ ಭಾರತ ಹಾಗೂ ಕೆನಾಡ ನಡುವಿನ ಸಂಬಂಧ ಹಳಸಿತ್ತು. ಆದರೆ ಈಗ ಆ ಸಂಬಂಧ ಮರಳಿ ಬೆಸೆಯುವ ಸಮಯ ಬಂದ ಹಾಗೇ ಕಾಣುತ್ತಿದೆ. ಇದಕ್ಕೆ ಕಾರಣ ಕೆನಾಡದಲ್ಲಿರುವ ಭಾರತದ ಹೈ ಕಮಿಷನರ್ ದಿನೇಶ್ ಪಟ್ನಾಯಕ್ ನೀಡಿರುವ ಆ ಒಂದು ಹೇಳಿಕೆ. ಹೌದು ಭಾರತ ಮತ್ತೆ ಕೆನಾಡದೊಂದಿಗೆ ಸಂಬಂಧ ಬೆಳೆಸಲು ಮುಂದಾಗಿದೆ, ಆದರೆ ಈ ಜವಾಬ್ದಾರಿಯನ್ನು ಭಾರತ ಕೆನಡಾದ ಮೇಲೆ ಹಾಕಿದೆ.

ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಸಂದರ್ಶನ ನೀಡಿರುವ ಭಾರತದ ಹೈ ಕಮಿಷನರ್ ದಿನೇಶ್ ಪಟ್ನಾಯಕ್ ಕೆನಾಡದ ನಡುವೆ ವ್ಯಾಪಾರ ಸಂಬಂಧಗಳನ್ನು ಪುನರಾಂಭಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾ ಮಾತನಾಡಿ ಕೆನಡಾ ನಮ್ಮೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಸಿದ್ಧವಾಗಿದ್ದರೆ ನಾವು ಕೆನಡಾದೊಂದಿಗೆ ಚರ್ಚಿಸುತ್ತೇವೆ, ಕೆನಡಾದೊಂದಿಗೆ ಕೆಲಸ ಮಾಡಲು ನಾವು ಹೆಚ್ಚು ಸಂತೋಷಪಡುತ್ತೇವೆ. ಆದರೆ ಅದನ್ನು ನಿಲ್ಲಿಸಿದ್ದು ಕೆನಡಿಯನ್ನರು, ಅದನ್ನು ಪುನರಾರಂಭಿಸುವುದು ಕೆನಡಿಯನ್ನರಿಗೆ ಬಿಟ್ಟದ್ದು ಎಂದಿದ್ದಾರೆ. ಈ ಕುರಿತು ಮಾತನಾಡಿ ಕೆನಡಾ ನಮ್ಮ ಒಳ್ಳೆಯ ಸ್ನೇಹಿತರಲ್ಲಿ ಒಂದಾಗಿತ್ತು. ಆದ್ದರಿಂದ ನಾವು ಕೆನಡಾದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳದಿರಲು ಯಾವುದೇ ಕಾರಣವಿಲ್ಲ. ಆದರೆ ಕೆನಡಾ ಏನು ಬಯಸುತ್ತದೆ ಎಂಬುದನ್ನು ನಿರ್ಧರಿಸುವುದು ಕೆನಡಾಗೇ ಬಿಟ್ಟದ್ದು ಎಂದು ಹೇಳಿದ್ದಾರೆ.

**ಕೆನಡಾ ಭಾರತದ ವಿಶ್ವಾಸಾರ್ಹ ಪೂರೈಕೆದಾರನೇ?**

ಇನ್ನೂ ಸಂದರ್ಶನದಲ್ಲಿ ಕಳೆದ ಎರಡು ವರ್ಷಗಳಲ್ಲಿ ಆದ ಬೆಳವಣಿಗೆಗಳು ಎರಡು ರಾಷ್ಟ್ರಗಳ ಸಂಬಂಧಗಳ ಮೇಲೆ ಕರಿನೆರಳು ಬೀರುತ್ತಿವೆ. ಇಂತಹ ಸಮಯದಲ್ಲಿ ಭಾರತವು ಕೆನಡಾವನ್ನು ವಿಶ್ವಾಸಾರ್ಹ ಪೂರೈಕೆದಾರ ಎಂದು ಪರಿಗಣಿಸುತ್ತದೆಯೇ ಎಂದು ಪ್ರಶ್ನೆ ಕೇಳಿದಾಗ, ಪಟ್ನಾಯಕ್ ಉತ್ತರಿಸಿ ಕೆನಡಾ ವಿಶ್ವಾಸಾರ್ಹ ಪೂರೈಕೆದಾರನಾಗಬಹುದೆಂದು ಭಾರತ ಯಾವಾಗಲೂ ನಂಬಿತ್ತು, ಆದರೆ ಹಿಂದಿನ ಕೆಲವು ಘಟನೆಗಳು ಅದನ್ನು ಮರುಪರಿಶೀಲಿಸುವಂತೆ ಮಾಡಿತು ಎಂದು ಹೇಳಿದ್ದಾರೆ. ಹಾಗಾಗಿ, ಇನ್ನೂ ಇಲ್ಲ, ಎಂದು ಹೇಳುತ್ತಾ ಆರ್ಥಿಕ ಚಟುವಟಿಕೆಗಳಿಗೆ ಬಾಹ್ಯ ಅಂಶಗಳು ಅಡ್ಡಿಯಾಗುವ ಪರಿಸ್ಥಿತಿಯನ್ನು ನಾವು ಬಯಸುವುದಿಲ್ಲವಾದ್ದರಿಂದ, ನೀವು ವಿಶ್ವಾಸಾರ್ಹ ಪೂರೈಕೆದಾರರಾಗಬೇಕೆಂದು ನಾವು ಬಯಸುತ್ತೇವೆ ಎಂದರು. ಕೇವಲ ಒಂದು ವ್ಯಕ್ತಿಯಿಂದ ಸಂಬಂಧ ನಾಶವಾಗಲು ಸಾಧ್ಯವಿಲ್ಲ ಎಂದರು.

- **ಕೆನಾಡದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಭರವಸೆಯಲ್ಲಿ ಭಾರತ**
- **ಈ ವಿಷಯದಲ್ಲಿ ಕೆನಾಡಾದ ನಿಲುವುಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದ ದಿನೇಶ್ ಪಟ್ನಾಯಕ್**
- **ಕೇವಲ ಒಂದು ವ್ಯಕ್ತಿಯಿಂದ 2 ದೇಶಗಳ ನಡುವಿನ ಸಂಬಂಧ ನಾಶವಾಗಲು ಸಾಧ್ಯವಿಲ್ಲ**



## ಕೇರಳಕ್ಕೆ ಮುರ್ಮು: ವ್ಯಾಪಕ ಭದ್ರತೆ

**ತಿರುವನಂತಪುರಂ:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ನಾಲ್ಕು ದಿನಗಳ ಕಾಲ ಕೇರಳ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಭೇಟಿ ನೀಡಲಿರುವ ಪ್ರದೇಶಗಳಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಸಂಜೆ ವೇಳೆಗೆ ಕೇರಳಕ್ಕೆ ಆಗಮಿಸಲಿರುವ ಅವರು, ವಿಮಾನ ನಿಲ್ದಾಣದಿಂದ ರಾಷ್ಟ್ರಪತಿ ಅವರು ಹೋಗುವ ಮಾರ್ಗದಲ್ಲಿ ಮಧ್ಯಾಹ್ನ 3 ಗಂಟೆಯಿಂದ ನಗರದಾದ್ಯಂತ ಸಂಚಾರ ನಿರ್ಬಂಧಗಳು ಮತ್ತು ನಿಯಮಗಳು ಜಾರಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿದೆ.



ಪತ್ತನಂತಿಟ್ಟುವಿನಲ್ಲಿರುವ ಶಬರಿಮಲೆ ದೇವಾಲಯಕ್ಕೆ ಭೇಟಿ ನೀಡಲಿರುವ ರಾಷ್ಟ್ರಪತಿ, ಅಯ್ಯಪ್ಪ ಸ್ವಾಮಿ ದರ್ಶನ ಪಡೆಯಲಿದ್ದಾರೆ. ಜೊತೆಗೆ ಆರತಿ ಸೇವೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮನದ ಹಿನ್ನೆಲೆಯಲ್ಲಿ ಸಕಲ ಸಿದ್ಧತೆ ನಡೆಸಲಾಗಿದೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಡಿಬಿ) ತಿಳಿಸಿದೆ. ಅಯ್ಯಪ್ಪ ಸ್ವಾಮಿ ದೇಗುಲ ಸಾಗುವ ರಸ್ತೆ ಮತ್ತು ಸಾಂಪ್ರದಾಯಿಕ ಚಾರಣ ಮಾರ್ಗದ ಮೂಲಕ ಅವರು ಸನ್ನಿಧಾನಂ ತಲುಪಲಿದ್ದಾರೆ. ಭದ್ರತಾ ವ್ಯವಸ್ಥೆಗಳನ್ನು ಈಗಾಗಲೇ ಬಲಪಡಿಸಲಾಗಿದ್ದು, ಇತ್ತೀಚೆಗೆ ಬೆಂಗಾವಲು ಪಡೆ ಚಲನೆಯ ಪೂರ್ವಾಭ್ಯಾಸ ನಡೆಸಲಾಗಿದೆ ಎಂದು ಟಿಡಿಬಿ ಅಧಿಕಾರಿಗಳು ತಿಳಿಸಿದ್ದಾರೆ. ಪೂರ್ವ ಭದ್ರತಾ ಪರಿಶೀಲನೆಯಲ್ಲಿ ಕ್ಷಿಪ್ರ ಕಾರ್ಯ ಪಡೆ, ಅಡ್ವಾನ್ಸ್ ಪೆಟ್ರೋಲಿಂಗ್ ತಂಡ, ಶ್ವಾನ ದಳ, ರಕ್ಷಣಾ ತಂಡ ಸೇರಿದಂತೆ ಭದ್ರತಾ ತಂಡಗಳು ಸಮಗ್ರ ತಪಾಸಣೆ ನಡೆಸಿವೆ.

ರಾಷ್ಟ್ರಪತಿ ಅವರು ಬೆಳಗ್ಗೆ 10 ಗಂಟೆ ಸುಮಾರಿಗೆ ನೀಲಕ್ಕಲ್ ಹೆಲಿಪ್ಯಾಡ್‌ಗೆ ಆಗಮಿಸಿ, ರಸ್ತೆ ಮೂಲಕ ಪಂಬಾಗೆ ತೆರಳಲಿದ್ದಾರೆ. ಪಂಬಾದಿಂದ ಸನ್ನಿಧಾನಕ್ಕೆ ವಿಶೇಷ ಹೊಸ ಗೂರ್ಖಾ ತುರ್ತು ವಾಹನದಲ್ಲಿ ಆರು ಬೆಂಗಾವಲು ವಾಹನಗಳೊಂದಿಗೆ ಪ್ರಯಾಣಿಸಲಿದ್ದಾರೆ. ಪೂಜಾ ದರ್ಶನದ ನಂತರ, ಅವರು ಸನ್ನಿಧಾನಂ ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ. ಬಳಿಕ ಸಂಜೆ ಹೆಲಿಕಾಪ್ಟರ್ ಮೂಲಕ ತಿರುವನಂತಪುರಂಗೆ ಹಿಂತಿರುಗಲಿದ್ದಾರೆ. ಅಕ್ಟೋಬರ್ 24ರಂದು ಎರ್ನಾಕುಲಂನ ಸೇಂಟ್ ತೆರೇಸಾ ಕಾಲೇಜಿನ ಶತಮಾನೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ದೆಹಲಿಗೆ ಹಿಂತಿರುಗಲಿದ್ದಾರೆ.

**ಸಮಾರೋಪ ಸಮಾರಂಭ**

**ಗುರುವಾರ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ನಂತರ ವರ್ಕಳದ ಶಿವಗಿರಿ ಮಠದಲ್ಲಿ ಶ್ರೀನಾರಾಯಣ ಗುರುಗಳ ಮಹಾ ಸಮಾಧಿ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೊಟ್ಟಾಯಂ ಜಿಲ್ಲೆಯ ಪಾಲಾದ ಸೇಂಟ್ ಥಾಮಸ್ ಕಾಲೇಜಿನ ಪ್ಲಾಟಿನಂ ಜುಬಿಲಿ ಆಚರಣೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.**

## ಕಣಿವೆಯಲ್ಲಿ ವಿದೇಶಿ ಉಗ್ರರ ಹಾವಳಿ

**ಜಮ್ಮು:** ಕೆಲವು ವರ್ಷಗಳ ಹಿಂದೆ ಭಯೋತ್ಪಾದನೆಯಿಂದ ಬಹುತೇಕ ಮುಕ್ತವಾಗಿದ್ದ ಜಮ್ಮು ಪ್ರದೇಶದಲ್ಲಿ ಇದೀಗ ಮತ್ತೆ ಆತಂಕದ ವಾತಾವರಣ ನಿರ್ಮಾಣವಾಗಿದೆ. ಭದ್ರತಾ ಪಡೆಗಳು ಪ್ರತಿದಿನ ಸುಮಾರು 120 ಉಗ್ರ ನಿಗ್ರಹ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದು, ಇದು ಅಲ್ಲಿನ ಭದ್ರತಾ ಸವಾಲುಗಳನ್ನು ಎತ್ತಿ ತೋರಿಸುತ್ತಿದೆ. ಜಮ್ಮು ವಲಯದಲ್ಲಿ ವಿದೇಶಿ ಉಗ್ರರ ಇರುವಿಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ನಾವು ಜಮ್ಮು ವಲಯದಲ್ಲಿ ಪ್ರತಿದಿನ 120 ಉಗ್ರ ನಿಗ್ರಹ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಿದ್ದೇವೆ. ಇದು ನಮ್ಮ ದೈನಂದಿನ ಕಾರ್ಯಚಟುವಟಿಕೆಯ ಭಾಗವಾಗಿದೆ. ಖಚಿತ ಮಾಹಿತಿ ಆಧಾರಿತ ಅಥವಾ ಶಂಕೆ ಮೇಲಿನ ಕಾರ್ಯಾಚರಣೆಗಳು ನಿರಂತರವಾಗಿ ನಡೆಯುತ್ತಿವೆ, ಎಂದು ಜಮ್ಮು ಪೊಲೀಸ್ ಮುಖ್ಯಸ್ಥ ಭೀಮ್ ಸೇನ್ ತುಟಿ ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ವಿದೇಶಿ ಉಗ್ರರು ಭದ್ರತೆಗೆ ದೊಡ್ಡ ಸವಾಲಾಗಿದ್ದಾರೆ. ಅವರನ್ನು ಮಟ್ಟಹಾಕಲು ಗಡಿ ಭದ್ರತಾ ವ್ಯವಸ್ಥೆ ಮತ್ತು ಉಗ್ರ ನಿಗ್ರಹ ದಳವನ್ನು ಬಲಪಡಿಸಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಅಡಗಿರುವ ಈ ಉಗ್ರರನ್ನು ಸದ್ಯದಲ್ಲೇ ಸದೆಬಡಿಯಲಾಗುವುದು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

- **ಜಮ್ಮು ವಲಯದಲ್ಲಿ ಪ್ರತಿದಿನ 120 ಉಗ್ರ ನಿಗ್ರಹ ಕಾರ್ಯಾಚರಣೆ**
- **ಕಳೆದ ನಾಲ್ಕು ವರ್ಷಗಳಿಂದ ವಿದೇಶಿ ಉಗ್ರರ ಹಾವಳಿ ಹೆಚ್ಚಳ**
- **ಅರಣ್ಯ ಪ್ರದೇಶಗಳಲ್ಲಿ ಅಡಗಿರುವ ಉಗ್ರರೇ ಪ್ರಮುಖ ಭದ್ರತಾ ಸವಾಲು**
- **ಸೇನೆ , ನಾಗರಿಕರ ಮೇಲೆ ನಿರಂತರ ದಾಳಿ**



## ಆರ್‌ಎಸ್‌ಎಸ್ ರೀತಿಯ ದೇಶಭಕ್ತ ಸಂಘಟನೆ ಹೊಂದಿರುವುದು ಭಾರತದ ಅದೃಷ್ಟ

**ಗೋರಖ್‌ಪುರ್:** ಇಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆರ್‌ಎಸ್‌ಎಸ್ ಒಂದು ಮಹಾನ್ ದೇಶಭಕ್ತ ಸಂಘಟನೆ ಎಂದು ಬಣ್ಣಿಸಿದ್ದಾರೆ.

ದೇಶಕ್ಕೆ ಆರ್‌ಎಸ್‌ಎಸ್ ನೀಡಿರುವ ಕೊಡುಗೆಗಳನ್ನು ಸ್ಮರಿಸಿರುವ ಯೋಗಿ ಆದಿತ್ಯನಾಥ್, ಒಂದು ಸಾಂಸ್ಕೃತಿಕ ಸಂಘಟನೆ ರಾಷ್ಟ್ರ ಪ್ರಥಮ ಧ್ಯೇಯದೊಂದಿಗೆ ಕೆಲಸ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದ್ದಾರೆ. ಇದೇ ವೇಳೆ ಯೋಗಿ ಆದಿತ್ಯನಾಥ್ ಅವರು ತಮ್ಮ ಮತ್ತು ಸಂಘದ ನಡುವಿನ ಸಂಬಂಧವನ್ನು ಮೆಲುಕು ಹಾಕಿದರು. ಇತ್ತೀಚಿಗೆ ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿ ಆರ್‌ಎಸ್‌ಎಸ್ ಸ್ಮೃತಿ ನಾಣ್ಯ ಬಿಡುಗಡೆ ಮಾಡಿದ್ದರು. ಯಾವುದೇ ಸರ್ಕಾರದ ಬೆಂಬಲವಿಲ್ಲದೆ ಮತ್ತು ಸ್ವಯಂಸೇವಕರ ಸಹಾಯದಿಂದ ರೂಪುಗೊಂಡ ಆರ್‌ಎಸ್‌ಎಸ್ ರೀತಿಯ ದೇಶಭಕ್ತ ಸಂಘಟನೆಯನ್ನು ಹೊಂದಿರುವುದು ಭಾರತದ ಅದೃಷ್ಟವಾಗಿದೆ.

ಆರ್‌ಎಸ್‌ಎಸ್ ಇಂದು ದೇಶದ ಮೂಲೆ ಮೂಲೆಯನ್ನು ವ್ಯಾಪಿಸಿದ್ದು, ಜನರಲ್ಲಿ ದೇಶಭಕ್ತಿಯನ್ನು ಬಡಿದೆಬ್ಬಿಸುತ್ತಿದೆ. ಇಂತಹ ಬಲಿಷ್ಠ ಸಂಘಟನೆ ಭಾರತವನ್ನು ಮತ್ತಷ್ಟು ಬಲಿಷ್ಠಗೊಳಿಸಲು ಶ್ರಮಿಸುತ್ತಿದೆ ಎಂದು ಯೋಗಿ ಆದಿತ್ಯನಾಥ ಹೇಳಿದರು. ಮುಂದುವರೆದು, ದೇಶದೊಳಗಿನ ನಕ್ಸಲೀಯ ಪ್ರದೇಶಗಳಲ್ಲಿ ಆರ್‌ಎಸ್‌ಎಸ್ ಯಾವುದೇ ಇತರ ಸರ್ಕಾರಕ್ಕಿಂತ ಉತ್ತಮವಾಗಿ ಕೆಲಸ ಮಾಡಿದೆ. ಆರ್‌ಎಸ್‌ಎಸ್ ಸ್ವಯಂಸೇವಕರೊಬ್ಬರು ಪ್ರಧಾನಿಯಾಗಿ ಭಾರತವನ್ನು ಮುನ್ನಡೆಸುವುದನ್ನು ಇಡೀ ಜಗತ್ತು ನೋಡುತ್ತಿದೆ. ಆರ್‌ಎಸ್‌ಎಸ್ ಭಾರತದ ಪ್ರತಿನಿಧಿಯಾಗಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಹೆಮ್ಮೆಯಿಂದ ನುಡಿದರು. 5 ರಿಂದ 7 ವರ್ಷಗಳ ಹಿಂದೆ, ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಇಂಡಿಯಾ ಬ್ಲಾಕ್ ಜೊತೆ ಸಂಬಂಧ ಹೊಂದಿರುವ ಜನರು, ನೀವು ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಿಸಲು ಸಾಧ್ಯವಾಗುತ್ತದೆಯೇ? ಎಂದು ಕೇಳುತ್ತಿದ್ದರು. ನಾವು ಮತ್ತು ಸಂಘದ ಸ್ವಯಂಸೇವಕರು ಅದನ್ನು ಖಂಡಿತವಾಗಿಯೂ ನಿರ್ಮಿಸುವುದಾಗಿ ಹೇಳುತ್ತಿದ್ದೇವು. ಅದು ಈಗ ನಿಜವಾಗಿದೆ ಎಂದು ಯೋಗಿ ಆದಿತ್ಯನಾಥ್ ಹೇಳಿದರು. ಆರ್‌ಎಸ್‌ಎಸ್ ಶತಮಾನೋತ್ಸವ ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ನುಸುಳುಕೋರತನದಿಂದ ದೇಶದ ಭದ್ರತೆಗೆ ಅಪಾಯ ಎಂದು ಎಚ್ಚರಿಸಿದ್ದರು.



**ಆರ್‌ಎಸ್‌ಎಸ್ ಸ್ಮೃತಿ ನಾಣ್ಯ ಬಿಡುಗಡೆ**

# ಜಪಾನ್‌ನ ನೂತನ ಪ್ರಧಾನಿಯಾಗಿ ಸಾನೇ ಟಕ್ಕೈಚಿ ಆಯ್ಕೆ

### ನಿಮ್ಮೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ: ಜಪಾನ್‌ನ ನೂತನ ಪ್ರಧಾನಿ ಸಾನೇ ಟಕ್ಕೈಚೆಗೆ ಮೋದಿ ಅಭಿನಂದನೆ

**ಟೋಕಿಯೋ:** ಜಪಾನ್ ಸಂಸತ್ತಿನ ಕೆಳಮನೆಯು ಸಾನೇ ಟಕ್ಕೈಚಿ ಅವರನ್ನು ಪ್ರಧಾನಿಯಾಗಿ ನೇಮಿಸಿದ ತಕ್ಷಣ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದನೆ ಸಲ್ಲಿಸಿದರು. ಭಾರತ ಮತ್ತು ಜಪಾನ್ ನಡುವಿನ ಸಂಬಂಧವನ್ನು ಬಲಪಡಿಸಲು ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿರುವುದಾಗಿ ತಿಳಿಸಿದರು. ಟಕ್ಕೈಚಿ ಅವರು ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿದ್ದಾರೆ. ಅವರು ಇಂದು ನಂತರ ಚಕ್ರವರ್ತಿ ನರುಹಿಟೊ ಅವರೊಂದಿಗೆ ಸಭೆ ನಡೆಸಿದ ನಂತರ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಜಪಾನ್‌ನ ಪ್ರಧಾನಿಯಾಗಿ ಆಯ್ಕೆಯಾದ ಸಾನೇ ಟಕ್ಕೈಚಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಭಾರತ-ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ನಿಮ್ಮೊಂದಿಗೆ ನಿಕಟವಾಗಿ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆ. ಇಂಡೋ-ಪೆಸಿಫಿಕ್ ಮತ್ತು ಅದರಾಚೆಗಿನ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ನಮ್ಮ ಆಳವಾದ ಸಂಬಂಧಗಳು ಅತ್ಯಗತ್ಯ, ಎಂದು ಮೋದಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

**ಚೀನಾದೊಂದಿಗೆ ಉದ್ವಿಗ್ನತೆ ಹೆಚ್ಚಿಸುವ ಸಾಧ್ಯತೆ:** ಚೀನಾದ ಬಗ್ಗೆ ಟಕ್ಕೈಚಿ ಅವರ ಕಠಿಣ ನಿಲುವು ಚೀನಾದೊಂದಿಗೆ ಉದ್ವಿಗ್ನತೆಯನ್ನು ಹೆಚ್ಚಿಸುವ ಸಾಧ್ಯತೆಯಿದೆ. ಯಾಸುಕನಿ ದೇವಾಲಯದೊಂದಿಗಿನ ಅವರ ಸಂಬಂಧವು ದಕ್ಷಿಣ ಕೊರಿಯಾದೊಂದಿಗಿನ ಅವರ ಸಂಬಂಧವನ್ನು ಸಂಕೀರ್ಣಗೊಳಿಸುವ ಸಾಧ್ಯತೆಯಿದೆ. ಜಪಾನ್ ಮತ್ತು ಕೊರಿಯಾ ದೇಶಗಳು 20 ನೇ ಶತಮಾನದಲ್ಲಿ ಜಪಾನ್ ಕೊರಿಯಾವನ್ನು ವಸಾಹತುವಾಗಿ ಆಳಿದ ಕಾರಣದಿಂದಾಗಿ ಉದ್ವಿಗ್ನ ಐತಿಹಾಸಿಕ ಸಂಬಂಧವನ್ನು ಹೊಂದಿವೆ. ಎರಡನೇ ಮಹಾಯುದ್ಧದಲ್ಲಿ ಸೋಲುವವರೆಗೂ ಈ ಆಳ್ವಿಕೆ ಮುಂದುವರೆಯಿತು. ಈ ಆಕ್ರಮಣದ ಸಮಯದಲ್ಲಿ ಜಪಾನ್ ಮಹಿಳೆಯರನ್ನು ಲೈಂಗಿಕ ಗುಲಾಮಗಿರಿಯಲ್ಲಿ ತೊಡಗಿಸುವುದು ಮತ್ತು ಜನರನ್ನು ಬಲವಂತದ ಕೂಲಿಗೆ ಸೇರಿಸುವುದು ಮುಂತಾದ ವ್ಯಾಪಕ ಕ್ರೌರ್ಯಗಳನ್ನು ಎಸಗಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಟಕ್ಕೈಚಿ ಅವರ ನೇಮಕವನ್ನು ಸ್ವಾಗತಿಸಿದ್ದಾರೆ ಮತ್ತು ಉಭಯ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸಲು ಉತ್ಸುಕರಾಗಿದ್ದಾರೆ. ಭಾರತ ಮತ್ತು ಜಪಾನ್ ನಡುವಿನ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆ ಇಂಡೋ-ಪೆಸಿಫಿಕ್ ಪ್ರದೇಶದ ಶಾಂತಿ ಮತ್ತು ಸ್ಥಿರತೆಗೆ ಅತ್ಯಗತ್ಯ ಎಂದು ಮೋದಿ ಹೇಳಿದ್ದಾರೆ. ಈ ಸಹಕಾರವು ಆರ್ಥಿಕ, ರಕ್ಷಣಾ ಮತ್ತು ಭದ್ರತಾ ಕ್ಷೇತ್ರಗಳಲ್ಲಿ ವಿಸ್ತರಿಸಿದೆ. ಜಪಾನ್‌ನ ಹೊಸ ಪ್ರಧಾನಿಯವರ ನೀತಿಗಳು ದೇಶದ ಭವಿಷ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಕಾದು ನೋಡಬೇಕಿದೆ. ಅವರ ಸಾಮಾಜಿಕ ಸಂಪ್ರದಾಯವಾದಿ ನಿಲುವುಗಳು ವಲಸೆ ಮತ್ತು ಸಾಮಾಜಿಕ ವಿಷಯಗಳಲ್ಲಿ ಬದಲಾವಣೆಗಳನ್ನು ತರಬಹುದು. ಅದೇ ಸಮಯದಲ್ಲಿ, ಚೀನಾದೊಂದಿಗಿನ ಅವರ ಕಠಿಣ ನಿಲುವು ಪ್ರಾದೇಶಿಕ ರಾಜಕೀಯದಲ್ಲಿ ಹೊಸ ಆಯಾಮಗಳನ್ನು ಸೇರಿಸಬಹುದು.

ದಕ್ಷಿಣ ಕೊರಿಯಾದೊಂದಿಗಿನ ಸಂಬಂಧವು ಸಹ ಅವರ ನೀತಿಗಳಿಂದ ಪ್ರಭಾವಿತವಾಗುವ ಸಾಧ್ಯತೆಯಿದೆ. ಒಟ್ಟಾರೆಯಾಗಿ, ಸಾನೇ ಟಕ್ಕೈಚಿ ಅವರ ಪ್ರಧಾನ ಮಂತ್ರಿತ್ವವು ಜಪಾನ್ ಮತ್ತು ಅದರ ಅಂತರರಾಷ್ಟ್ರೀಯ ಸಂಬಂಧಗಳಿಗೆ ಒಂದು ಹೊಸ ಅಧ್ಯಾಯವನ್ನು ತೆರೆಯುವ ನಿರೀಕ್ಷೆಯಿದೆ.

**ಭಾರತ ಮತ್ತು ಜಪಾನ್ ಪಾಲುದಾರತ್ವ**

**ಭಾರತ ಮತ್ತು ಜಪಾನ್ ಆರ್ಥಿಕ ಮತ್ತು ರಕ್ಷಣಾ ಕ್ಷೇತ್ರದಲ್ಲಿ ನಿಕಟ ಪಾಲುದಾರರಾಗಿವೆ. ಭಾರತದಲ್ಲಿ, ಜಪಾನ್ ಒಂದು ಪ್ರಮುಖ ಅಭಿವೃದ್ಧಿ ಪಾಲುದಾರನಾಗಿದ್ದು, ಹಲವಾರು ಮೂಲಸೌಕರ್ಯ ಯೋಜನೆಗಳಲ್ಲಿ ಭಾಗಿಯಾಗಿದೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ, ಉಭಯ ದೇಶಗಳು ಮುಕ್ತ ಮತ್ತು ಮುಕ್ತ ಪ್ರದೇಶದ ಬದ್ಧತೆಯ ಭಾಗವಾಗಿ ಮತ್ತು ಚೀನಾದ ಆಧಿಪತ್ಯದ ವಿನ್ಯಾಸಗಳನ್ನು ತಡೆಯುವ ನಿಟ್ಟಿನಲ್ಲಿ ದ್ವಿಪಕ್ಷೀಯವಾಗಿ ಮತ್ತು ಕ್ವಾಡ್‌ನಂತಹ ಬಹುಪಕ್ಷೀಯ ವೇದಿಕೆಗಳಲ್ಲಿ ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ.**

- **ಜಪಾನ್‌ನ ನೂತನ ಪ್ರಧಾನಿಯಾಗಿ ಸಾನೇ ಟಕ್ಕೈಚಿ ಆಯ್ಕೆ**
- **ಸಾನೇ ಟಕ್ಕೈಚಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ**
- **ಭಾರತ ಮತ್ತು ಜಪಾನ್ ನಡುವಿನ ಸಂಬಂಧವನ್ನು ಬಲಪಡಿಸಲು ಆಶಯ**



**ಟಕ್ಕೈಚಿ ನೂತನ ಪ್ರಧಾನಿ**

**ಜಪಾನ್‌ನ ಕೆಳಮನೆಯು 465 ಸದಸ್ಯರ ಸದನದಲ್ಲಿ 237 ಮತಗಳೊಂದಿಗೆ ಟಕ್ಕೈಚಿ ಅವರನ್ನು ಪ್ರಧಾನಿಯಾಗಿ ನೇಮಿಸಿತು. ಟಕ್ಕೈಚಿ ಅವರು ಜಪಾನ್‌ನ ಮೊದಲ ಮಹಿಳಾ ಪ್ರಧಾನಿಯಾಗಿದ್ದರೂ, ಅವರು ಸಾಮಾಜಿಕ ಸಂಪ್ರದಾಯವಾದಿಯಾಗಿದ್ದು, ಪ್ರಗತಿಪರ ಕಾರ್ಯಸೂಚಿಯನ್ನು ಅನುಸರಿಸುವ ನಿರೀಕ್ಷೆಯಿಲ್ಲ. ಬದಲಾಗಿ, ವಲಸೆ ಮತ್ತು ಸಾಮಾಜಿಕ ವಿಷಯಗಳಲ್ಲಿ ಜಪಾನ್ ಬಲಕ್ಕೆ ಸರಿಯುವ ನಿರೀಕ್ಷೆಯಿದೆ.**

## ಮಿನಿ ನ್ಯೂಸ್

### ಅಮೆರಿಕಾ ಮಾಜಿ ಅಧ್ಯಕ್ಷ ಬಿಡೆನ್‌ಗೆ ಪ್ರಾಸ್ಟೇಟ್ ಕ್ಯಾನ್ಸರ್ ಚಿಕಿತ್ಸೆ

**ವಾಷಿಂಗ್ಟನ್:** ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಾಜಿ ಅಧ್ಯಕ್ಷ ಜೋ ಬಿಡೆನ್ ಅವರಿಗೆ ಮೊದಲ ಸುತ್ತಿನ ವಿಕಿರಣ ಚಿಕಿತ್ಸೆಯನ್ನು ಪೂರ್ಣಗೊಳಿಸಿದ್ದಾರೆ ಎಂದು ವಕ್ತಾರರು ತಿಳಿಸಿದ್ದಾರೆ. ಬಿಡೆನ್ ಫಿಲಡೆಲ್ಫಿಯಾದ ಪೆನ್ ಮೆಡಿಸಿನ್ ರೇಡಿಯೇಶನ್ ಆಂಕೊಲಾಜಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸಹಾಯಕ ಕೆಲ್ಲಿ ಸ್ಕಲ್ಲಿ ಹೇಳಿದ್ದಾರೆ.

ಬಿಡೆನ್ ಅವರ ವಯಸ್ಸು, ಆರೋಗ್ಯ ಮತ್ತು ಮಾನಸಿಕ ಫಿಟ್‌ನೆಸ್ ಬಗ್ಗೆ ಕಳವಳಗಳ ನಡುವೆ ಕಳೆದ ಚುನಾವಣೆಯಲ್ಲ ಅಧಿಕಾರವನ್ನು ತೊರೆದಿದ್ದರು. ಮೇ ತಿಂಗಳಲ್ಲಿ, 82 ವರ್ಷದ ಬಿಡೆನ್ ಅವರಿಗೆ ಪ್ರಾಸ್ಟೇಟ್ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ ಮತ್ತು ಅದು ಅವರ ಮೂಳೆಗಳಿಗೆ ಹರಡಿದೆ ಎಂದು ಅಧ್ಯಕ್ಷೀಯ ಕಚೇರಿ ಘೋಷಿಸಿತು.

ರಿಪಬ್ಲಿಕನ್ ಡೊನಾಲ್ಡ್ ಟ್ರಂಪ್‌ವಿರುದ್ಧದ ಚುನಾವಣಾ ಚರ್ಚೆಯಲ್ಲಿ ನೇರ ಹೋರಾಟ ನಡೆಸಿದರೂ ಅವರು ಪರಾಭವಗೊಂಡಿದ್ದರು. ಗ್ಲೀಸನ್ ಸ್ಕೋರ್ ಬಳಸಿಕೊಂಡು ಪ್ರಾಸ್ಟೇಟ್ ಕ್ಯಾನ್ಸರ್‌ಗಳನ್ನು ಆಕ್ರಮಣಶೀಲತೆಗೆ ಶ್ರೇಣೀಕರಿಸಲಾಗುತ್ತದೆ. ಅಂಕಗಳು 6 ರಿಂದ 10 ರವರೆಗೆ ಇರುತ್ತವೆ, 8, 9 ಮತ್ತು 10 ಪ್ರಾಸ್ಟೇಟ್ ಕ್ಯಾನ್ಸರ್‌ಗಳು ಹೆಚ್ಚು ಆಕ್ರಮಣಕಾರಿಯಾಗಿ ವರ್ತಿಸುತ್ತವೆ.

ಬಿಡೆನ್ ಅವರ ಕಚೇರಿಯು ಅವರ ಅಂಕ 9 ಎಂದು ಹೇಳಿದ್ದು, ಇದು ಅವರ ಕ್ಯಾನ್ಸರ್ ಅತ್ಯಂತ ಆಕ್ರಮಣಕಾರಿ ಎಂದು ಸೂಚಿಸುತ್ತದೆ. ಕಳೆದ ತಿಂಗಳು, ಬಿಡೆನ್ ಅವರ ಹಣೆಯಿಂದ ಚರ್ಮದ ಕ್ಯಾನ್ಸರ್ ಗಾಯಗಳನ್ನು ತೆಗೆದುಹಾಕಲು ಶಸ್ತ್ರಚಿಕಿತ್ಸೆ ಮಾಡಲಾಯಿತು.

### ಮುಂಬೈನ ಬಹುಮಹಡಿ ವಸತಿ ಕಟ್ಟಡಕ್ಕೆ ಬೆಂಕಿ ಬಿದ್ದು ನಾಲ್ವರು ಸಾವು

**ಮುಂಬೈ:** ಕಳೆದ ರಾತ್ರಿ ನವಿ ಮುಂಬೈನ ಬಹುಮಹಡಿ ವಸತಿ ಕಟ್ಟಡದಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ. ವಾಶಿ ಪ್ರದೇಶದ ಸೆಕ್ಟರ್-14ರಲ್ಲಿರುವ ರಹೇಜಾ ರೆಸಿಡೆನ್ಸಿಯ ಎಂಜಿಎಂ ಕಾಂಪ್ಲೆಕ್ಸ್‌ನ 10ನೇ ಮಹಡಿಯ ಫ್ಲಾಟ್‌ವೊಂದರಲ್ಲಿ ರಾತ್ರಿ 12.30ರ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಇದು 11 ಮತ್ತು 12ನೇ ಮಹಡಿಗೂ ಹರಡಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆಯಲ್ಲಿ ಇಬ್ಬರು ಮಹಿಳೆಯರು, ಇಬ್ಬರು ಪುರುಷರು ಹಾಗೂ ಆರು ವರ್ಷದ ಬಾಲಕಿ ಸಾವನ್ನಪ್ಪಿದ್ದು, ಸುಮಾರು 10 ಮಂದಿ ಗಾಯಗೊಂಡಿದ್ದಾರೆ. ಸ್ಥಳಕ್ಕೆ ದಾವಿಸಿದ 8 ಅಗ್ನಿಶಾಮಕ ವಾಹನಗಳು ಮತ್ತು 40ಕ್ಕೂ ಹೆಚ್ಚು ಸಿಬ್ಬಂದಿ ಇಂದು ಮುಂಜಾನೆ 4 ಗಂಟೆವರೆಗೂ ಸತತ ಪ್ರಯತ್ನ ನಡೆಸಿ ಬೆಂಕಿಯನ್ನು ನಂದಿಸಿದ್ದಾರೆ.

ಬೆಂಕಿ ಹೊತ್ತಿಕೊಳ್ಳಲು ಕಾರಣ ತಿಳಿದುಬಂದಿಲ್ಲ. ಆದರೆ, ಪಟಾಕಿ ಹೊಡೆಯುವಾಗ ಬೆಂಕಿ ಕಿಡಿ ತಗುಲಿರುವ ಸಾಧ್ಯತೆಯಿದೆ ಎಂದು ಶಂಕಿಸಲಾಗಿದೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗಬಹುದೆಂಬ ಶಂಕೆ ವ್ಯಕ್ತವಾಗಿದೆ.

### ಬಿಹಾರ ಚುನಾವಣೆಗೆ ನಾಮಪತ್ರ ಸಲ್ಲಿಸಿದ ಬೆನ್ನಲ್ಲೇ ಆರ್‌ಜೆಡಿ ಅಭ್ಯರ್ಥಿ ಅರೆಸ್ಟ್

**ಸಸಾರಂ:** ಬಿಹಾರದ ಸಸಾರಂ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ ಕೂಡಲೇ ಆರ್‌ಜೆಡಿ ಅಭ್ಯರ್ಥಿ ಸತೇಂದ್ರ ಅವರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸತೇಂದ್ರ ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿಯಾಗಿರುವ ಹಿನ್ನೆಲೆ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದು, ನಾಮಪತ್ರ ಸಲ್ಲಿಕೆ ವೇಳೆ ಅವರೊಂದಿಗೆ ಆಗಮಿಸಿದ್ದ ಬೆಂಬಲಿಗರಿಗೆ ಈ ಕುರಿತು ಯಾವುದೇ ಮಾಹಿತಿ ಇರಲಿಲ್ಲ. ನಿನ್ನೆ ಸತೇಂದ್ರ ಬೆಂಬಲಿಗರೊಂದಿಗೆ ಸಸಾರಂ ಕ್ಷೇತ್ರದಿಂದ ನಾಮಪತ್ರ ಸಲ್ಲಿಕೆಗೆ ಆಗಮಿಸಿದರು. ಇದೇ ವೇಳೆ ಪೊಲೀಸರು ಜಾಮೀನು ರಹಿತ ವಾರಂಟ್‌ನೊಂದಿಗೆ ಪೊಲೀಸರು ಕೂಡ ಆಗಮಿಸಿದರು. ಬಳಿಕ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಿದ ಪೊಲೀಸರು, ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಸತೇಂದ್ರ ಅವರನ್ನು ಬಂಧಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

2004 ರಲ್ಲಿ ಗಹ್ವಾ ಜಿಲ್ಲೆಯ ಚಿರೌಂಜಿಯಾ ಮೋರ್ನಲ್ಲಿ ನಡೆದ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಸತೇಂದ್ರ ಆರೋಪಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬೆಳವಣಿಗೆ ಕುರಿತು ಮಾಹಿತಿ ನೀಡಿದ ಜಾರ್ಖಂಡ್‌ನ ಗಹ್ವಾದ ಸದರ್ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಸುನಿಲ್ ತಿವಾರಿ, 2018ರಲ್ಲಿ ಬ್ಯಾಂಕ್ ದರೋಡೆ ಪ್ರಕರಣದಲ್ಲಿ ಸತೇಂದ್ರ ವಿರುದ್ಧ ಶಾಶ್ವತ ವಾರಂಟ್ ಜಾರಿಯಾಗಿದೆ.

### ಭಾರತ-ಅಫ್ಘಾನಿಸ್ತಾನ ಮತ್ತಷ್ಟು ಹತ್ತಿರ

**ಹೊಸದಿಲ್ಲಿ:** ತಾಲಿಬಾನ್ ಜೊತೆಗಿನ ಒಪ್ಪಂದದ ಭಾಗವಾಗಿ ಮತ್ತು ಅಫ್ಘಾನಿಸ್ತಾನದೊಂದಿಗಿನ ದ್ವಿಪಕ್ಷೀಯ ಒಪ್ಪಂದವನ್ನು ಇನ್ನಷ್ಟು ಗಾಢವಾಗಿಸುವ ಉದ್ದೇಶದೊಂದಿಗೆ, ಕಾಬೂಲ್‌ನಲ್ಲಿರುವ ತನ್ನ ತಾಂತ್ರಿಕ ಕಾರ್ಯಾಚರಣೆಯನ್ನು ಪೂರ್ಣ ರಾಯಭಾರ ಕಚೇರಿಯ ಸ್ಥಾನಮಾನಕ್ಕೆ ಮೇಲ್ದರ್ಜೆಗೇರಿಸಲಾಗಿದೆ ಎಂದು ಭಾರತ ಘೋಷಿಸಿದೆ.

ಈ ಕುರಿತು ಮಾಹಿತಿ ನೀಡಿರುವ ಭಾರತದ ವಿದೇಶಾಂಗ ಸಚಿವಾಲಯ, ಭಾರತದ ವಿದೇಶಾಂಗ ಸಚಿವ ಮತ್ತು ತಾಲಿಬಾನ್ ವಿದೇಶಾಂಗ ಸಚಿವರ ಮಾತುಕತೆಯಲ್ಲಿ ಹೇಳಿದಂತೆ, ಕಾಬೂಲ್‌ನಲ್ಲಿರುವ ನಮ್ಮ ತಾಂತ್ರಿಕ ಮಿಷನ್ ಕಚೇರಿಯನ್ನು, ಪೂರ್ಣ ಪ್ರಮಾಣದ ರಾಯಭಾರ ಕಚೇರಿಯನ್ನಾಗಿ ತಕ್ಷಣವೇ ಮೇಲ್ದರ್ಜೆಗೇರಿಸಲಾಗುವುದು ಎಂದು ಸ್ಪಷ್ಟಪಡಿಸಿದೆ. ಇತ್ತೀಚಿಗೆ ತಾಲಿಬಾನ್ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಅವರು ಭಾರತ ಪ್ರವಾಸ ಕೈಗೊಂಡಿದ್ದರು. ಈ ವೇಳೆ ಭಾರತದ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಅವರು ಕಾಬೂಲ್‌ನಲ್ಲಿ ಪೂರ್ಣಪ್ರಮಾಣದ ರಾಯಭಾರ ಕಚೇರಿ ಸ್ಥಾಪನೆಯ ಭರವಸೆ ನೀಡಿದ್ದರು. ಅದರಂತೆ ಇದೀಗ ಕಾಬೂಲ್‌ನಲ್ಲಿರುವ ತಾಂತ್ರಿಕ ಮಿಷನ್ ಕಚೇರಿಯ ಸ್ವರೂಪ ಬದಲಾಗಲಿದೆ.

2021ರಲ್ಲಿ ಅಫ್ಘಾನಿಸ್ತಾನದ ಆಡಳಿತವನ್ನು ತಾಲಿಬಾನ್ ತನ್ನ ತೆಕ್ಕೆಗೆ ತೆಗೆದುಕೊಂಡ ಬಳಿಕ, ಭಾರತವು 2022ರಲ್ಲಿ ಕಾಬೂಲ್‌ನಲ್ಲಿದ್ದ ತನ್ನ ರಾಯಭಾರ ಕಚೇರಿಯನ್ನು ಮುಚ್ಚಿತ್ತು. ತನ್ನೆಲ್ಲಾ ರಾಯಭಾರ ಸಿಬ್ಬಂದಿಯನ್ನು ಹಿಂದಕ್ಕೆ ಕರೆಸಿಕೊಂಡಿದ್ದ ಭಾರತ, ಕಾಬೂಲ್‌ನಲ್ಲಿ ತಾಂತ್ರಿಕ ಮಿಷನ್ ಕಾರ್ಯಾಚರಣೆ ನಡೆಸಲಿದೆ ಎಂದು ಹೇಳಿತ್ತು.

ಆದರೀಗ ಬದಲಾದ ಜಾಗತಿಕ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ಭಾರತ-ಅಫ್ಘಾನಿಸ್ತಾನ ರಾಜತಾಂತ್ರಿಕ ಸಂಬಂಧ ಮರುಸ್ಥಾಪನೆ ಆಗಿದ್ದು, ಕಾಬೂಲ್‌ನಲ್ಲಿ ಭಾರತದ ಪೂರ್ಣ ಪ್ರಮಾಣದ ರಾಯಭಾರ ಕಚೇರಿ ಕಾರ್ಯಾರಂಭ ಮಾಡಿರುವುದು ಇದಕ್ಕೆ ಸಾಕ್ಷಿ ಒದಗಿಸಿದೆ. ಕಾಬೂಲ್‌ನಲ್ಲಿ ರಾಯಭಾರ ಕಚೇರಿ ಸ್ಥಾಪನೆಯು, ಪರಸ್ಪರ ಆಸಕ್ತಿಯ ಎಲ್ಲಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಭಾರತದ ಸಂಕಲ್ಪದ ಭಾಗವಾಗಿದೆ. ಮೇಲ್ದರ್ಜೆಗೇರಿಸಲಾದ ರಾಯಭಾರ ಕಚೇರಿಯು ಅಫ್ಘಾನಿಸ್ತಾನದ ಸಮಗ್ರ ಅಭಿವೃದ್ಧಿ, ಮಾನವೀಯ ನೆರವು ಮತ್ತು ಸಾಮರ್ಥ್ಯ ವೃದ್ಧಿ ಉಪಕ್ರಮಗಳಿಗೆ, ಅಫ್ಘಾನ್ ಸಮಾಜದ ಆದ್ಯತೆಗಳು ಮತ್ತು ಆಕಾಂಕ್ಷೆಗಳಿಗೆ ಅನುಗುಣವಾಗಿ ಭಾರತದ ಕೊಡುಗೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.


# ಇಂಗ್ಲಿಷ್‌ನಲ್ಲಿ ತೆರೆ ಕಾಣಲು ಸಿದ್ಧವಾದ ಕಾಂತಾರ

**ಏಕಕಾಲದಲ್ಲಿ ಏಳು ಭಾಷೆಯಲ್ಲಿ ರಿಲೀಸ್**

ದೇಶವ್ಯಾಪಿ ಅಬ್ಬರಿಸುತ್ತಿರುವ ಕಾಂತಾರ ಚಾಪ್ಟರ್ 1 ಚಿತ್ರ ಇದೀಗ ಒಂದು ಹೆಜ್ಜೆ ಮುಂದಿಟ್ಟಿದೆ. ಚಿತ್ರಕ್ಕೆ ಬಹು ಬೇಡಿಕೆ ಇರುವ ಕಾರಣ ಇಂಗ್ಲಿಷ್ ವರ್ಷನ್‌ನಲ್ಲಿ ಕಾಂತಾರ ಚಿತ್ರವನ್ನ ಹೊಂಬಾಳೆ ಫಿಲಂಸ್ ತಯಾರು ಮಾಡಿದೆ. ಈ ಮೂಲಕ ಚಂದನವನದ ಕೀರ್ತಿಯನ್ನು ವಿಶ್ವವ್ಯಾಪಿ ತಲುಪಿಸಲು ಹೊಂಬಾಳೆ ಫಿಲಂಸ್ ಸಜ್ಜಾಗಿದೆ. ಇದೇ ಅಕ್ಟೋಬರ್ 31ಕ್ಕೆ ಚಿತ್ರ ರಿಲೀಸ್ ಆಗಲಿದೆ. ಈ ವಿಚಾರವನ್ನ ಹೊಂಬಾಳೆ ಫಿಲಂಸ್ ಅಧಿಕೃತವಾಗಿ ಘೋಷಣೆ ಮಾಡಿದೆ. ಈ ಮೂಲಕ ತುಳು ನೆಲದ ಕತೆ, ಮನರಂಜನೆಯನ್ನು ವಿದೇಶಿಗರಿಗೂ ತಲುಪಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕಾಂತಾರ ಚಿತ್ರ ವಿಶ್ವದೆಲ್ಲೆಡೆ ಏಕಕಾಲದಲ್ಲಿ ಏಳು ಭಾಷೆಯಲ್ಲಿ ರಿಲೀಸ್ ಆಗಿತ್ತು. ಇಂಗ್ಲಿಷ್ ಸಬ್‌ಟೈಟಲ್ ಹೊಂದಿತ್ತು. ಆದರೀಗ ಇಂಗ್ಲಿಷ್ ಭಾಷೆಯಲ್ಲೇ ಡಬ್ ಆಗಿ ವಿಶ್ವದೆಲ್ಲೆಡೆ ರಿಲೀಸ್ ಆಗುತ್ತಿದೆ. ವಿಶೇಷವೆಂದರೆ ಮೂಲ ಚಿತ್ರ 148 ನಿಮಿಷಗಳ ಅವಧಿಯನ್ನ ಹೊಂದಿತ್ತು.




ಇದೀಗ ಇಂಗ್ಲಿಷ್ ವರ್ಷನ್ 02 ಗಂಟೆ 14 ನಿಮಿಷ 45 ಸೆಕೆಂಡ್ ಅವಧಿಯನ್ನು ಹೊಂದಿದೆ. ಇದರಿಂದ ಸಿನಿಮಾದ ಕೆಲ ದೃಶ್ಯಕ್ಕೆ ಕತ್ತರಿ ಪ್ರಯೋಗವಾಗಿರುವುದು ಕಾಣುತ್ತಿದೆ. ಈ ಬಗ್ಗೆ ಚಿತ್ರತಂಡ ಅಧಿಕೃತವಾಗಿ ಹೇಳಬೇಕಿದೆಯಷ್ಟೆ. ಒಟ್ಟಿನಲ್ಲಿ ಕಾಂತಾರ ಇಂಗ್ಲಿಷ್‌ನಲ್ಲೂ ಬರುತ್ತಿರುವುದು ಚಂದನವನಕ್ಕೆ ವಿಶ್ವಮಟ್ಟದಲ್ಲಿ ದೊಡ್ಡ ಮಟ್ಟದ ಮಾರ್ಕೇಟ್ ಓಪನ್ ಆಗೋದಕ್ಕೆ ದಾರಿ ಮಾಡಿ ಕೊಟ್ಟಂತಾಗಿದೆ.



# ಹೇ ಪ್ರಭು ಸಿನಿಮಾದ 'ಎದ್ದೇಳು ಈಗ' ಸಾಂಗ್ ರಿಲೀಸ್

**ಕೇವಲ ಒಂದು ಸಿನಿಮಾ ಅಲ್ಲ**

ವೆಂಕಟ್ ಭಾರದ್ವಾಜ್ ನಿರ್ದೇಶನದಲ್ಲಿ ಮೂಡಿ ಬಂದಿರುವ 'ಹೇ ಪ್ರಭು' ಸಿನಿಮಾದ ಮೊದಲ ಸಿಂಗಲ್ ಎದ್ದೇಳೋ ಈಗ ಬಿಡುಗಡೆಯಾಗಿದೆ. ರಿಲೀಸ್ ಆಗಿ ಕೆಲವೇ ಗಂಟೆಗಳಲ್ಲಿ ಪ್ರೇಕ್ಷಕರ ಹೃದಯವನ್ನು ಗೆದ್ದಿದೆ. ಸ್ಫೂರ್ತಿದಾಯಕ ಸಾಹಿತ್ಯ, ಶಕ್ತಿಯುತ ಗಾಯನ ಮತ್ತು ಮನಸ್ಸು ಕುದಿಯಿಸುವ ಸಂಗೀತದೊಂದಿಗೆ ಈ ಹಾಡು ಸಂಗೀತ ಪ್ರಿಯರು ಹಾಗೂ ಚಿತ್ರಾಭಿಮಾನಿಗಳ ಹೃದಯದಲ್ಲಿ ಭಾವುಕ ಸ್ಪಂದನ ಮೂಡಿಸಿದೆ. ತೇಜಸ್ವಿ ಹರಿದಾಸ್ ಅವರ ಆತ್ಮಸ್ಪರ್ಶಿ ಕಂಠದಲ್ಲಿ ಮೂಡಿ ಬಂದಿರುವ ಈ ಹಾಡು ಆಸೆ, ಆತ್ಮವಿಶ್ವಾಸ ಮತ್ತು ಹೋರಾಟದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಚಿತ್ರ ಸಾಹಿತಿ ಅರಸು ಅಂತಾರೆ ಅವರ ಹೃದಯಮುಟ್ಟುವ ಸಾಹಿತ್ಯ ಮತ್ತು ಡ್ಯಾನಿ ಆಂಡರ್ಸನ್ ಅವರ ಉತ್ಸಾಹಭರಿತ ಸಂಗೀತ ಸಂಯೋಜನೆ ಜೊತೆಯಾಗಿ ''ಎದ್ದೇಳೋ ಈಗ'' ಅನ್ನು ಇತ್ತೀಚಿನ ಕನ್ನಡ ಚಲನಚಿತ್ರ ಲೋಕದ ಅತ್ಯಂತ ಪ್ರೇರಣಾದಾಯಕ ಹಾಡುಗಳಲ್ಲಿ ಒಂದಾಗಿ ರೂಪಿಸಿದೆ. ಹೇ ಪ್ರಭು ಸಿನಿಮಾ ತನ್ನ ಬಿಡುಗಡೆಯತ್ತ ಹೆಜ್ಜೆ ಇಡುತ್ತಿದೆ. ಚಿತ್ರದಲ್ಲಿ ಜಯ ವರ್ಧನ್, ಸಂಹಿತಾ ವಿನ್ಯ, ಯಮುನಾ ಶ್ರೀನಿಧಿ, ಗಜಾನನ ಹೆಗ್ಡೆ, ಲಕ್ಷ್ಮಣ ಶಿವಶಂಕರ, ಡಾ. ಪ್ರಮೋದ್, ಹರಿ ಧನಂಜಯ ಸೇರಿದಂತೆ ಹಲವಾರು ಪ್ರತಿಭಾವಂತ ಕಲಾವಿದರು ನಟಿಸಿದ್ದಾರೆ. ನಿಜ ಘಟನೆಯ ಆಧಾರದ ಮೇಲೆ ನಿರ್ಮಿತವಾದ ಹೇ ಪ್ರಭು ಸಿನಿಮಾ ಅಮೃತ ಫಿಲ್ಮ್ ಸೆಂಟರ್ ಹಾಗೂ



24 ರೀಲ್ಸ್ ಸಂಸ್ಥೆಗಳ ಸಂಯುಕ್ತ ನಿರ್ಮಾಣ. ಚಿತ್ರವನ್ನು ಡಾ. ಸುಧಾಕರ್ ಶೆಟ್ಟಿ ಪ್ರಸ್ತುತಪಡಿಸಿದ್ದಾರೆ. ಸಂಗೀತದಾಚೆಗೂ ಹೋಗಿ, ಈ ಚಿತ್ರವು ಒಂದು ಜಾಗತಿಕ ಸಮಸ್ಯೆಯನ್ನು ಧೈರ್ಯವಾಗಿ ಸ್ಪರ್ಶಿಸುತ್ತದೆ ಅಂದ್ರೆ, ಔಷಧ ಕಂಪನಿಗಳ ನಿಯಂತ್ರಣರಹಿತ ಪ್ರಭಾವ ಮತ್ತು ಲಾಲಸೆ. ಇತ್ತೀಚಿನ ಮಕ್ಕಳ ಕೆಮ್ಮಿನ ಸಿರಪ್ ವಿವಾದದಂತಹ ಘಟನೆಗಳ ಬೆಳಕಿನಲ್ಲಿ, ಹೇ ಪ್ರಭು ಸಂಸ್ಥೆಗಳ ಲಾಭದಾಸೆ, ನೈತಿಕತೆ ಮತ್ತು ಸಾಮಾನ್ಯ ಜನರ ಬದುಕಿನ ಮೇಲೆ ಅದರ ಪರಿಣಾಮವನ್ನು ತೆರೆದಿಡುತ್ತದೆ.

ತನ್ನ ಪ್ರೇರಣಾದಾಯಕ ಸಂದೇಶ ಮತ್ತು ಮನಮುಟ್ಟುವ ಸಂಗೀತದೊಂದಿಗೆ, ಹೇ ಪ್ರಭು ಕೇವಲ ಒಂದು ಸಿನಿಮಾ ಅಲ್ಲ ಅದು ಎದ್ದೇಳುವ, ನಂಬುವ ಮತ್ತು ಜಯಿಸುವ ಕರೆ.

# ಹಾಸನಾಂಬೆ ದರ್ಶನ ಪಡೆದ ಧ್ರುವ ಸರ್ಜಾ




ಗೋಲ್ಡನ್ ಪಾಸ್ ಪಡೆದು, ಸರತಿ ಸಾಲಿನಲ್ಲಿ ನಿಂತು ನಟ ಧ್ರುವ ಸರ್ಜಾ ಹಾಸನಾಂಬೆ ದರ್ಶನ ಪಡೆದಿದ್ದಾರೆ. ತಂದೆ ಹಾಗೂ ಸ್ನೇಹಿತರ ಜೊತೆ ಹಾಸನಾಂಬ ದೇವಾಲಯಕ್ಕೆ ಆಗಮಿಸಿದ ಧ್ರುವ ಸರ್ಜಾ, ಸರತಿ ಸಾಲಿನಲ್ಲಿ ಬಂದು ದೇವಸ್ಥಾನದ ಬಳಿ ಬರುತ್ತಿದ್ದಂತೆ ಸರತಿ ಸಾಲಿನಿಂದ ಹೊರಬಂದು ನಂತರ ಮುಖ್ಯದ್ವಾರದ ಮೂಲಕ ದೇವಸ್ಥಾನಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದಿದ್ದಾರೆ. ಇನ್ನು ಹಾಸನಾಂಬ ದೇವಿ ಸಾರ್ವಜನಿಕ ದರ್ಶನಕ್ಕೆ ಇಂದು ಹದಿಮೂರು ಹಾಗೂ ಕಡೆಯ ದಿನವಾಗಿದ್ದು, ಹಿಂದೆಂದೂ ಕಾಣದಷ್ಟು ಭಕ್ತಗಣ ಆಗಮಿಸಿದೆ.

ಬೆಳಗ್ಗೆ 6 ಗಂಟೆಯಿಂದ ದೇವಿ ದರ್ಶನ ಆರಂಭವಾಗಿದ್ದು, ಸರತಿ ಸಾಲುಗಳಲ್ಲಿ ನಿಂತು ಸಹಸ್ರಾರು ಭಕ್ತರು ದೇವಿ ದರ್ಶನ ಪಡೆಯುತ್ತಿದ್ದಾರೆ. ಧರ್ಮ ದರ್ಶನ, 1000 ರೂ., 300 ರೂ. ಹಾಗೂ ವಿಶೇಷ ದರ್ಶನದ ಸರತಿ ಸಾಲುಗಳಲ್ಲಿ ಜನಜಂಗುಳಿ ಉಂಟಾಗಿದೆ. ಇಂದು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 7 ಗಂಟೆಯವರೆಗೆ ಭಕ್ತರು ಅಪಾರ ಸಂಖ್ಯೆಯಲ್ಲಿ ಆಗಮಿಸಿ ನಿರಂತರವಾಗಿ ದೇವಿಯ ದರ್ಶನ ಪಡೆದಿದ್ದಾರೆ. ಇಂದು ರಾತ್ರಿ 7ರಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಗರ್ಭಗುಡಿಯ ಬಾಗಿಲು ಬಂದ್ ಆಗಿರಲಿದೆ. ರಾತ್ರಿ 7 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೆ ದೇವಿ ದರ್ಶನ ಇರುವುದಿಲ್ಲ.

# ದೀಪಾವಳಿಗೆ ಮುದ್ದು ಮಗಳ ಫೇಸ್ ರಿವೀಲ್ ಮಾಡಿದ ದೀಪಿಕಾ ಪಡುಕೋಣೆ

ಬಿಟೌನ್ ಸ್ಟಾರ್‌ಜೋಡಿ ದೀಪಿಕಾ ಪಡುಕೋಣೆ ಹಾಗೂ ರಣ್‌ವೀರ್ ಸಿಂಗ್ ದಂಪತಿಯ ಮುದ್ದು ಮಗಳ ಹೆಸರು ದುವಾ. ಮಗು ಜನಿಸಿ ಒಂದು ವರ್ಷ ಕಳೆದಿದೆ.

ಆದರೆ ಇದುವರೆಗೂ ಮಗುವಿನ ಮುಖವನ್ನ ದಂಪತಿ ಎಲ್ಲಿಯೂ ರಿವೀಲ್ ಮಾಡಿರಲಿಲ್ಲ. ಇದೀಗ ಪ್ರಥಮ ಬಾರಿ ದೀಪಾವಳಿ ಹಬ್ಬಕ್ಕೆ ಶುಭಾಶಯ ಕೋರಿ ಪೋಸ್ಟ್ ಹಾಕುವ ಮೂಲಕ ಮಗಳ ಫೋಟೋವನ್ನ ರಿವೀಲ್ ಮಾಡಿದ್ದಾರೆ. ಇದೀಗ ದೀಪಿಕಾ ತಮ್ಮ ಮೆಟರ್ನಿಟಿ ಸಮಯವನ್ನ ಮುಗಿಸಿ ಅಭಿನಯಕ್ಕೆ ಮರಳಿದ್ದಾರೆ. ಮಗುವಿನ ಆರೈಕೆಯಲ್ಲಿ ಬ್ಯುಸಿಯಾಗಿದ್ದ ದೀಪಿಕಾ ಅಮ್ಮನಾದ ಬಳಿಕ ಕೆಲಸದ ಸಮಯ ಕಡಿತ ಮಾಡುವ ವಿಚಾರಕ್ಕೆ ಮನವಿ ಮಾಡುವ ಮೂಲಕ ಸುದ್ದಿಯಾಗಿದ್ದರು. ಇದೀಗ ದೀಪಾವಳಿ ಹಬ್ಬದ ದಿನ ಮನೆಯಲ್ಲಿ ಪೂಜೆ ಮಾಡುವ ಫೋಟೋದೊಂದಿಗೆ ಮುದ್ದು ಮಗಳ ಮುಖವನ್ನ ಜಗತ್ತಿಗೆ ಪರಿಚಯಿಸಿದ್ದಾರೆ ದೀಪಿಕಾ ಪಡುಕೋಣೆ. ರಣ್‌ವೀರ್ ಸಿಂಗ್, ದೀಪಿಕಾ ಹಾಗೂ ದುವಾ ಕ್ಯಾಂಡಿಡ್ ಫೋಟೋದಲ್ಲಿ ಮಿಂಚಿದ್ದಾರೆ. ಅಮ್ಮ ದೀಪಿಕಾ ಹಾಗೂ ಮಗಳು ದುವಾ ಟ್ವಿನ್ನಿಂಗ್ ಕೆಂಪು ಬಣ್ಣದ ಸಲ್ವಾರ್ ಧರಿಸಿದ್ದಾರೆ. ದೀಪಿಕಾ ಮಗಳಿಗೆ ಖ್ಯಾತ ತಾರೆಯರಾದ ಸೋನಂ ಕಪೂರ್, ಬಿಪಾಶಾ ಬಸು, ಪೂಜಾ ಹೆಗಡೆ, ಶಿಲ್ಪಾ ಶೆಟ್ಟಿ, ದಿಯಾ ಮಿರ್ಜಾ, ನೇಹಾ ಧೂಪಿಯಾ ಸೇರಿದಂತೆ ಹಲವರು ಕಾಮೆಂಟ್ ಮಾಡಿ ಶುಭ ಹಾರೈಸಿದ್ದಾರೆ.



# ಬಾಲಿವುಡ್‌ನಲ್ಲಿ ಮತ್ತೆ ಗೆದ್ದ ರಶ್ಮಿಕಾ

**7 ಮಿಲಿಯನ್ ಲೈಕ್ಸ್**



**ಮೊದಲ ದಿನವೇ ಥಾಮಾ ಸಿನಿಮಾ ಭರ್ಜರಿ ಕಲೆಕ್ಷನ್**

ಮುಂಜ್ಯ', 'ಕುಕುಡ' ರೀತಿಯ ಹಾರರ್ ಸಿನಿಮಾಗಳನ್ನು ನಿರ್ದೇಶಿಸಿದ ಆದಿತ್ಯ ಸರ್ಪೋತ್‌ದಾರ್ ಅವರು 'ಥಾಮಾ' ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಚಿತ್ರವನ್ನು ಹಾರರ್ ಕಾಮಿಡಿ ಸಿನಿಮಾಗಳನ್ನು ನಿರ್ಮಿಸಿ ಗಮನ ಸೆಳೆದ ದಿನೇಶ್ ವಿಜನ್ ಅವರ 'ಮ್ಯಾಡಾಕ್' ನಿರ್ಮಾಣ ಮಾಡಿದೆ. ರಶ್ಮಿಕಾ ಇದರಿಂದ ಗೆದ್ದಿದ್ದಾರೆ.

ದೀಪಾವಳಿ ಪ್ರಯುಕ್ತ ರಶ್ಮಿಕಾ ಮಂದಣ್ಣ ಹಾಗೂ ಆಯುಷ್ಮಾನ್ ಖುರಾನಾ ನಟನೆಯ 'ಥಮ' ಸಿನಿಮಾ ಅಕ್ಟೋಬರ್ 21ರಂದು ರಿಲೀಸ್ ಆಯಿತು. ಸಾಮಾನ್ಯವಾಗಿ ಸಿನಿಮಾಗಳು ಗುರುವಾರ ಅಥವಾ ಶುಕ್ರವಾರ ರಿಲೀಸ್ ಆಗುತ್ತವೆ. ಆದರೆ, 'ಥಮ' ಚಿತ್ರತಂಡದವರು ಮಂಗಳವಾರ ಚಿತ್ರವನ್ನು ರಿಲೀಸ್ ಮಾಡಿ ಅಚ್ಚರಿ ಮೂಡಿಸಿದರು. ಆದರೆ, ಸಿನಿಮಾ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಗಳಿಕೆ ಮಾಡಿದೆ. ಈ ಚಿತ್ರದಿಂದ ರಶ್ಮಿಕಾ ಮಂದಣ್ಣ ಮತ್ತೆ ಗೆದ್ದು ಬೀಗಿದ್ದಾರೆ.

'ಥಮ' ಸಿನಿಮಾ ಹಾರರ್ ಕಾಮಿಡಿ ಶೈಲಿಯಲ್ಲಿ ಮೂಡಿ ಬಂದಿದೆ. ಇದರ ಜೊತೆಗೆ ಒಂದು ಲವ್ ಸ್ಟೋರಿ ಕೂಡ ಇದೆ. ಈ ಸಿನಿಮಾ ಬುಕ್ ಮೈ ಶೋ ನಲ್ಲಿ ಒಳ್ಳೆಯ ರೇಟಿಂಗ್ ಕೂಡ ಪಡೆದುಕೊಂಡಿದೆ. ಈ ಚಿತ್ರದ ಮೊದಲ ದಿನದ ಕಲೆಕ್ಷನ್ 24 ಕೋಟಿ ರೂಪಾಯಿ. ಮೊದಲ ದಿನವೇ ಸಿನಿಮಾ ಇಷ್ಟು ದೊಡ್ಡ ಕಲೆಕ್ಷನ್ ಮಾಡಿರುವುದರಿಂದ ಸಿನಿಮಾ ಗೆದ್ದಿರೋದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತಿದೆ.

ರಶ್ಮಿಕಾ ಮಂದಣ್ಣ ಬಾಲಿವುಡ್‌ನಲ್ಲಿ ಮುಟ್ಟಿದ್ದೆಲ್ಲವೂ ಚಿನ್ನ ಆಗುತ್ತಿದೆ. 'ಅನಿಮಲ್', 'ಛಾವ' ಸಿನಿಮಾಗಳು ಗೆಲುವು ಕಂಡಿವೆ. 'ಸಿಕಂದರ್' ಸಿನಿಮಾ ಸಾಧಾರಣ ಎನಿಸಿಕೊಂಡಿತು. ಈಗ 'ಥಮ' ಮೂಲಕ ರಶ್ಮಿಕಾ ಗೆದ್ದಿದ್ದಾರೆ. ಇತ್ತೀಚೆಗೆ ಸೋಲನ್ನೇ ಹೆಚ್ಚು ಕಂಡ ಆಯುಷ್ಮಾನ್ ಕೂಡ ಈ ಸಿನಿಮಾ ಮೂಲಕ ಗೆದ್ದಿದ್ದಾರೆ. 'ಮುಂಜ್ಯ', 'ಕುಕುಡ' ರೀತಿಯ ಹಾರರ್ ಸಿನಿಮಾಗಳನ್ನು ನಿರ್ದೇಶಿಸಿದ ಆದಿತ್ಯ ಸರ್ಪೋತ್‌ದಾರ್ ಅವರು 'ಥಾಮಾ' ಸಿನಿಮಾ ನಿರ್ದೇಶನ ಮಾಡಿದ್ದಾರೆ. ಈ ಚಿತ್ರವನ್ನು ಹಾರರ್ ಕಾಮಿಡಿ ಸಿನಿಮಾಗಳನ್ನು ನಿರ್ಮಿಸಿ ಗಮನ ಸೆಳೆದ ದಿನೇಶ್ ವಿಜನ್ ಅವರ 'ಮ್ಯಾಡಾಕ್' ನಿರ್ಮಾಣ ಮಾಡಿದೆ.

# ಟ್ರೋಫಿ ಕಳ್ಳ ನಖ್ವಿಯಿಂದ ದುರಹಂಕಾರದ ಉತ್ತರ

**ಜಯ್ ಶಾ ಮುಂದೆ ಟ್ರೋಫಿ ವಿವಾದ**

2025ರ ಏಷ್ಯಾಕಪ್ ಗೆದ್ದ ಭಾರತಕ್ಕೆ ಇಂದಿಗೂ ಟ್ರೋಫಿ ಸಿಕ್ಕಿಲ್ಲ. ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ, ಬಿಸಿಸಿಐಗೆ ಟ್ರೋಫಿ ಹಸ್ತಾಂತರಿಸಲು ನಿರಾಕರಿಸಿದ್ದಾರೆ. ದುಬೈನಿಂದ ಬಂದು ಟ್ರೋಫಿ ತೆಗೆದುಕೊಳ್ಳುವಂತೆ ನಖ್ವಿ ಹೇಳಿದರೆ, ಬಿಸಿಸಿಐ ಅದನ್ನು ತಿರಸ್ಕರಿಸಿದೆ. ಈಗ ಬಿಸಿಸಿಐ ಈ ವಿವಾದವನ್ನು ಐಸಿಸಿಗೆ ಕೊಂಡೊಯ್ಯಲು ನಿರ್ಧರಿಸಿದೆ. ಜಯ್ ಶಾ ಐಸಿಸಿ ಮುಖ್ಯಸ್ಥರಾಗಿರುವುದರಿಂದ ನಖ್ವಿಗೆ ಮುಜುಗರ ಎದುರಾಗಬಹುದು. 2025 ರ ಏಷ್ಯಾಕಪ್ ಫೈನಲ್‌ನಲ್ಲಿ ಪಾಕಿಸ್ತಾನವನ್ನು ಮಣಿಸಿ ಸೂರ್ಯಕುಮಾರ್ ನೇತೃತ್ವದ ಭಾರತ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಆದರೆ ಈ ಟೂರ್ನಿ ನಡೆದು ತಿಂಗಳಾಗುತ್ತ ಬಂದರೂ ಚಾಂಪಿಯನ್ ಟೀಂ ಇಂಡಿಯಾಕ್ಕೆ ಮಾತ್ರ ಟ್ರೋಫಿಯನ್ನು ಎತ್ತಿಹಿಡಿಯುವ ಅವಕಾಶ ಸಿಕ್ಕಿಲ್ಲ. ಪಿಸಿಬಿ ಹಾಗೂ ಎಸಿಸಿ ಅಧ್ಯಕ್ಷ ಮೊಹ್ಸಿನ್ ನಖ್ವಿಯಿಂದ ಭಾರತ ತಂಡ ಟ್ರೋಫಿ ಸ್ವೀಕರಿಸಲು ನಿರಾಕರಿಸಿತ್ತು. ಇದರಿಂದ ಮುಜುಗರಕ್ಕೊಳಗಾಗಿರುವ ನಖ್ವಿ, ಏಷ್ಯಾಕಪ್ ಟ್ರೋಫಿಯನ್ನು ಭಾರತಕ್ಕೆ ನೀಡಲು ನಿರಾಕರಿಸಿದ್ದರು.

ಹೀಗಾಗಿ ಟ್ರೋಫಿಯನ್ನು ಪ್ರಸ್ತುತ ಎಸಿಸಿ ಕಚೇರಿಯಲ್ಲಿ ಇರಿಸಲಾಗಿದೆ. ಇದೀಗ ಕೇಳಿಬಂದಿರುವ ಮಾಹಿತಿ ಪ್ರಕಾರ, ಬಿಸಿಸಿಐ ಮೊಹ್ಸಿನ್ ನಖ್ವಿಗೆ ಇಮೇಲ್ ಕಳುಹಿಸಿದ್ದು, ಟ್ರೋಫಿಯನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಒತ್ತಾಯಿಸಿದೆ. ಆದರೆ ನಖ್ವಿ ಮಾತ್ರ ಟ್ರೋಫಿ ಹಸ್ತಾಂತರಕ್ಕೆ ನಾನಾ ಷರತ್ತುಗಳನ್ನು ಹಾಕುತ್ತಿದ್ದಾರೆ. ನಖ್ವಿ ಷರತ್ತುಗಳಿಗೆ ಒಪ್ಪದ ಬಿಸಿಸಿಐ ಈಗ ಈ ವಿಷಯವನ್ನು ಐಸಿಸಿಗೆ ಕೊಂಡೊಯ್ಯಲು ಯೋಜಿಸುತ್ತಿದೆ ಎಂದು ವರದಿಯಾಗಿದೆ.



**ಬಿಸಿಸಿಐ ವಿರುದ್ಧ ನಖ್ವಿ ಮೊಂಡುತನ:** ಬಿಸಿಸಿಐ ಕಳುಹಿಸಿರುವ ಇಮೇಲ್‌ಗೆ ಉತ್ತರಿಸಿರುವ ಮೊಹ್ಸಿನ್ ನಖ್ವಿ, ದುಬೈನಲ್ಲಿರುವ ಎಸಿಸಿ ಪ್ರಧಾನ ಕಚೇರಿಯಿಂದ ಬಿಸಿಸಿಐ ಅಧಿಕಾರಿಗಳು ಹಾಗೂ ಲಭ್ಯವಿರುವ ಆಟಗಾರರು ಟ್ರೋಫಿಯನ್ನು ತನ್ನ ಕೈನಿಂದ ಪಡೆಯಬೇಕು ಎಂದಿದ್ದಾರೆ ಎಂದು ವರದಿಯಾಗಿದೆ. ಪಾಕಿಸ್ತಾನದ ಮಾಧ್ಯಮಗಳಿಗೆ ಈ ಬಗ್ಗೆ ಹೇಳಿಕೆ ನೀಡಿರುವ ನಖ್ವಿ, 'ಬಿಸಿಸಿಐ ಜೊತೆ ಹಲವಾರು ಪತ್ರಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ನವೆಂಬರ್ 10 ರಂದು ದುಬೈನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಟ್ರೋಫಿಯನ್ನು ಸ್ವೀಕರಿಸಲು ಭಾರತೀಯ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಅವರ ಆಟಗಾರರನ್ನು ಬಿಸಿಸಿಐ ಅಧಿಕಾರಿ ರಾಜೀವ್ ಶುಕ್ಲಾ ಅವರೊಂದಿಗೆ ಆಹ್ವಾನಿಸಲು ನಾವು ಸಿದ್ಧರಿದ್ದೇವೆ ಎಂದಿದ್ದಾರೆ.

**ಒಪ್ಪದ ಬಿಸಿಸಿಐ:** ಆದರೆ ನಖ್ವಿ ಅವರ ಈ ಆಹ್ವಾನವನ್ನು ಬಿಸಿಸಿಐ ನಿರಾಕರಿಸಿದ್ದು, ಈ ವಿಷಯವನ್ನು ಈಗ ಐಸಿಸಿ ಸಭೆಯಲ್ಲಿ ಪ್ರಸ್ತಾಪಿಸುವ ಸಾಧ್ಯತೆಯಿದೆ. 'ಬಿಸಿಸಿಐ ಕಾರ್ಯದರ್ಶಿ, ಬಿಸಿಸಿಐನ ಎಸಿಸಿ ಪ್ರತಿನಿಧಿ ರಾಜೀವ್ ಶುಕ್ಲಾ ಮತ್ತು ಶ್ರೀಲಂಕಾ ಕ್ರಿಕೆಟ್ ಮತ್ತು ಅಫ್ಘಾನಿಸ್ತಾನ ಸೇರಿದಂತೆ ಇತರ ಸದಸ್ಯ ಮಂಡಳಿಗಳ ಪ್ರತಿನಿಧಿಗಳು ಕಳೆದ ವಾರ ಎಸಿಸಿ ಅಧ್ಯಕ್ಷರಿಗೆ ಭಾರತಕ್ಕೆ ಟ್ರೋಫಿಯನ್ನು ಹಸ್ತಾಂತರಿಸುವ ಬಗ್ಗೆ ಇಮೇಲ್ ಮಾಡಿದ್ದಾರೆ' ಎಂದು ಎಸಿಸಿ ಮೂಲವೊಂದು ಪಿಟಿಐಗೆ ತಿಳಿಸಿದೆ.

## ಆಫ್ರಿಕಾ ಬೌಲರ್‌ಗಳ ಅಬ್ಬರದ ಬ್ಯಾಟಿಂಗ್‌ಗೆ

# ಕಕ್ಕಾಬಿಕ್ಕಿಯಾದ ಪಾಕಿಸ್ತಾನ

ರಾವಲ್ಪಿಂಡಿ ಟೆಸ್ಟ್‌ನಲ್ಲಿ ಕಗಿಸೊ ರಬಾಡ ಕೇವಲ 61 ಎಸೆತಗಳಲ್ಲಿ 71 ರನ್ ಗಳಿಸುವ ಮೂಲಕ ಪಾಕಿಸ್ತಾನವನ್ನು ದಿಗ್ಭ್ರಮೆಗೊಳಿಸಿದರು. ಅವರ ಅಬ್ಬರದ ಅರ್ಧಶತಕದಿಂದ ದಕ್ಷಿಣ ಆಫ್ರಿಕಾ ತಂಡ 71 ರನ್‌ಗಳ ಮಹತ್ವದ ಮುನ್ನಡೆ ಸಾಧಿಸಿತು. ಕೇಶವ್ ಮಹಾರಾಜ್ ಮತ್ತು ಮುತ್ತುಸಾಮಿ ಅವರ ಕೊಡುಗೆಯೂ ತಂಡಕ್ಕೆ ಬಲ ನೀಡಿತು. ಪ್ರಮುಖ ವಿಕೆಟ್ ಕಳೆದುಕೊಂಡರೂ ರಬಾಡ ಇನ್ನಿಂಗ್ಸ್ ದಕ್ಷಿಣ ಆಫ್ರಿಕಾ ತಂಡವನ್ನು ಬಲಪಡಿಸಿತು.

ಪಾಕಿಸ್ತಾನ ವಿರುದ್ಧ ರಾವಲ್ಪಿಂಡಿಯಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ ಅದ್ಭುತ ಇನ್ನಿಂಗ್ಸ್ ಆಡುವ ಮೂಲಕ ಆತಿಥೇಯ ತಂಡವನ್ನು ದಿಗ್ಭ್ರಮೆಗೊಳಿಸಿದ್ದಾರೆ. ರಬಾಡ ಕೇವಲ 38 ಎಸೆತಗಳಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿಗಳ ಸಹಾಯದಿಂದ ಅರ್ಧಶತಕ ಗಳಿಸಿದರು. ಅಂತಿಮವಾಗಿ 61 ಎಸೆತಗಳಲ್ಲಿ 71 ರನ್ ಬಾರಿಸಿದ ರಬಾಡ ಅವರ ಈ ಇನ್ನಿಂಗ್ಸ್ ಆಧಾರದ ಮೇಲೆ, ದಕ್ಷಿಣ ಆಫ್ರಿಕಾ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 71 ರನ್‌ಗಳ ಮುನ್ನಡೆ ಸಾಧಿಸಿದೆ. ಒಂದು ಹಂತದಲ್ಲಿ, ದಕ್ಷಿಣ ಆಫ್ರಿಕಾ ಕೇವಲ 235 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿತ್ತು. ಆದರೆ ಕೇಶವ್ ಮಹಾರಾಜ್, ಮುತ್ತುಸಾಮಿ ಮತ್ತು ರಬಾಡ ಅವರ ಅಮೋಘ ಇನ್ನಿಂಗ್ಸ್ ತಂಡವನ್ನು ಮುನ್ನಡೆ ಸಾಧಿಸುವಂತೆ ಮಾಡಿತು.



**ಪಾಕಿಸ್ತಾನಕ್ಕೆ ಆಘಾತ ನೀಡಿದ ರಬಾಡ**

ಕಗಿಸೊ ರಬಾಡ ಅವರ ಅರ್ಧಶತಕದ ವಿಶೇಷತೆ ಏನೆಂದರೆ, 11 ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಬಂದ ರಬಾಡ ಬಿರುಸಿನ ಇನ್ನಿಂಗ್ಸ್ ಆಡಿದರು. ರಬಾಡ ಅವರ ಇನ್ನಿಂಗ್ಸ್‌ನಲ್ಲಿ ನಾಲ್ಕು ಸಿಕ್ಸರ್‌ಗಳು ಮತ್ತು ನಾಲ್ಕು ಬೌಂಡರಿಗಳು ಸೇರಿದ್ದವು. ಇದು ಮಾತ್ರವಲ್ಲದೆ ರಬಾಡ, ಮುತ್ತುಸಾಮಿ ಅವರೊಂದಿಗೆ 98 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡರು. ಆದರೆ ರಬಾಡ ಅವರ ವಿಕೆಟ್ ಪತನದಿಂದಾಗಿ ಮುತ್ತುಸಾಮಿ ಶತಕ ವಂಚಿತರಾದರು. ಆದಾಗ್ಯೂ, ಮುತ್ತುಸಾಮಿ 89 ರನ್‌ಗಳ ಅಜೇಯ ಇನ್ನಿಂಗ್ಸ್ ಆಡಿದರೆ, ಕೇಶವ್ ಮಹಾರಾಜ್ ಕೂಡ 53 ಎಸೆತಗಳಲ್ಲಿ 30 ರನ್ ಕಲೆಹಾಕಿದರು. ಉಳಿದಂತೆ ಆಫ್ರಿಕಾ ಪರ ಜಾರ್ಜಿ 55 ಮತ್ತು ಸ್ಟಬ್ಸ್ 76 ರನ್‌ಗಳ ಕಾಣಿಕೆ ನೀಡಿದರು.

# ಈ ಒಂದು ದಾಖಲೆ ಮುರಿಯಲು ಕೊಹ್ಲಿಗೆ ಕೊನೆಯ ಅವಕಾಶ



ವಿರಾಟ್ ಕೊಹ್ಲಿಗೆ ಇದು ಕೊನೆಯ ಆಸ್ಟ್ರೇಲಿಯಾ ಪ್ರವಾಸ. ಏಕೆಂದರೆ ಕಿಂಗ್ ಕೊಹ್ಲಿ 2027ರ ಏಕದಿನ ವಿಶ್ವಕಪ್ ಬಳಿಕ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಆಗುವುದು ಖಚಿತ.

ಇತ್ತ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಮುಂದುವರೆದಿರುವ ಕೊಹ್ಲಿ ಮುಂದಿನ ವರ್ಷ ಆಸ್ಟ್ರೇಲಿಯಾದಲ್ಲಿ ಕಣಕ್ಕಿಳಿಯುವುದಿಲ್ಲ. ಹೀಗಾಗಿ ಆಸ್ಟ್ರೇಲಿಯಾ ಪಿಚ್‌ನಲ್ಲಿ ಭರ್ಜರಿ ದಾಖಲೆ ಬರೆಯಲು ವಿರಾಟ್ ಕೊಹ್ಲಿಗೆ ಇದುವೇ ಕೊನೆಯ ಅವಕಾಶ. ಭಾರತ ಮತ್ತು ಆಸ್ಟ್ರೇಲಿಯಾ ನಡುವಣ 2ನೇ ಏಕದಿನ ಪಂದ್ಯವು ನಾಳೆ ನಡೆಯಲಿದೆ. ಅಡಿಲೇಡ್‌ನ ದಿ ಓವಲ್ ಮೈದಾನದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಇತಿಹಾಸ ನಿರ್ಮಿಸುವ ಅವಕಾಶವೊಂದು ವಿರಾಟ್ ಕೊಹ್ಲಿ ಮುಂದಿದೆ. ಅದು ಕೂಡ ಭರ್ಜರಿ ಶತಕ ಸಿಡಿಸುವ ಮೂಲಕ..!

ಹೌದು, ಆಸ್ಟ್ರೇಲಿಯಾ ಮೈದಾನದಲ್ಲಿ ಅತ್ಯಧಿಕ ಸೆಂಚುರಿ ಸಿಡಿಸಿದ ವಿದೇಶಿಗನೆಂಬ ದಾಖಲೆ ಬರೆಯಲು ಕಿಂಗ್ ಕೊಹ್ಲಿಗೆ ಒಂದು ಶತಕದ ಅವಶ್ಯಕತೆಯಿದೆ. ಆಸ್ಟ್ರೇಲಿಯಾ ವಿರುದ್ಧದ 2ನೇ ಏಕದಿನ ಪಂದ್ಯದಲ್ಲಿ ಕೊಹ್ಲಿ ಬ್ಯಾಟ್‌ನಿಂದ ಮೂರಂಕಿ ಮೊತ್ತ ಮೂಡಿಬಂದರೆ, ಆಸೀಸ್ ಪಿಚ್‌ನಲ್ಲಿ ಅತೀ ಹೆಚ್ಚು ಶತಕ ಬಾರಿಸಿದ ವಿದೇಶಿ ದಾಂಡಿಗ ಎಂಬ ದಾಖಲೆ ವಿರಾಟ್ ಕೊಹ್ಲಿ ಪಾಲಾಗಿದೆ. ಸದ್ಯ ಈ ದಾಖಲೆಯನ್ನು ವಿರಾಟ್ ಕೊಹ್ಲಿ ಇಂಗ್ಲೆಂಡ್‌ನ ಜ್ಯಾಕ್ ಹಾಬ್ಸ್ ಅವರೊಂದಿಗೆ ಹಂಚಿಕೊಂಡಿದ್ದಾರೆ. ಇಂಗ್ಲೆಂಡ್ ತಂಡದ ಮಾಜಿ ಆಟಗಾರ ಜ್ಯಾಕ್ ಹಾಬ್ಸ್ ಮೆಲ್ಬೋರ್ನ್ ಕ್ರಿಕೆಟ್ ಗ್ರೌಂಡ್‌ನಲ್ಲಿ 5 ಟೆಸ್ಟ್ ಸೆಂಚುರಿ ಸಿಡಿಸಿದ್ದಾರೆ. ಈ ಮೂಲಕ ಆಸ್ಟ್ರೇಲಿಯಾದ ಒಂದೇ ಮೈದಾನದಲ್ಲಿ ಅತೀ ಹೆಚ್ಚು ಶತಕ ಬಾರಿಸಿದ ವಿದೇಶಿ ಬ್ಯಾಟರ್ ಎಂಬ ದಾಖಲೆ ನಿರ್ಮಿಸಿದ್ದಾರೆ. ಇತ್ತ ಅಡಿಲೇಡ್ ಓವಲ್ ಮೈದಾನದಲ್ಲಿ ವಿರಾಟ್ ಕೊಹ್ಲಿ ಈವರೆಗೆ 5 ಶತಕಗಳನ್ನು ಬಾರಿಸಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ 2 ಹಾಗೂ ಟೆಸ್ಟ್‌ನಲ್ಲಿ 3 ಸೆಂಚುರಿ ಸಿಡಿಸುವ ಮೂಲಕ ಕಿಂಗ್ ಕೊಹ್ಲಿ ಜ್ಯಾಕ್ ಹಾಬ್ಸ್ ದಾಖಲೆಯನ್ನು ಸರಿಗಟ್ಟಿದ್ದಾರೆ. ಇದೀಗ 2ನೇ ಏಕದಿನ ಪಂದ್ಯದಲ್ಲಿ ಸೆಂಚುರಿ ಸಿಡಿಸಿದರೆ ಆಸ್ಟ್ರೇಲಿಯಾದ ಒಂದೇ ಮೈದಾನದಲ್ಲಿ ಅತೀ ಹೆಚ್ಚು ಶತಕ ಬಾರಿಸಿದ ವಿದೇಶಿ ಬ್ಯಾಟರ್ ಎನಿಸಿಕೊಳ್ಳಲಿದ್ದಾರೆ.

ಅಷ್ಟೇ ಅಲ್ಲದೆ ಆಸ್ಟ್ರೇಲಿಯಾದ ಒಂದೇ ಮೈದಾನದಲ್ಲಿ 1000 ರನ್ ಕಲೆಹಾಕಿದ ಮೊದಲ ವಿದೇಶಿ ಬ್ಯಾಟರ್ ಎನಿಸಿಕೊಳ್ಳಲು ವಿರಾಟ್ ಕೊಹ್ಲಿಗೆ ಬೇಕಿರುವುದು ಕೇವಲ 25 ರನ್‌ಗಳು ಮಾತ್ರ. ಅಂದರೆ ಅಡಿಲೇಡ್‌ನಲ್ಲಿ 17 ಇನ್ನಿಂಗ್ಸ್ ಆಡಿರುವ ಕಿಂಗ್ ಕೊಹ್ಲಿ ಈವರೆಗೆ 975 ರನ್ ಕಲೆಹಾಕಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ದ್ವಿತೀಯ ಏಕದಿನ ಪಂದ್ಯದಲ್ಲಿ 25 ರನ್ ಗಳಿಸಿದರೆ ಕಾಂಗರೂನಾಡಿನ ಒಂದೇ ಮೈದಾನದಲ್ಲಿ ಸಾವಿರ ರನ್ ಕಲೆಹಾಕಿದ ಮೊದಲ ವಿದೇಶಿ ಆಟಗಾರ ಎನಿಸಿಕೊಳ್ಳಲಿದ್ದಾರೆ.



# ಆಸ್ಟ್ರೇಲಿಯಾ ವಿರುದ್ಧ ಭಾರತದ ಪ್ಲೇಯಿಂಗ್11

**2ನೇ ಪಂದ್ಯದ ಗೆಲುವಿಗೆ ಟೀಂ ಇಂಡಿಯಾ ಕಾತರ**

ಸರಣಿ ಗೆಲುವಿನ ಆಸೆಯನ್ನು ಜೀವಂತವಿರಿಸಿಕೊಳ್ಳಲು ಟೀಮ್ ಇಂಡಿಯಾ ದ್ವಿತೀಯ ಪಂದ್ಯವನ್ನು ಗೆಲ್ಲಲೇಬೇಕು. ಹೀಗಾಗಿ ಈ ಪಂದ್ಯದಲ್ಲಿ ಟೀಮ್ ಇಂಡಿಯಾ ಸ್ಪಿನ್ ಅಸ್ತ್ರವನ್ನು ಪ್ರಯೋಗಿಸುವ ಸಾಧ್ಯತೆಯಿದೆ. ಅದರಂತೆ ದ್ವಿತೀಯ ಏಕದಿನ ಪಂದ್ಯದಲ್ಲಿ ಹರ್ಷಿತ್ ರಾಣಾ ಬದಲಿಗೆ ಕುಲ್ದೀಪ್ ಯಾದವ್ ಅವರನ್ನು ಕಣಕ್ಕಿಳಿಸಬಹುದು.

ಏಕೆಂದರೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಕುಲ್ದೀಪ್ ಯಾದವ್ ಉತ್ತಮ ಸ್ಪಿನ್ ಮೋಡಿ ಮಾಡಿದ್ದರು. ಕಳೆದ ವೆಸ್ಟ್ ಇಂಡೀಸ್ ಸರಣಿಯಲ್ಲೂ ಉತ್ತಮ ಬೌಲಿಂಗ್ ಸಂಘಟಿಸಿದ್ದರು. ಇದಾಗ್ಯೂ, ಅವರನ್ನು ಮೊದಲ ಪಂದ್ಯದಲ್ಲಿ ಕಣಕ್ಕಿಳಿಸಿರಲಿಲ್ಲ. ಬದಲಾಗಿ ಹರ್ಷಿತ್ ರಾಣಾ ಅವರನ್ನು ಮೂರನೇ ವೇಗಿಯಾಗಿ ಆಡಿಸಲಾಗಿತ್ತು. ಆದರೆ ಹರ್ಷಿತ್ ಕಡೆಯಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ಹೀಗಾಗಿ ಅಡಿಲೇಡ್ ಪಂದ್ಯದಲ್ಲಿ ಹರ್ಷಿತ್ ಬದಲಿಗೆ ಕುಲ್ದೀಪ್ ಯಾದವ್‌ಗೆ ಚಾನ್ಸ್ ನೀಡುವ ಸಾಧ್ಯತೆಯಿದೆ. ಇನ್ನುಳಿದಂತೆ ಆರಂಭಿಕರಾಗಿ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಇನಿಂಗ್ಸ್ ಆರಂಭಿಸುವುದು ಖಚಿತ.

ಹಾಗೆಯೇ ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಕಣಕ್ಕಿಳಿದರೆ, ನಾಲ್ಕನೇ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ಬ್ಯಾಟ್ ಬೀಸಲಿದ್ದಾರೆ. ವಿಕೆಟ್ ಕೀಪರ್ ಬ್ಯಾಟರ್ ಆಗಿ ಕೆಎಲ್ ರಾಹುಲ್ ಐದನೇ ಕ್ರಮಾಂಕದಲ್ಲಿ ಆಡಲಿದ್ದಾರೆ. ಇನ್ನು ಆಲ್‌ರೌಂಡರ್‌ಗಳಾಗಿ ನಿತೀಶ್ ಕುಮಾರ್ ರೆಡ್ಡಿ, ಅಕ್ಷರ್ ಪಟೇಲ್ ಹಾಗೂ ವಾಷಿಂಗ್ಟನ್ ಸುಂದರ್ ಕಣಕ್ಕಿಳಿಯಬಹುದು. ಹಾಗೆಯೇ ಬೌಲರ್‌ಗಳಾಗಿ ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್ ಹಾಗೂ ಕುಲ್ದೀಪ್ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಿದೆ.



## ಮೊದಲ ಪಂದ್ಯದ ಮೊದಲ ಇನಿಂಗ್ಸ್‌ನಲ್ಲೇ

# ದಾಖಲೆ ಬರೆದ ಅಫ್ಘಾನ್ ವೇಗಿ

ಅಫ್ಘಾನಿಸ್ತಾನ್ ತಂಡದ ಯುವ ವೇಗಿ ಝಿಯಾವುರ್ ರೆಹಮಾನ್ ಶರೀಫಿ ಚೊಚ್ಚಲ ಪಂದ್ಯದಲ್ಲೇ ಕಮಾಲ್ ಮಾಡಿದ್ದಾರೆ. ಹರಾರೆಯಲ್ಲಿ ನಡೆಯುತ್ತಿರುವ ಝಿಂಬಾಬ್ವೆ ವಿರುದ್ಧದ ಟೆಸ್ಟ್ ಪಂದ್ಯದ ಮೂಲಕ ಅಂತಾರಾಷ್ಟ್ರೀಯ ಕೆರಿಯರ್ ಆರಂಭಿಸಿರುವ ಝಿಯಾವುರ್ ರೆಹಮಾನ್ ಮೊದಲ ಪಂದ್ಯದಲ್ಲೇ 7 ವಿಕೆಟ್ ಉರುಳಿಸಿದ್ದಾರೆ. ಅದು ಕೂಡ ಮೊದಲ ಇನಿಂಗ್ಸ್‌ನಲ್ಲಿ ಎಂಬುದು ವಿಶೇಷ. ಈ ಪಂದ್ಯದಲ್ಲಿ 32 ಓವರ್‌ಗಳನ್ನು ಎಸೆದ ಝಿಯಾವುರ್ ರೆಹಮಾನ್ 97 ರನ್ ನೀಡಿ 7 ವಿಕೆಟ್ ಕಬಳಿಸಿದ್ದಾರೆ. ಈ ಮೂಲಕ ಅಫ್ಘಾನಿಸ್ತಾನ್ ಪರ ಚೊಚ್ಚಲ ಟೆಸ್ಟ್‌ನಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿಕೊಂಡಿದ್ದಾರೆ.ಹಾಗೆಯೇ ಪಾದಾರ್ಪಣೆ ಪಂದ್ಯದಲ್ಲಿ ಅತ್ಯಧಿಕ ವಿಕೆಟ್ ಕಬಳಿಸಿದ ಏಷ್ಯಾದ 2ನೇ ಬೌಲರ್ ಎಂಬ ದಾಖಲೆಯನ್ನು ಸಹ ಝಿಯಾವುರ್ ರೆಹಮಾನ್ ತಮ್ಮದಾಗಿಸಿಕೊಂಡಿದ್ದಾರೆ. ಈ ಪಟ್ಟಿಯಲ್ಲಿ 1988 ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 8 ವಿಕೆಟ್ ಕಬಳಿಸಿದ್ದ ಭಾರತದ ನರೇಂದ್ರ ಹೀರ್ವಾನಿ ಮೊದಲ ಸ್ಥಾನದಲ್ಲಿದ್ದಾರೆ. ಇದೀಗ ಮೊದಲ ಮ್ಯಾಚ್‌ನಲ್ಲೇ ಏಳು ವಿಕೆಟ್ ಉರುಳಿಸಿ ಝಿಯಾವುರ್ ರೆಹಮಾನ್ ಈ ದಾಖಲೆ ಪಟ್ಟಿಯಲ್ಲಿ ದ್ವಿತೀಯ ಸ್ಥಾನವನ್ನು ಅಲಂಕರಿಸಿದ್ದಾರೆ. ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಕೇವಲ 127 ರನ್‌ಗಳಿಸಿ ಆಲೌಟ್ ಆಗಿತ್ತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆಡಿದ ಝಿಂಬಾಬ್ವೆ ತಂಡ 359 ರನ್‌ಗಳನ್ನು ಕಲೆಹಾಕಿದೆ. ಅಫ್ಘಾನಿಸ್ತಾನ್ ತಂಡವು ದ್ವಿತೀಯ ದಿನದಾಟದ ಅಂತ್ಯಕ್ಕೆ 1 ವಿಕೆಟ್ ಕಳೆದುಕೊಂಡು 34 ರನ್ ಕಲೆಹಾಕಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966